# ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 27 | ಜುಲೈ 1–7, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಪಶ್ಚಿಮ ಬಂಗಾಲದಲ್ಲಿ ಇಬ್ಬರು ಸಿಪಿಐ(ಎಂ) ಯುವ ಕಾರ್ಯಕರ್ತರ ಹತ್ಯೆ





## ಬಿಜೆಪಿ ಹೊಟ್ಟೆಯುರಿಗೆ ಇಂಧನವಾಗುತ್ತಿರುವ 'ಗ್ರಾಮ ವಾಸ್ತವ್ಯ'



## ಬಲಪಂಥೀಯ ಕ್ರೋಢೀಕರಣಕ್ಕೆ ಎಡಪಂಥ ಮಾತ್ರವೇ ತಡೆಯೊಡ್ಡಬಲ್ಲದು



## 'ಒಂದು ದೇಶ ಒಂದು ಚುನಾವಣೆ' ರಾಜಕೀಯ ಪಕ್ಷಗಳ ಜಂಟಿ ಸಭೆಯಲ್ಲಿ ಸೀತಾರಾಂ ಯೆಚೂರಿ





## ಬೆಳ್ತಂಗಡಿ: ದಶಕಗಳ ಹೋರಾಟಕ್ಕೆ ಸಂದ ಜಯ ಕತ್ತಲ ಕಾಡೊಳಗೆ ಬೆಳಗಿತು ಕರೆಂಟ್!

# ‘ಒಂದು ದೇಶ ಒಂದು ಚುನಾವಣೆ’-ಸಂವಿಧಾನಿಕ ಯೋಜನೆಯನ್ನು ತುಳಿದು ಹಾಕುವ ಮೂಲಕ ಮಾತ್ರವೇ ಸಾಧ್ಯ

## ಇಂತಹ ಯಾವುದೇ ಕೃತಕ ಪ್ರಯತ್ನವನ್ನು ಸಂಪೂರ್ಣವಾಗಿ ವಿರೋಧಿಸುತ್ತೇವೆ- ಸೀತಾರಾಮ್ ಯೆಚುರಿ

ಭಾರತ ಹಲವಾರು ವೈವಿಧ್ಯತೆಗಳನ್ನು ಹೊಂದಿರುವ ಒಂದು ವಿಶಾಲ ದೇಶ, ಇಲ್ಲಿ ಒಂದು ಒಕ್ಕೂಟ ವ್ಯವಸ್ಥೆಯಿಂದ ಮಾತ್ರವೇ ರಾಜಕೀಯ ಪ್ರಜಾಪ್ರಭುತ್ವವನ್ನು ಕಾಯ್ದುಕೊಳ್ಳಲು ಸಾಧ್ಯ. ರಾಜ್ಯಗಳಲ್ಲಿ ವಿಭಿನ್ನ ಸಮಯಗಳಲ್ಲಿ ಚುನಾವಣೆಗಳು ನಡೆಯುವುದು ಒಕ್ಕೂಟ ವ್ಯವಸ್ಥೆಯ ಒಂದು ಆಯಾಮ. ಆದ್ದರಿಂದ, ಏಕಕಾಲದಲ್ಲಿ ಚುನಾವಣೆಗಳು ನಡೆಯುವಂತೆ ಮಾಡುವುದು ಪ್ರಸಕ್ತ ಸಂಸದೀಯ ವ್ಯವಸ್ಥೆಯ ಸಂವಿಧಾನಿಕ ಯೋಜನೆಯನ್ನು ತುಳಿದು ಹಾಕುವ ಮೂಲಕ ಮಾತ್ರವೇ ಸಾಧ್ಯವಾದ್ದರಿಂದ, ನಾವು ಇಂತಹ ಯಾವುದೇ ಕೃತಕ ಪ್ರಯತ್ನವನ್ನು ಸಂಪೂರ್ಣವಾಗಿ ವಿರೋಧಿಸುತ್ತೇವೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಸರ್ವ ಪಕ್ಷಗಳ ಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಪ್ರಧಾನ ಮಂತ್ರಿಗಳು ಜೂನ್ 19ರಂದು ಸಂಸತ್ತಿನಲ್ಲಿ ಪ್ರತಿನಿಧಿಸಲ್ಪಟ್ಟಿರುವ ಎಲ್ಲ ರಾಜಕೀಯ ಪಕ್ಷಗಳ ಮುಖ್ಯಸ್ಥರ ಒಂದು ಸಭೆಯನ್ನು ಕರೆದಿದ್ದರು. 1. ಸಂಸತ್ತಿನ ಉತ್ಪಾದಕತೆಯನ್ನು ಉತ್ತಮಪಡಿಸಲು ಮಾರ್ಗೋಪಾಯಗಳು; 2. ಒಂದು ದೇಶ ಒಂದು ಚುನಾವಣೆ; 3. ಸ್ವಾತಂತ್ರ್ಯದ 75ನೇ ವರ್ಷದಲ್ಲಿ ಒಂದು ನವಭಾರತವನ್ನು ಕಟ್ಟುವುದು; 4. ಮಹಾತ್ಮ ಗಾಂಧಿಯವರ 150ನೇ ವಾರ್ಷಿಕ ಜನ್ಮದಿನಾಚರಣೆಯ ಕಾರ್ಯಕ್ರಮಗಳು ಮತ್ತು ಬದ್ಧತೆಗಳು; ಹಾಗೂ 5. ಮಹತ್ವಾಕಾಂಕ್ಷೆಯ ಜಿಲ್ಲೆಗಳ ಅಭಿವೃದ್ಧಿ ಈ ಸಭೆಯ ಮುಖ್ಯ ಅಜೆಂಡಾವಾಗಿತ್ತು.

ಸೀತಾರಾಮ್ ಯೆಚುರಿಯವರು ಸಿಪಿಐ(ಎಂ) ಪರವಾಗಿ ಈ ವಿಷಯಗಳ ಮೇಲೆ ಮತ್ತು ಇತರ ತುರ್ತು ಗಮನ ನೀಡಬೇಕಾದ ವಿಷಯಗಳ ಮೇಲಿನ ಒಂದು ಟಿಪ್ಪಣಿಯನ್ನು ಸಭೆಯಲ್ಲಿ ಪ್ರಸ್ತುತ ಪಡಿಸಿದರು. (ಈ ಟಿಪ್ಪಣಿಯ ಪೂರ್ಣ ಪಾಟವನ್ನು ಪುಟ 9–10ರಲ್ಲಿ ನೋಡಿ).

ಆದರೆ ಮಾಧ್ಯಮಗಳಲ್ಲಿ ಈ ಸಭೆಯನ್ನು ಕುರಿತಂತೆ ಪ್ರಧಾನಿಗಳ ಹೊಸ ಘೋಷಣೆಯಾದ “ಒಂದು ದೇಶ ಒಂದು ಚುನಾವಣೆ” ಎಂಬುದೇ ಹೆಚ್ಚಿನ ಪ್ರಚಾರ ಪಡೆದಿದೆ.

ಸಂಸತ್ತಿಗೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವಲ್ಲಿ ಇರುವ ತಾಂತ್ರಿಕ ಪ್ರಶ್ನೆಗಳಷ್ಟೇ ಅಲ್ಲದೆ, ಇದಕ್ಕೆ ನಮ್ಮ ವಿರೋಧ, ಇದು ಮೂಲಭೂತವಾಗಿ ಒಕ್ಕೂಟ–ವಿರೋಧಿ. ಪ್ರಜಾಪ್ರಭುತ್ವ–ವಿರೋಧಿ ಮತ್ತು ಸಂವಿಧಾನದಲ್ಲಿ ಆದೇಶಿಸಿರುವ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಬುಡಕ್ಕೇ ಪ್ರಹಾರ ಮಾಡುವಂತದ್ದು ಎಂಬ ಸಂಗತಿಯನ್ನು ಆಧರಿಸಿದೆ ಎಂದು ಯೆಚುರಿ ಸಿಪಿಐ(ಎಂ) ಕಣ್ಣೋಟವನ್ನು ಸ್ಪಷ್ಟಪಡಿಸುತ್ತ ಈ ಬಗ್ಗೆ ಚರ್ಚೆಯಲ್ಲಿರುವ ವಿಭಿನ್ನ ಪ್ರಸ್ತಾವಗಳ ವಿಮರ್ಶೆಯನ್ನು ಪ್ರಸ್ತುತ ಪಡಿಸಿದರು, ಏಕಕಾಲದಲ್ಲಿ ಚುನಾವಣೆಗಳ ಹೆಸರಿನಲ್ಲಿ ಈ ಎಲ್ಲ ಪ್ರಸ್ತಾವಗಳು ರಾಜ್ಯಪಾಲರ ಮತ್ತು ಕೇಂದ್ರದ ಹಸ್ತಕ್ಷೇಪದ ಪಾತ್ರವನ್ನು ಹೆಚ್ಚಿಸುತ್ತವೆ ಎಂದು ವಿವರಿಸಿದರು.

**ಸಂಸತ್ತಿನ ಉತ್ಪಾದಕತೆಯನ್ನು ಉತ್ತಮಪಡಿಸಲು ಮಾರ್ಗೋಪಾಯಗಳ** ಬಗ್ಗೆ ಮಾತಾಡುತ್ತ ಆಧಾರಭೂತ ಅಂಶವೆಂದರೆ ಅದು ಹೆಚ್ಚು ಬಾರಿ ಸಭೆ ಸೇರಬೇಕು, ಹೊಸ ವರ್ಷದ ಆರಂಭದ ಮೊದಲು ಸಂಸತ್ತಿನ ಅಧಿವೇಶನಗಳ ಸಮಯ ಪಟ್ಟಿಯನ್ನು ಪ್ರಕಟಿಸಬೇಕು. ಸಂಸತ್ತು ಕಟ್ಟುನಿಟ್ಟಾಗಿ ಅದರ ನಿಯಮಗಳ ಪ್ರಕಾರ ಕಾರ್ಯನಿರ್ವಹಿಸುವಂತೆ ಮತ್ತು ಸದನಗಳ ಅಧ್ಯಕ್ಷತೆ ವಹಿಸುವವರು ನಿಯಮ ಪುಸ್ತಕವನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಮತ್ತು ವೈಯಕ್ತಿಕ ಪರಿಗಣನೆಗಳ ಕೈಮೇಲಾಗದಂತೆ ಸರಕಾರ ನೋಡಿಕೊಳ್ಳಬೇಕು. ಯಾವ ವಿಷಯಗಳು ‘ಹಣ ಮಸೂದೆ’ಯಲ್ಲಿ ಸೇರುತ್ತದೆ, ಅಥವ ಸೇರುವುದಿಲ್ಲ ಎಂಬ ಕುರಿತ ಸಂವಿಧಾನದ 110(1) ಮತ್ತು 11(2)ನ್ನು ಉಪೇಕ್ಷಿಸಿ ಲೋಕಸಭಾಧ್ಯಕ್ಷರ ಅಧಿಕಾರವನ್ನು ಕುರಿತ 110(3) ನ್ನು ಮಾತ್ರ ತೋಚಿದಂತೆ ಉದ್ಧರಿಸುವುದನ್ನು, ಅಗತ್ಯವಾದರೆ, ಒಂದು ಸಂವಿಧಾನ ತಿದ್ದುಪಡಿಯ ಮೂಲಕ ನಿಲ್ಲಿಸಬೇಕು. ಹೆಚ್ಚು ಗಮನಾರ್ಹ ಕೆಲಸ ನಡೆಯುವ ಸಂಸದೀಯ ಸಮಿತಿಗಳ ಕಾರ್ಯನಿರ್ವಹಣೆ ದುರ್ಬಲಗೊಂಡಿದೆ, ಇದನ್ನು ಅದಷ್ಟು ಬೇಗನೇ ಸರಿಪಡಿಸಬೇಕು ಎಂಬ ಸಿಪಿಐ(ಎಂ)ನ ನಿರ್ದಿಷ್ಟ ಸೂಚನೆಗಳನ್ನು ಮುಂದಿಟ್ಟರು.

**ಮಹಾತ್ಮ ಗಾಂಧಿಯವರ 150ನೇ ಜನ್ಮವಾರ್ಷಿಕಾಚರಣೆ**ಗೆ ಹಿಂದಿನ ಸರಕಾರ ಕಾರ್ಯಕ್ರಮಗಳನ್ನು ರೂಪಿಸಲು ಒಂದು ಸಮಿತಿಯನ್ನು ರಚಿಸಿತ್ತು. ಯೆಚುರಿ ಇದರ ಸದಸ್ಯರಾಗಿದ್ದರು. “ಇದೊಂದು ಪ್ರಮುಖ ಸಮಾರಂಭ, ಇದನ್ನು ಸರಿಯಾಗಿ ಆಚರಿಸಬೇಕು ಎಂದು ನಾವು ಪರಿಗಣಿಸುತ್ತೇವೆ.ಈ ವಿಷಯದಲ್ಲಿ ನಮ್ಮ ಸೂಚನೆಗಳನ್ನು /ಅಭಿಪ್ರಾಯಗಳನ್ನು ಕೊಡುವ ಮೂಲಕ ಸಿಪಿಐ(ಎಂ) ಸರಕಾರದೊಂದಿಗೆ ಸಹಕರಿಸುತ್ತದೆ” ಎಂದು ಸಿಪಿಐ(ಎಂ) ಟಿಪ್ಪಣಿ ಹೇಳಿದೆ.

**ಮಹತ್ವಾಕಾಂಕ್ಷೆಯ ಜಿಲ್ಲೆಗಳ ಅಭಿವೃದ್ಧಿ** ಅಜೆಂಡಾದ ಕುರಿತಂತೆ ಮಾತಾಡುತ್ತ ಯೆಚುರಿ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಸರಕಾರಗಳನ್ನು ಬದಿಗೊತ್ತಿ ಕೇಂದ್ರ ಸರಕಾರವೇ ನೇರವಾಗಿ ಜಿಲ್ಲಾಮಟ್ಟದ ಅಭಿವೃದ್ಧಿಯ ಮೇಲ್ವಿಚಾರಣೆ ನಡೆಸುವುದನ್ನು ಒಪ್ಪಲು ಸಾಧ್ಯವಿಲ್ಲ ಎಂಬ ಪಕ್ಷದ ನಿಲುವನ್ನು ಪುನರುಚ್ಚರಿಸಿದರು. ನೀತಿ ಆಯೋಗ ಸೂಚಿಸಿರುವ ಮುನ್ನಡೆಯ ದಾರಿಯೆಂದರೆ ಈ ಜಿಲ್ಲೆಗಳಲ್ಲಿ ಸರ್ವೆಗಳನ್ನು ನಡೆಸುವುದನ್ನು ಚುನಾಯಿತ ಸರಕಾರಗಳನ್ನು ಬದಿಗೊತ್ತಿ ಟಾಟಾ ಟ್ರಸ್ಟ್ ಗಳಿಗೆ ಹಾಗೂ ಬಿಲ್ ಮತ್ತು ಮೆಲಿಂದಾ ಗೇಟ್ಸ್ ಫೌಂಡೇಷನ್‌ಗೆ ಒಪ್ಪಿಸುವುದು. ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಮಹತ್ವಾಕಾಂಕ್ಷೆಯ ಜಿಲ್ಲೆಗಳ ಅಭಿವೃದ್ಧಿಯ ಸಮಸ್ತ ಪರಿಕಲ್ಪನೆ ಮತ್ತು ಜಾರಿಯಲ್ಲಿ ಈ ಜಿಲ್ಲೆಗಳಿರುವ ರಾಜ್ಯಗಳ ಚುನಾಯಿತ ಸರಕಾರಗಳ ಪಾತ್ರವೇನಿರುತ್ತದೆ, ಮತ್ತು ಅವುಗಳ ತೊಡಗುವಿಕೆ ಹೇಗಿರುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆಯಿಲ್ಲ ಎಂದು ಸಿಪಿಐ(ಎಂ) ಟಿಪ್ಪಣಿ ಅಭಿಪ್ರಾಯ ಪಟ್ಟಿದೆ.

**ನಮ್ಮ ಸ್ವಾತಂತ್ರ್ಯದ 75ನೇ ವರ್ಷದಲ್ಲಿ ಒಂದು ನವಭಾರತವನ್ನು ಕಟ್ಟುವ** ಕುರಿತ ಅಜೆಂಡಾ ಸರಕಾರದ ಮುಂದೆ ಇರುವಾಗ ಪ್ರಧಾನ ಮಂತ್ರಿಗಳ ‘ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್’ ಎಂಬ ಚುನಾವಣೋತ್ತರ ಪ್ರತಿಪಾದನೆಯನ್ನು ಸರಕಾರ ಗಂಭೀರವಾಗಿ ಅನುಸರಿಸುತ್ತದೆ ಎಂದು ಸಿಪಿಐ(ಎಂ) ಆಶಿಸುವುದಾಗಿ ಈ ಟಿಪ್ಪಣಿ ಸ್ಪಷ್ಟಪಡಿಸಿದೆ. ಆದರೆ ಕಳೆದ ಐದು ವರ್ಷಗಳ ಅನುಭವ ಇದನ್ನು ಅನುಸರಿಸಲಾಗುವುದು ಎಂಬ ವಿಶ್ವಾಸವನ್ನು ಜನರಿಗೆ ಕೊಡುತ್ತಿಲ್ಲ.

ಜನಜಂಗುಳಿ ಬಡಿದು ಸಾಯಿಸುವ ಘಟನೆಗಳ ವರದಿಗಳಿಂದ ಹೌಹಾರಿದ ಸುಪ್ರಿಂ ಕೋರ್ಟ್ ಇದರ ವಿರುದ್ಧ ಒಂದು ವಿಶೇಷ ಕಾನೂನನ್ನು ಅಂಗೀಕರಿಸುವಂತೆ ಸರಕಾರಕ್ಕೆ ಸಲಹೆ ನೀಡಿತು. ಆದರೆ ಇದು ಆಗಿಲ್ಲ. ಇಂತಹ ಒಂದು ಕಾನೂನು ಸಾಧ್ಯವಾದಷ್ಟು ಬೇಗನೇ ಜಾರಿಗೆ ಬರುವಂತೆ ಈ ಸರಕಾರ ಖಾತ್ರಿಪಡಿಸಬೇಕಾಗಿದೆ. ದ್ವೇಷ, ಅಸಹಿಷ್ಣುತೆ, ಭಯೋತ್ಪಾದನೆ ಮತ್ತು ಭೀತಿಯನ್ನು ಪರಿಣಾಮಕಾರಿಯಾಗಿ ತಡೆಯಬೇಕಾಗಿದೆ.

ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು, ನಮ್ಮ ಅಪರಿಮಿತ ಶ್ರೀಮಂತ ವೈವಿಧ್ಯತೆಯಲ್ಲಿ ಹಾಸುಹೊಕ್ಕಾಗಿರುವ ಸಾಮಾನ್ಯತೆಯ ಬಂಧಗಳನ್ನು ಬಲಪಡಿಸುವ ಮೂಲಕವಷ್ಟೇ ಬಲಪಡಿಸಲು ಸಾಧ್ಯ, ವೈವಿಧ್ಯತೆಯ ಮೇಲೆ ಧಾರ್ಮಿಕ, ಭಾಷಿಕ ಮುಂತಾದ ಏಕರೂಪತೆಯನ್ನು ಹೇರುವ ಪ್ರಯತ್ನದಿಂದಲ್ಲ ಎಂದು ನಾವು ಒತ್ತಿ ಹೇಳಬಯಸುತ್ತೇವೆ. ಸರಕಾರ ಈ ತಿಳುವಳಿಕೆಗೆ ಬದ್ಧವಾಗಿರುತ್ತದೆ ಎಂದು ಸಿಪಿಐ(ಎಂ) ಟಿಪ್ಪಣಿ ಆಶಿಸಿದೆ.

ಸರ್ವಪಕ್ಷಗಳ ಸಭೆಯ ಈ ಅಜೆಂಡಾದಲ್ಲಿ ಗಾಬರಿ ಹುಟ್ಟಿಸುವ ಬರ ಪರಿಸ್ಥಿತಿ, ಹೆಚ್ಚುತ್ತಿರುವ ನಿರುದ್ಯೋಗ, ಖಾಸಗೀಕರಣ, ಕಾರ್ಮಿಕ ಕಾನೂನುಗಳ ಕಾರ್ಮಿಕ–ವಿರೋಧಿ ತಿದ್ದುಪಡಿಗಳು, ಆರ್ಥಿಕ ಸ್ಥಗಿತತೆ/ಅವನತಿ, ಅಂಕಿ–ಅಂಶಗಳ ವಿಶ್ವಾಸಾರ್ಹತೆ ಮುಂತಾದ ತುರ್ತು ಆರ್ಥಿಕ ಪ್ರಶ್ನೆಗಳ ಪ್ರಸ್ತಾಪವಿರಲಿಲ್ಲ. ಪ್ರಧಾನಿಗಳ ಘೋಷಣೆಗೆ ಹೊಸದಾಗಿ ಸೇರಿದ ‘ಸಬ್ ಕಾ ವಿಶ್ವಾಸ್’ ಮತ್ತು ಚುನಾವಣಾ ಪ್ರಚಾರದ ವೇಳೆಯಲ್ಲಿ ಏಕೈಕ ವಿಷಯವಾಗಿಸಿದ ಭಯೋತ್ಪಾದನೆಯ ವಿರುದ್ಧ ಸೆಣಸಾಟದ ಪ್ರಶ್ನೆಯೂ ಇರಲಿಲ್ಲ. ನಿಜವಾಗಿಯೂ ಆಗಬೇಕಾಗಿರುವ ಚುನಾವಣಾ ಸುಧಾರಣೆಗಳ ಪ್ರಸ್ತಾಪವೂ ಇರಲಿಲ್ಲ.

ಸರಕಾರದ ತಕ್ಷಣದ ಗಮನ ಅಗತ್ಯವಾಗಿರುವ ಬೇರೆ ಯಾವುದೇ ಮಹತ್ವದ ಪ್ರಶ್ನೆಯನ್ನು ಮುಂದಿಡಲು ಕೂಡ ನೀಡಿದ್ದ ಅವಕಾಶವನ್ನು ಬಳಸಿ ಯೆಚುರಿಯವರು ಇವೆಲ್ಲವುಗಳನ್ನು ಕುರಿತಂತೆಯೂ ಪಕ್ಷದ ಸ್ಪಷ್ಟ ನಿಲುವುಗಳನ್ನು ಮಂಡಿಸಿದರು.

**(ಈ ಕುರಿತ ವಿವರಗಳಿಗಾಗಿ ಈ ಸಂಚಿಕೆಯ ಪುಟ 9–10 ರಲ್ಲಿ ಪ್ರಕಟವಾಗಿರುವ ಸಿಪಿಐ(ಎಂ)ನ ಟಿಪ್ಪಣಿಯ ಪೂರ್ಣ ಪಾಟವನ್ನು ನೋಡಿ)**

# ಮತ್ತೆ ಹಿಂದಿ ಹೇರಿಕೆಯ ಪ್ರಯತ್ನ: ಯುಜಿಸಿ ಸುತ್ತೋಲೆಯನ್ನು ಹಿಂತೆಗೆದುಕೊಳ್ಳುವಂತೆ ಮಾಡಬೇಕು

## ಎಲ್ಲ ಜನವಿಭಾಗಗಳು, ಶಿಕ್ಷಣ ರಂಗದಲ್ಲಿರುವ ಸಂಘಟನೆಗಳಿಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ವಿನಂತಿ

ವಿಶ್ವವಿದ್ಯಾಲಯ ಅನುದಾನ ಆಯೋಗ (ಯು.ಜಿ.ಸಿ.) ದೇಶಾದ್ಯಂತ ಪದವಿ ಕೋರ್ಸ್‌ಗಳಲ್ಲಿ ಹಿಂದಿ ಭಾಷೆಯನ್ನು ಕಡ್ಡಾಯಗೊಳಿಸುವ ಪ್ರಯತ್ನ ನಡೆಸುತ್ತಿದೆ, ಈ ದಿಕ್ಕಿನಲ್ಲಿ ಅದು ಒಂದು ಸುತ್ತೋಲೆ ಕಳಿಸಿರುವುದಾಗಿ ತಿಳಿದು ಬಂದಿದೆ. ಈ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಳವಾದ ಆತಂಕ ವ್ಯಕ್ತಪಡಿಸಿದೆ.

ಇದು ವಿಚಿತ್ರ ಸಂಗತಿ. ಏಕೆಂದರೆ ಇತ್ತೀಚೆಗಷ್ಟೇ ರಾಷ್ಟ್ರೀಯ ಶಿಕ್ಷಣ ಧೋರಣೆ, 2019ರ ಕರಡಿನ ಭಾಗವಾಗಿ ಹಿಂದಿಯನ್ನು ಹೇರುವುದರ ವಿರುದ್ಧ ದೇಶದಲ್ಲಿ ವ್ಯಕ್ತಗೊಂಡ ವ್ಯಾಪಕ ವಿರೋಧದ ಹಿನ್ನೆಲೆಯಲ್ಲಿ ಸರಕಾರ ಕೂಡಲೇ ಈ ವಿಷಯದಲ್ಲಿ ಹಿಂದೆ ಸರಿಯಬೇಕಾಗಿ ಬಂದಿತ್ತು. ಕೇಂದ್ರ ಸರಕಾರ ಸದ್ಯಕ್ಕೆ ಈ ವಿವಾದವನ್ನು ಇತ್ಯರ್ಥ ಮಾಡಲು ಒಂದು ಸ್ಪಷ್ಟೀಕರಣವನ್ನು ಕೊಟ್ಟಿತು. ಆದ್ದರಿಂದ, ಯು.ಜಿ.ಸಿ. ಸ್ವತಂತ್ರವಾಗಿ ಈ ಅಜೆಂಡಾವನ್ನು ಮುಂದೊತ್ತಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಭಾರತ ಭಾಷೆ ಮತ್ತು ಸಂಸ್ಕೃತಿಯಲ್ಲಿ ವೈವಿಧ್ಯತೆಯನ್ನು ಹೊಂದಿರುವ ದೇಶ. ಒಂದು ಶಾಸನಬದ್ಧ ಸಂಸ್ಥೆ ಒಂದು ಸರಿಯಾದ ಪ್ರಕ್ರಿಯೆಯಿಲ್ಲದೆ ಒಂದು ನಿರ್ದಿಷ್ಟ ರಾಷ್ಟ್ರೀಯ ಭಾಷೆಯನ್ನು ಹೇರುವ ಪ್ರಯತ್ನ ಇತರ ಭಾಷಾವಾರು ಗುಂಪುಗಳ ನಡುವೆ ಇರುವೆಗೂಡಿಗೆ ಕೈಹಾಕಿದಂತಾಗುತ್ತದೆ. ಶ್ರೀಮಂತ ಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಆಧರಿಸಿದ ನಮ್ಮ ಜನಗಳ ಐಕ್ಯತೆಯನ್ನು ಇಂತಹ ಪ್ರಯತ್ನಗಳು ಛಿದ್ರಗೊಳಿಸುತ್ತವೆ.


ಆದ್ದರಿಂದ ಎಲ್ಲ ಜನವಿಭಾಗಗಳು, ಶಿಕ್ಷಣ ರಂಗದಲ್ಲಿರುವ ಸಂಘಟನೆಗಳು ಜನಾಭಿಪ್ರಾಯವನ್ನು ಅಣಿನೆರೆಸಬೇಕು ಮತ್ತು ನಮ್ಮ ದೇಶದ ಎಲ್ಲ ಭಾಷಾ ಮತ್ತು ಸಾಂಸ್ಕೃತಿಕ ಗುಂಪುಗಳ ಐಕ್ಯತೆಯನ್ನು ಎತ್ತಿ ಹಿಡಿಯಲು ಯುಜಿಸಿ ಈ ಸುತ್ತೋಲೆಯನ್ನು ಹಿಂತೆಗೆದುಕೊಳ್ಳುವಂತೆ ಸರಕಾರದ ಮೇಲೆ ಒತ್ತಡ ತರಬೇಕು ಎಂದು ಸಿಪಿಐ(ಎಂ) ವಿನಂತಿಸಿಕೊಂಡಿದೆ.

# ಪಶ್ಚಿಮ ಬಂಗಾಲದಲ್ಲಿ ಇಬ್ಬರು ಸಿಪಿಐ(ಎಂ) ಯುವ ಕಾರ್ಯಕರ್ತರ ಹತ್ಯೆ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಪಶ್ಚಿಮ ಬಂಗಾಲದಲ್ಲಿ ಜೂನ್ 22ರಂದು ಟಿಎಂಸಿಗೆ ಸೇರಿದ ಕ್ರಿಮಿನಲ್ ಗಳು ಇಬ್ಬರು ಯುವ ಸಂಗಾತಿಗಳನ್ನು ಕೊಲೆಗೈದಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಆಳವಾದ ಕಳವಳ ಮತ್ತು ದುಃಖವನ್ನು ವ್ಯಕ್ತಪಡಿಸಿದೆ.

ಉತ್ತರ 24 ಪರಗಣ ಜಿಲ್ಲೆಯ ಅಮ್ಡಂಗದಲ್ಲಿ ಒಬ್ಬ ಬಹಳ ಚಿಕ್ಕ ವಯಸ್ಸಿನ ಸಂಗಾತಿ ತಾಜಿಮುಲ್ ಕರೀಂ ನ ನಿರ್ಮಮ ಹತ್ಯೆ ನಡೆಸಲಾಗಿದೆ. ಅದೇ ದಿನ ರಾತ್ರಿ ದಕ್ಷಿಣ ಪರಗಣ ಜಿಲ್ಲೆಯ ಮಥುರಾಪುರ್ ದಲ್ಲಿ ಅತ್ಯಂತ ಅಮಾನುಷ ರೀತಿಯಲ್ಲಿ ನಿಜಾಮುದ್ದೀನ್ ಮಂಡಲ್ ಕೊಲೆಯಾಯಿತು. ತಾಜಿಮುಲ್ ಕರೀಂ ಪಕ್ಷದ ಸಕ್ರಿಯ ಕಾರ್ಯಕರ್ತನಾಗಿದ್ದು ಬಹಳ ಸಮಯದಿಂದ ಮಾರಣಾಂತಿಕ ಬೆದರಿಕೆಗಳಿಂದಾಗಿ ಮನೆಯಿಂದ ದೂರವಿದ್ದು ಕೆಲಸ ಮಾಡುತ್ತಿದ್ದರು. ಲೋಕಸಭಾ ಚುನಾವಣೆಗಳ ಫಲಿತಾಂಶಗಳ ನಂತರ ತನ್ನ ಮನೆಗೆ ಮರಳಿದ್ದರು. ನಿಜಾಮುದ್ದೀನ್ ಕೂಡ ಚುನಾವಣಾ ಸಮರದಲ್ಲಿ ಮಹತ್ವದ ಪಾತ್ರ ವಹಿಸಿದ್ದು, ಸಿಪಿಐ(ಎಂ)ನ ಚುನಾವಣಾ ಏಜೆಂಟ್ ಆಗಿ ಕೆಲಸ ಮಾಡಿದ್ದವರು.


ತಾಜಿಮುಲ್ ಕರೀಂ


ನಿಜಾಮುದ್ದೀನ್ ಮಂಡಲ್

ಟಿಎಂಸಿ ಮಂದಿ ತಮ್ಮ ಹಿಂಸಾ ರಾಜಕೀಯಕ್ಕೆ ವ್ಯಕ್ತಗೊಂಡಿರುವ ವ್ಯಾಪಕ ವಿರೋಧದಿಂದ ಪಾಟ ಕಲಿತಿಲ್ಲ ಎಂಬುದು ಸ್ಪಷ್ಟ. ಸಿಪಿಐ(ಎಂ) ಮತ್ತು ಎಡಪಕ್ಷಗಳ ವಿರುದ್ಧ ಇದು ಮುಂದುವರೆಸುತ್ತಿದೆ. ಈ ಹಿಂಸಾ ರಾಜಕೀಯ ಈಗ ಪರಿಚಿತಗೊಂಡಿದೆಯಾದರೂ ಆಡಳಿತದ ಅಸಹ್ಯ ವರ್ತನೆ ಮುಂದುವರೆಯುತ್ತಿದೆ. ನ್ಯಾಯವನ್ನು ನಿರಾಕರಿಸುವಲ್ಲಿ ಮತ್ತು ಅಪರಾಧಿಗಳಿಗೆ ಶಿಕ್ಷೆಯಾಗದಂತೆ ನೋಡಿಕೊಳ್ಳುವಲ್ಲಿ ಅದು ಶಾಮೀಲಾಗಿದೆ ಎಂದು ಪೊಲಿಟ್ ಬ್ಯುರೊ ಹೇಳಿದೆ.

ಆದರೆ ಎಡಪಂಥೀಯರ ವಿರುದ್ಧ ಇಂತಹ ಹಿಂಸಾಚಾರ ಮುಖ್ಯಧಾರೆಯ ಮಾಧ್ಯಮಗಳಲ್ಲಿ ‘ವರದಿಯೋಗ್ಯ’ವಾಗಿಲ್ಲ! ಇವು ಈ ರಾಜ್ಯದಲ್ಲಿ ಒಟ್ಟಾರೆ ಕಾನೂನು–ವ್ಯವಸ್ಥೆ ಕುಸಿದಿರುವುದನ್ನು, ಟಿಎಂಸಿ ಮತ್ತು ಬಿಜೆಪಿ ಎರಡೂ ಪ್ರದರ್ಶಿಸುತ್ತಿರುವ ಹಿಂಸಾಚಾರವನ್ನು ಕುರಿತಂತೆ ಒಂದು ತಮ್ಮದೇ ಬಣ್ಣ ಲೇಪಿಸಿದ ಕಥನವನ್ನು ಪ್ರಾಯೋಜಿಸುತ್ತಿವೆ. ಈ ಕಥನ ರಾಜಕೀಯ ಎರಡು ಶಕ್ತಿಗಳ ಸುತ್ತವೇ ಸುತ್ತು ಹೊಡೆಯುತ್ತಿದೆ ಎಂಬ ಭಾವನೆಯನ್ನು ಗಟ್ಟಿಗೊಳಿಸಲಿಕ್ಕಾಗಿಯಷ್ಟೇ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಇಬ್ಬರು ಹುತಾತ್ಮರ ಕುಟುಂಬಗಳಿಗೆ ಸಂತಾಪವನ್ನು ಮತ್ತು ಸಹಾನುಭೂತಿಯನ್ನು ವ್ಯಕ್ತಪಡಿಸಿದೆ, ಅವರಿಗೆ ತಮ್ಮ ದುಃಖವನ್ನು ಮೀರಿ ನಿಲ್ಲುವಂತೆ ನೆರವಾಗಲು ಪಕ್ಷ ಸಾಧ್ಯವಾದುದೆಲ್ಲವನ್ನೂ ಮಾಡುವ ದೃಢನಿರ್ಧಾರವನ್ನು ವ್ಯಕ್ತಪಡಿಸಿದೆ.

ಈ ಹೀನ ಅಪರಾಧದಲ್ಲಿ ಶಾಮೀಲಾಗಿರುವ ಎಲ್ಲರಿಗೂ ಆದಷ್ಟು ಬೇಗನೇ ಶಿಕ್ಷೆಯಾಗಬೇಕು ಎಂದು ಅದು ದೃಢವಾಗಿ ಆಗ್ರಹಿಸಿದೆ.

ಸಂಪಾದಕೀಯ

# ಬಿಜೆಪಿಗೇಕೆ ಹೊಟ್ಟೆಯುರಿ?

ಮುಖ್ಯಮಂತ್ರಿ ಕುಮಾರ ಸ್ವಾಮಿಯವರ ಗ್ರಾಮ ವಾಸ್ತವ್ಯವು ಒಂದು ಕಡೆ, ಬಹಳಷ್ಟು ಸುದ್ದಿ ಮಾಡುತ್ತಾ ಗ್ರಾಮೀಣ ಬಡವರ ಗಮನ ಸೆಳೆಯುತ್ತಿದ್ದರೆ ಇನ್ನೊಂದೆಡೆ, ಬಾರಿ ಬಹುಮತದೊಂದಿಗೆ 2ನೇ ಬಾರಿ ಗೆದ್ದಿರುವ ಬಿಜೆಪಿ ಹೊಟ್ಟೆಯುರಿಗೆ ಇಂಧನ ಒದಗಿಸುತ್ತಿದೆ.

ಉತ್ತರ ಕರ್ನಾಟಕದ ಅತ್ಯಂತ ಹಿಂದುಳಿದಿರುವ ಯಾದಗಿರಿ, ರಾಯಚೂರು, ಬೀದರ್ ಮುಂತಾದ ಜಿಲ್ಲೆಗಳ ಅತ್ಯಂತ ನಿರ್ಲಕ್ಷಕ್ಕೆ ಒಳಪಟ್ಟ ಗಡಿ ಪ್ರದೇಶದ ಹಳ್ಳಿಗಳಿಗೆ ಮುಖ್ಯ ಮಂತ್ರಿ ಕುಮಾರಸ್ವಾಮಿ ಖುದ್ದಾಗಿ ಭೇಟಿ ನೀಡಿ, ಅಲ್ಲಿನ ಜನಸಾಮಾನ್ಯರ ದೂರು ದುಮ್ಮಾನಗಳನ್ನು ಆಲಿಸಿ, ಪರಿಹಾರದ ಕ್ರಮಗಳನ್ನು ಸೂಚಿಸಿ ಅಲ್ಲಿನ ಶಾಲೆಗಳಲ್ಲಿ ವಾಸ್ತವ್ಯ ಹೂಡುತ್ತಿರುವುದು ಸ್ವಾಗತಾರ್ಹವಾಗಿದೆ. ಈ ಗ್ರಾಮಗಳ ಜನ ದೂರದ ಬೆಂಗಳೂರಿಗೆ ಹೋಗಿ ಮುಖ್ಯ ಮಂತ್ರಿಯವರನ್ನು ಕಂಡು ತಮ್ಮ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಸಲ್ಲಿಸಿ ಪರಿಹಾರ ಪಡೆಯುವುದು ಸಾಧ್ಯವೇ ಆಗುತ್ತಿರಲಿಲ್ಲ. ಮುಖ್ಯ ಮಂತ್ರಿ ಈ ಮೂಲಕ 'ಸರ್ಕಾರವನ್ನು ಜನರ ಮನೆ ಬಾಗಿಲಿಗೆ ತರುತ್ತೇನೆ' ಎಂಬ ತನ್ನ ಒಂದು ಭರವಸೆಯನ್ನು ಈಡೇರಿಸಿದಂತಾಗಿದೆ.

ಮುಖ್ಯಮಂತ್ರಿ ಗ್ರಾಮ ವಾಸ್ತವ್ಯಕ್ಕೆ ಹೊರಟಾಗ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಅವರ ಸಂಗಡ ಗ್ರಾಮಗಳಿಗೆ ತೆರಳುತ್ತಾರೆ. ಎಂದೂ ಹಳ್ಳಿಗಳತ್ತ ಮುಖ ಮಾಡಲು ಬಯಸದ ಹಿರಿಯ ಅಧಿಕಾರಿಗಳು ಈಗ ಹಳ್ಳಿಗಳತ್ತ ಬರಲೇ ಬೇಕು. ಅವರಿಗೂ ಹಳ್ಳಿಗಾಡಿನ ಜನರ ಸಮಸ್ಯೆಗಳ ತೀವ್ರತೆ ಅರ್ಥವಾಗದೆ ಇರಲಾರದು. ಇಲ್ಲಿ ಹಳ್ಳಿಗಾಡಿನ ಜನಸಾಮಾನ್ಯರನ್ನು ಕಡೆಗಣಿಸದೆ ಗೌರವ ಕೊಟ್ಟು ಗೌರವ ಪಡೆಯುವುದನ್ನು ಅವರು ಕಲಿಯುವರು. ಆದ್ದರಿಂದಲೇ ಮುಖ್ಯ ಮಂತ್ರಿಯವರನ್ನು ಕಂಡು ಮನವಿ ಸಲ್ಲಿಸುವ ಜನರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಬೆಳಗ್ಗೆಯಿಂದ ರಾತ್ರಿ 10:00 ಗಂಟೆಯವರೆಗೂ ಜನ ಕಾದು ಕುಳಿತಿರುತ್ತಾರೆ. ಕೆಲವೊಮ್ಮೆ ನೂಕು ನುಗ್ಗಲು ಉಂಟಾಗುತ್ತದೆ. ಪೊಲೀಸರು ಮಧ್ಯಪ್ರವೇಶಮಾಡಿ ವಾತಾವರಣ ತಿಳಿಗೊಳಿಸುತ್ತಾರೆ.

ಅಂತಹ ಒಂದು ಪ್ರಸಂಗ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕರೇಗುಡ್ಡ ಗ್ರಾಮದಲ್ಲಿ ನಡೆಯಿತು. ಅಲ್ಲಿ ಮನವಿ ಸಲ್ಲಿಸಲು ಬಂದಿದ್ದ ಜನಗಳಿಗಿಂತ ಪ್ರತಿಭಟನೆ ಮಾಡಲು ಪೂರ್ವ ತಯಾರಿಯೊಂದಿಗೆ ಬಂದವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಂತೆ ಕಾಣುತ್ತದೆ. ಮುಖ್ಯಮಂತ್ರಿ ಪ್ರಾಮಾಣಿಸುತ್ತಿದ್ದ ಬಸ್ಸನ್ನು ತಡೆಹಿಡಿದು ಪ್ರತಿಭಟನಾಕಾರರು 'ಮೋದಿ ಮೋದಿ' ಎಂದು ಘೋಷಣೆ ಕೂಗಿದ್ದಾರೆ. ಈ ಸಂದರ್ಭದಲ್ಲಿ ಉದ್ರೋಗಕ್ಕೆ ಒಳಗಾದ ಮುಖ್ಯಮಂತ್ರಿ 'ಚುನಾವಣೆಯಲ್ಲಿ ಮೋದಿಗೆ ವೋಟು ಹಾಕ್ತೀರಿ, ಸಮಸ್ಯೆ ಪರಿಹಾರಕ್ಕೆ ನಮ್ಮ ಹತ್ತಿರ ಬರ್ತೀರಾ? ಬಸ್‌ಗೆ ದಾರಿ ಬಿಡದಿದ್ದರೆ ಲಾಠಿಚಾರ್ಜ್ ಮಾಡುಸುತ್ತೇನೆ' ಎಂದು ಗದರಿಸಿದ್ದಾರೆ.

ಮುಖ್ಯ ಮಂತ್ರಿ ಕುಮಾರಸ್ವಾಮಿ ಈ ರೀತಿ ಆವೇಶಕ್ಕೆ ಒಳಗಾಗುವುದು ಇದೇ ಮೊದಲಲ್ಲ. ಅವರು ಬಹುಬೇಗ ತಾಳ್ಮೆ ಕಳೆದುಕೊಳ್ಳುತ್ತಾರೆ. ಆದರೆ ಇದು ಸಮರ್ಥನೀಯವಲ್ಲ. ಅವರು ಮುಖ್ಯ ಮಂತ್ರಿ ಎಂದು ಘೋಷಿತರಾದ ಬಳಿಕ ಅವರು ಎಲ್ಲರಿಗೂ ಮುಖ್ಯಮಂತ್ರಿಗಳೇ. ಅವರಿಗೆ ಮತ ಹಾಕಿದವರನ್ನು, ಮತ ಹಾಕದಿರುವವರನ್ನು ಅವರು ಒಂದೇ ತೆರನಾಗಿ ನೋಡಬೇಕು. 'ನೀವು ಮೋದಿಗೆ ವೋಟು ಹಾಕಬಹುದು. ಆದರೆ ನಾನು ಆ ತಾರತಮ್ಯ ಮಾಡುವುದಿಲ್ಲ. ಬನ್ನಿ, ನಿಮ್ಮ ಸಮಸ್ಯೆ ಕೇಳಿಕೊಳ್ಳಿ. ಪರಿಹಾರ ಕಂಡುಕೊಳ್ಳೋಣ' ಎಂದು ಹೇಳಿದರೆ ಅವರು ಹೆಚ್ಚಿನ ಗೌರವಕ್ಕೆ ಪಾತ್ರರಾಗುತ್ತಿದ್ದರು.

ಗ್ರಾಮವಾಸ್ತವ್ಯ ಕಾರ್ಯಕ್ರಮದಿಂದ ಕುಮಾರಸ್ವಾಮಿ ಅವರ ಜನಪ್ರಿಯತೆ ಹೆಚ್ಚಾಗುತ್ತಿರುವುದನ್ನು ನೋಡಿ ಬಿಜೆಪಿಗೆ ಸಹಿಸಿಕೊಳ್ಳಲಾಗುತ್ತಿಲ್ಲ. ಸಮ್ಮಿಶ್ರ ಸರ್ಕಾರ ಸರಿಯಾಗಿ ಕೆಲಸ ಮಾಡದಂತೆ ನೋಡಿಕೊಳ್ಳಲು ರಾಜ್ಯದ ಬಿಜೆಪಿ ನಾಯಕರು ರಾಜಕೀಯ ತಂತ್ರಗಳನ್ನು ಹೂಡುವುದರಲ್ಲಿ ನಿರತರಾಗಿದ್ದಾರೆ. ಅಂತಹ ತಂತ್ರಗಾರಿಕೆಯಲ್ಲಿ ಬಿಜೆಪಿಯವರು ಕುಪ್ರಸಿದ್ಧರು. ಗ್ರಾಮವಾಸ್ತವ್ಯ ಕೈಗೊಂಡಿರುವ ಜೆಡಿಎಸ್ ನಾಯಕ ಕುಮಾರಸ್ವಾಮಿ ವಿರುದ್ಧ ತಮ್ಮ ಬೆಂಬಲಿಗರನ್ನು ಛೂಬಿಟ್ಟು ಮುಖ್ಯಮಂತ್ರಿ ತಾಳ್ಮೆ ಕಳೆದುಕೊಳ್ಳುವಂತೆ ಮಾಡುವುದು ಸಹ ಅವರ ಒಂದು ತಂತ್ರ ಆಗಿರಬಹುದು. ಕುಮಾರಸ್ವಾಮಿ ಅವರು ಬಿಜೆಪಿ ಹಣೆಯುವ ಬಲೆಗೆ ಬೀಳದಂತೆ ಎಚ್ಚರವಹಿಸಬೇಕು. ಗ್ರಾಮ ವಾಸ್ತವ್ಯದ ಸಂದರ್ಭದಲ್ಲಿ ಸಾವಿರಾರು ಜನ ಗ್ರಾಮೀಣ ಬಡವರು ಕುಮಾರಸ್ವಾಮಿ ಮೇಲೆ ವಿಶ್ವಾಸ ಇಟ್ಟು ಮನವಿ ಪತ್ರಗಳನ್ನು ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಅವರ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡುತ್ತಾರೆ. ಆ ಭರವಸೆಗಳು ಹುಸಿಯಾಗದಂತೆ ನೋಡಿಕೊಳ್ಳಬೇಕು. ಕುಮಾರಸ್ವಾಮಿ ಅವರಿಗೆ ಸರಕಾರದ ಅನಿಶ್ಚಿತತೆ ಸದಾ ಕಾಡುತ್ತಿದೆ. ಯಾವಾಗಾದರೂ ಮಧ್ಯಂತರ ಚುನಾವಣೆ ನಡೆಯಬಹುದೆಂದು ಮುನ್ಸೂಚನೆ ಅವರು ಅರಿತುಕೊಂಡಂತೆ ಕಾಣುತ್ತದೆ. ಆದ್ದರಿಂದ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲು, ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಜನ ಬೆಂಬಲಗಳಿಸಲು ಅವರು ಶ್ರಮಿಸುತ್ತಿದ್ದಾರೆ. ಇದರಿಂದಾಗಿ ಬಿಜೆಪಿಗೆ ಹೊಟ್ಟೆಯುರಿ! ■

# ರೈತರ ಬೃಹತ್ ರ್‍ಯಾಲಿ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ (KPRS) ತೀರ್ಮಾನ

ಬಗರ್ ಹುಕುಂ ಭೂಮಿ ಸಕ್ರಮಗೊಳಿಸಲು, ಎಲ್ಲಾ ಬಡವರಿಗೆ ಮನೆ ನಿವೇಶನ ನೀಡಲು ಮತ್ತು ಭೂಮಿ ಹಕ್ಕಿಗಾಗಿ ನವೆಂಬರ್ 2019 ರಲ್ಲಿ ಬೆಂಗಳೂರಿನಲ್ಲಿ ರೈತರ ಮತ್ತು ಕೃಷಿ ಕೂಲಿಕಾರರು ಬೃಹತ್ ರ್‍ಯಾಲಿ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ತೀರ್ಮಾನ ಮಾಡಿದೆ. ಚಳಿಗಾಲದ ಅಧಿವೇಶನದ ಸಮಯದಲ್ಲಿ ಇಪ್ಪತ್ತೈದು ಸಾವಿರಕ್ಕೂ ಹೆಚ್ಚಿನ ರೈತರು ಮತ್ತು ಕೂಲಿಕಾರರ ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ಪ್ರತಿಭಟಿಸಲಿದ್ದಾರೆ. ದೊಡ್ಡಬಳ್ಳಾಪುರದಲ್ಲಿ ನಡೆದ ರಾಜ್ಯ ಮಟ್ಟದ ರೈತರ ಶಿಬಿರದಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು ಈ ರ್‍ಯಾಲಿಗೆ ಪೂರ್ವಭಾವಿಯಾಗಿ ರಾಜ್ಯದ ನಾಲ್ಕು ಸ್ಥಳಗಳಿಂದ ಪಾದಯಾತ್ರೆ ಸಂಘಟಿಸಲಾಗುವುದು. ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಮತ್ತು ರಾಮನಗರದಿಂದ ಆರಂಭವಾಗಿ ರ್‍ಯಾಲಿಯ ಸಮಯಕ್ಕೆ ಬೆಂಗಳೂರು ತಲುಪುವ ಈ ನಾಲ್ಕು ಪಾದಯಾತ್ರೆಗಳಲ್ಲಿ ಕೂಡ ಸಾವಿರಾರು ರೈತರು ಪಾಲ್ಗೊಳ್ಳಲಿದ್ದಾರೆ.

ಭೂಮಿ ಹಕ್ಕು ಮತ್ತು ಮನೆ ನಿವೇಶನದ ವಿಷಯದ ಮೇಲೆ ನಿರಂತರವಾಗಿ ಹೋರಾಟ ಮತ್ತು ಚಳವಳಿಗಳನ್ನು ಸಂಘಟಿಸುತ್ತಿರುವ ಪ್ರಾಂತ ರೈತ ಸಂಘ ಆಗಸ್ಟ್ ಹದಿನೈದರ ನಂತರ ತಾಲೂಕು ಮಟ್ಟದ ರೈತ–ಕೂಲಿಕಾರರ ಸಮಾವೇಶಗಳನ್ನು ಸಂಘಟಿಸಿ ಅಲ್ಲಿ ಹೋರಾಟ ಸಮಿತಿಗಳನ್ನು ರಚಿಸಲಾಗುವುದು. ಸೆಪ್ಟೆಂಬರ್ ತಿಂಗಳಲ್ಲಿ ಮೂರು ದಿನಗಳ ಕಾಲ ಎಲ್ಲಾ ತಾಲ್ಲೂಕು ತಹಶಿಲ್ದಾರರ ಕಛೇರಿ ಎದುರು ದರಣಿ ಸತ್ಯಾಗ್ರಹ ಸಂಘಟಿಸಲಾಗುವುದು.

ರೈತ ಸಂಘದ ಕಾರ್ಯಕರ್ತರು ಮತ್ತು ಮುಖಂಡರುಗಳಿಗೆ ತರಬೇತಿ ನೀಡಲು ರಾಜ್ಯ ಮಟ್ಟದ ಮೂರು ದಿನಗಳ ಅಧ್ಯಯನ ಮತ್ತು ತರಬೇತಿ ಶಿಬಿರವು ದೊಡ್ಡಬಳ್ಳಾಪುರದಲ್ಲಿ ಜರುಗಿತು. 2019 ಜೂನ್ 10 ರಿಂದ 12ರ ವರೆಗೆ ಡಾ. ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರದಲ್ಲಿ ನಡೆದ ಈ ಶಿಭಿರದಲ್ಲಿ ರಾಜ್ಯದ ಇನ್ನೂರಕ್ಕೂ ಹೆಚ್ಚಿನ ಪ್ರತಿನಿಧಿಗಳು ಭಾಗವಹಿಸಿದ್ದರು. ಶಿಬಿರದ ಉದ್ಘಾಟಿಸಿ ಮಾತನಾಡಿದ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾದ, ಮಹಾರಾಷ್ಟ್ರದ ದೀರೋದ್ದಾತ ರೈತ ಹೋರಾಟದ ನಾಯಕರೂ ಆದ ಸಂಗಾತಿ ಅಶೋಕ್ ದವಳೆಯವರು ಮೋದಿ ನೇತೃತ್ವದ ಕೋಮುವಾದಿ ಕೇಂದ್ರ ಸರ್ಕಾರದ ಜನ ವಿರೋಧಿ, ರೈತ ವಿರೋಧಿ ಕಾರ್ಪೋರೇಟ್ ಪರ ನೀತಿಗಳ ವಿರುದ್ದ ಎಲ್ಲಾ ರೈತ ಸಂಘಗಳು ಜಂಟಿಯಾಗಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಐದು ವರ್ಷಗಳ ದುರಾಡಳಿತದ ನಂತರ ಈ ಜನ ವಿರೋಧಿ ಸರ್ಕಾರ ಹೆಚ್ಚಿನ ವೋಟು ಮತ್ತು ಸೀಟುಗಳೊಡನೆ ಅಧಿಕಾರಕ್ಕೆ ಮರಳಿದೆ. ಪುಲ್ವಾಮ ಮತ್ತು ಬಾಲಕೋಟ್ ನಂತರದ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ಅಬ್ಬರದ ರಾಷ್ಟ್ರೀಯತೆಯನ್ನು ಮುಂದು ಮಾಡಿ ಜನರನ್ನು ಭಾವನಾತ್ಮಕವಾಗಿ ಕೆರಳಿಸಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದೆ ಆದರೆ ಈ ಸರ್ಕಾರ ಯಾವುದೇ ಕಾರಣಕ್ಕೂ ಜನರ ಹಿತಕ್ಕಾಗಿ ಕೆಲಸ ಮಾಡುವುದಿಲ್ಲ ಎಂಬುದು ಡಾ. ದವಳೆ ಹೇಳಿದರು. ಲವ್ ಜಿಹಾದ್, ಘರ್ ವಾಪ್ಸಿ ಮತ್ತು ಗೋ ಸಂರಕ್ಷಣೆ ಹೆಸರಿನಲ್ಲಿ ಕೋಮು ಧೃವೀಕರಣ ನಡೆಸಿ ಮತ್ತು ಕಾರ್ಪೋರೇಟ್ ವಲಯದ ಹಣ ಮತ್ತು ಮಾಧ್ಯಮದ ಬಲ ಬಳಸಿ ಮೋದಿಯವರು ಮತ್ತೆ ಅಧಿಕಾರ ಹಿಡಿದಿದ್ದಾರೆ. ಚುನಾವಣೆಯಲ್ಲಿ ಖರ್ಚು ಮಾಡಲಾದ 60,000 ಕೋಟಿ ರೂಪಾಯಿಗಳಲ್ಲಿ ಬಿಜೆಪಿ ಒಂದೇ 27,000 ಕೋಟಿ ಖರ್ಚು ಮಾಡಿದೆ. ಈ ರೀತಿಯಲ್ಲಿ ಹಣದ ಹೊಳೆ ಹರಿಸಲು ಚುನಾವಣಾ ಬಾಂಡ್ಗಳ ಮೂಲಕ ಅಕ್ರಮವಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಸಂಗ್ರಹಿಸಲಾಗಿದೆ ಎಂದು ಕಿಸಾನ್ ಸಭಾ ಅಧ್ಯಕ್ಷರು ಆರೋಪಿಸಿದರು.

ಸ್ವಾತಂತ್ರ್ಯದ ನಂತರ ಜನರಿಗಾಗಿ ಏನೂ ಮಾಡದೆ ಅಧಿಕಾರಕ್ಕೆ ಮರಳಿದ ಏಕೈಕ ಸರ್ಕಾರ ಇದು. ಇದು ಶ್ರೀಮಂತರು ಮತ್ತಷ್ಟು ಶ್ರೀಮಂತರಾಗಲು ಕೆಲಸ ಮಾಡಿದ ಸರ್ಕಾರ ಅಂಬಾನಿಯ ಆಸ್ತಿ 2014ರಲ್ಲಿ 23 ಬಿಲಿಯನ್ ಡಾಲರ್ ಇದ್ದದ್ದು 2018 ರಲ್ಲಿ 55 ಬಿಲಿಯನ್ ಡಾಲರ್ ಗಳಿಗೆ ಏರಿಕೆಯಾಗಿದೆ. ಹಾಗೆಯೇ ಅದಾನಿ,ರಾಮ್ದೇವ್ ಅಂತವರ ಆಸ್ತಿಗಳು ವಿಪರೀತವಾಗಿ ಬೆಳೆದಿವೆ ಎಂದು ವಿವರಿಸಿದರು.

ಈ ಮೋದಿ ಸರ್ಕಾರ ಚುನಾವಣಾ ಆಯೋಗದಿಂದ ಹಿಡಿದು ಸುಪ್ರೀಂ ಕೋರ್ಟ್ ವರೆಗೆ ಎಲ್ಲಾ ಸಾಂವಿಧಾನಿಕ ಸಂಸ್ಥೆಗಳನ್ನು ನಾಶ ಮಾಡಿದೆ. ಜಾತ್ಯಾತೀತ ವಿರೋಧ ಪಕ್ಷಗಳ ಅನೈಕ್ಯತೆ ಮತ್ತು ಉತ್ತರ ಪ್ರದೇಶವೂ ಸೇರಿದಂತೆ ಅನೇಕ ರಾಜ್ಯಗಳಲ್ಲಿ ವಿರೋಧ ಪಕ್ಷಗಳು ಪರಸ್ಪರ ಅವುಗಳೇ ವಿರುದ್ಧವಾಗಿ ಸ್ಪರ್ಧಿಸಿದ ಕಾರಣದಿಂದಲೂ ಮೋದಿ ಗೆಲುವಿಗೆ ಅನುಕೂಲವಾಯಿತು ಎಂದು ವಿಷಾದ ವ್ಯಕ್ತಪಡಿಸಿದರು.

ಆದರೆ ಮೋದಿ ಸರ್ಕಾರ ಖಂಡಿತವಾಗಿಯೂ ರೈತ ವಿರೋಧಿಯಾದ ನೀತಿಗಳನ್ನು ತರುತ್ತದೆ. ಉದಾರೀಕರಣ ನೀತಿಗಳನ್ನು ಮತ್ತಷ್ಟು ಆಕ್ರಮಣಕಾರಿಯಾಗಿ ಜಾರಿ ಮಾಡುತ್ತದೆ. ಭೂ ಕಾನೂನುಗಳಿಗೆ ತಿದ್ದುಪಡಿ ತಂದು ರೈತರ ಭೂಮಿ ಕಬಳಿಸುತ್ತದೆ. ಆದ್ದರಿಂದ ಹೋರಾಟಗಳೂ ತೀವ್ರವಾಗಿ ಹೆಚ್ಚಾಗುತ್ತವೆ ಎಂದರು. ಎಲ್ಲರೂ ಜೊತೆಯಾಗಿ ಹೋರಾಡುವ ಮೂಲಕ ಈ ನೀತಿಗಳನ್ನು ಸೋಲಿಸಬೇಕು ಮತ್ತು ದೇಶದ ಜಾತ್ಯಾತೀತ ಪರಂಪರೆಯನ್ನು ಕಾಪಾಡಿಕೊಳ್ಳಲು ಶ್ರಮಿಸಬೇಕು ಎಂದು ಕರೆ ನೀಡಿದರು. ವೇದಿಕೆಯಲ್ಲಿ ರಾಜ್ಯ ಅಧ್ಯಕ್ಷರಾದ ಬಯ್ಯಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಯು.ಬಸವರಾಜ್ ಸೇರಿದಂತೆ ಅನೇಕರು ಹಾಜರಿದ್ದರು.

**ಟಿ.ಎಲ್. ಕೃಷ್ಣೇಗೌಡ**

# ದ.ಕ.ಜಿಲ್ಲೆಯಲ್ಲಿ ಸಿಐಟಿಯು ಸುವರ್ಣ ಮಹೋತ್ಸವಕ್ಕೆ ಸಿದ್ಧತೆ

ದೇಶದ ಕಾರ್ಮಿಕ ಚಳುವಳಿಯ ಶತಮಾನೋತ್ಸವ ಹಾಗೂ ಸಿಐಟಿಯು ಸಂಘಟನೆಯ ಸುವರ್ಣಮಹೋತ್ಸವವನ್ನು ದೇಶಾದ್ಯಂತ ಆಚರಿಸಬೇಕೆಂದು ಸಿಐಟಿಯು ಘಟಕಗಳಿಗೆ ಕರೆಕೊಟ್ಟ ಮೇರೆಗೆ ದ.ಕ.ಜಿಲ್ಲೆಯಲ್ಲಿಯೂ ಆಚರಣೆಗೆ ಸಿದ್ಧತೆಗಳು ಆರಂಭವಾಗಿವೆ. ಕಳೆದ ಮೇ 30 ರಂದು 7 ಕಡೆ ವಲಯ ಘಟಕಗಳು ಸಿಐಟಿಯು ಧ್ವಜದ ಆರೋಹಣ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಆಚರಣೆಗೆ ಚಾಲನೆ ಉಂಟಾಗಿದೆ.

ಒಂದು ವರ್ಷಪೂರ್ತಿ ಸುವರ್ಣಮಹೋತ್ಸವವನ್ನು ಆಚರಿಸುವುದಷ್ಟೇ ಸಂಬಂಧಿಸಿ ದ.ಕ.ಜಿಲ್ಲಾ ಮಟ್ಟದ ಆಚರಣಾ ಸಮಿತಿ ರಚನೆಗಾಗಿ ಜೂನ್ 25 ರಂದು ಮಂಗಳೂರಿನಲ್ಲಿ ಕಾರ್ಮಿಕ ಸಂಘಟನೆಗಳು, ಹಿತೈಷಿಗಳನ್ನೊಳಗೊಂಡ ಸಹಮನಸ್ಕರ ಸಭೆಯನ್ನು ಕರೆಯಲಾಗಿತ್ತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ ಅವರು, ಇಂದು ದೇಶವನ್ನು ಆಳುತ್ತಿರುವ ಸರಕಾರಗಳ ನೀತಿಯಿಂದಾಗಿ ಒಂದೆಡೆ ಬಂಡವಾಳಶಾಹಿ ಬಲಿಷ್ಟಗೊಳ್ಳುತ್ತಿದ್ದರೆ ಇನ್ನೊಂದೆಡೆ ಕಾರ್ಮಿಕರು ಹಾಗೂ ನೌಕರರು ಗಳಿಸಿಕೊಂಡಿರುವ ಸವಲತ್ತನ್ನು ಕಳೆದುಕೊಳ್ಳುತ್ತಿರುವ ಪರಿಸ್ಥಿತಿ ಉಂಟಾಗಿದೆ. ಯುವಜನರಿಗೆ ಉದ್ಯೋಗ ಲಭ್ಯವಿಲ್ಲದಾಗಿದೆ. ಇಂಥ ನೀತಿಗಳನ್ನು ಹಿಮ್ಮೆಟ್ಟಿಸಲು ಸಮರಶೀಲ ಹೋರಾಟಗಳನ್ನು ರೂಪಿಸಲು ಕರೆ ನೀಡಿದರು.

ಸಿಐಟಿಯು ದ.ಕ.ಜಿಲ್ಲಾ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ್ವಾಗತಿಸಿ, ಸುವರ್ಣಮಹೋತ್ಸವದಲ್ಲಿ ಮಾಡಬಹುದಾದ ಕಾರ್ಯಕ್ರಮಗಳ ಪ್ರಸ್ತಾವನೆ ಮಂಡಿಸಿದರು. ಇದಕ್ಕೆ ಪೂರಕವಾಗಿ ಬ್ಯಾಂಕ್ ನೌಕರರ ಸಂಘಟನೆಯ ಬಿ.ಎಂ.ಮಾಧವ, ವಿಮಾ ನೌಕರರ ಸಂಘಟನೆಯ ಬಿ.ಎನ್.ದೇವಾಡಿಗ, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ್, ಡಾ.ಕೃಷ್ಣಪ್ಪ ಕೊಂಚಾಡಿ, ಪ್ರಾಂತ ರೈತ ಸಂಘದ ಯಾದವ ಶೆಟ್ಟಿ, ದಕ್ಷಿಣ ರೈಲ್ವೆ ನೌಕರರ ಸಂಘಟನೆಯ ಲಕ್ಷ್ಮಣನ್, ಡಿವೈಎಫ್ಐನ ಸಂತೋಷ್ ಬಜಾಲ್, ಎಸ್ಎಫ್ಐನ ಮಾಧುರಿ ಬೋಳಾರ್ ಮಾತನಾಡಿದರು. ಸಿಐಟಿಯು ಜಿಲ್ಲಾ ಸಮಿತಿ ಖಜಾಂಚಿ ಯೋಗೀಶ್ ಜಪ್ಪಿನಮೊಗರು ವಂದಿಸಿದರು.

ದ.ಕ.ಜಿಲ್ಲಾ ಮಟ್ಟದ ಸುವರ್ಣಮಹೋತ್ಸವ ಆಚರಣಾ ಸಮಿತಿಯನ್ನು ಈ ಸಭೆಯಲ್ಲಿ ರಚಿಸಲಾಗಿದ್ದು, ವಸಂತ ಆಚಾರಿ ಗೌರವಾಧ್ಯಕ್ಷರಾಗಿರುತ್ತಾರೆ. ಜೆ.ಬಾಲಕೃಷ್ಣ ಶೆಟ್ಟಿ ಕಾರ್ಯದರ್ಶಿಯಾಗಿ, ಸುನಿಲ್ ಕುಮಾರ್ ಬಜಾಲ್ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಯೋಗೀಶ್ ಜಪ್ಪಿನಮೊಗರು ಖಜಾಂಚಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಕಾರ್ಮಿಕ ನೌಕರ ಸಂಘಟನೆಗಳ ಮತ್ತು ಪ್ರಗತಿಪರ ಸಂಘಟನೆಗಳ ಪ್ರಮುಖರು ಈ ಆಚರಣಾ ಸಮಿತಿ ಸದಸ್ಯರಾಗಿರುತ್ತಾರೆ.

ವರದಿ: **ವಾ.ಉ.**



# ಡಿವೈಎಫ್ಐ ಕೊಂಚಾಡಿ ಘಟಕ ಸಮ್ಮೇಳನ

ನಮ್ಮ ದೇಶದ ಯುವಜನತೆ ಗಂಭೀರ ಸಮಸ್ಯೆಗಳಲ್ಲಿ ಸಿಕ್ಕಿ ತೊಳಲಾಡುತ್ತಿದ್ದಾರೆ. ಆಳುವ ಸರಕಾರಗಳ ತಪ್ಪಾದ ನೀತಿಯಿಂದಾಗಿ ಯುವಜನ ಉದ್ಯೋಗದ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಪ್ರತಿ ವರುಷ 2 ಕೋಟಿ ಉದ್ಯೋಗ ಸೃಷ್ಟಿಸುತೇವೆಂದು ಭರವಸೆ ನೀಡಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಕೇಂದ್ರಸರಕಾರ ಈವರೆಗು ಉದ್ಯೋಗ ಸೃಷ್ಟಿಸಿಲ್ಲ. ದೇಶವನ್ನು ಕಾಡುವ ಈ ಎಲ್ಲಾ ಪ್ರಶ್ನೆ ನಮ್ಮ ಜಿಲ್ಲೆಯಲ್ಲೂ ಭಾದಿಸುತ್ತಿದ್ದೆ. ಈ ಹಿನ್ನಲೆಯಲ್ಲಿ ನಾವೆಲ್ಲ ಉದ್ಯೋಗದ ಹಕ್ಕನ್ನು ಪಡೆಯಬೇಕಾದರೆ ಯುವಜನ ವರ್ಗ ಸಂಘಟಿತರಾಗಿ ಬೀದಿಗಿಳಿಯಬೇಕಾಗಿದೆ ಎಂದು ಡಿವೈಎಫ್ಐ ದ.ಕ ಜಿಲ್ಲಾ ಮುಖಂಡರಾದ ಮನೋಜ್ ವಾಮಂಜೂರು ನಿನ್ನೆ ಕೊಂಚಾಡಿಯಲ್ಲಿ ನಡೆದ ಡಿವೈಎಫ್ಐ ಘಟಕ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಡಿವೈಎಫ್ಐ ದ.ಕ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಡಿವೈಎಫ್ಐ ನಗರಾಧ್ಯಕ್ಷರಾದ ನವೀನ್ ಕೊಂಚಾಡಿ, ಸ್ಥಳೀಯ ಕಾರ್ಮಿಕ ಮುಖಂಡರಾದ ರವಿಚಂದ್ರ ಕೊಂಚಾಡಿ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಪಾಂಡುರಂಗ ಕೊಂಚಾಡಿ ವಹಿಸಿದ್ದರು. ಸಮ್ಮೇಳನದಲ್ಲಿ ಮುಂದಿನ ಸಾಲಿನ ನೂತನ ಸಮಿತಿಯನ್ನು ರಚಿಸಲಾಯಿತು. ಅದ್ಯಕ್ಷರಾಗಿ ಪದ್ಮನಾಭ ಕೊಂಚಾಡಿ ಕಾರ್ಯದರ್ಶಿ ಯಾಗಿ ಪ್ರವೀಣ್ ಕೊಂಚಾಡಿ ಹಾಗೂ 15 ಸದಸ್ಯರನ್ನೊಳಗೊಂಡ ಸಮಿತಿ ಆಯ್ಕೆಮಾಡಲಾಯಿತು.

# ಅನಧಿಕೃತ ಮದ್ಯದಂಗಡಿ ಬಂದ್ ಮಾಡುವಂತೆ ಡಿವೈಎಫ್ಐ ಒತ್ತಾಯ

ತೊಕ್ಕೊಟ್ಟು (ಜೂ 21) : ಹರೇಕಳ ಗ್ರಾಮದ ಗ್ರಾಮ ಚಾವಡಿ ಜಂಕ್ಷನ್ ಬಳಿ ಅನಧಿಕೃತವಾಗಿ ತೆರೆದಿರುವ ಮದ್ಯದಂಗಡಿಯನ್ನು ಕೂಡಲೇ ಬಂದ್ ಮಾಡುವಂತೆ ಡಿವೈಎಫ್ಐ ಹರೇಕಳ ಗ್ರಾಮ ಸಮಿತಿ ಒತ್ತಾಯಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಹರೇಕಳ ಡಿವೈಎಫ್ಐ ಮುಖಂಡ ರಫೀಕ್ ಹರೇಕಳ, ಸ್ಥಳೀಯ ಗ್ರಾಮ ಪಂಚಾಯತಿಯ ಪರವಾನಿಗೆಯನ್ನು ಪಡೆಯದೇ ಗ್ರಾಮದಲ್ಲಿ ಅಕ್ರಮ ಮದ್ಯದಂಗಡಿ ತೆರೆಯಲಾಗಿದೆ. ಇದರ ಪಕ್ಕದಲ್ಲೇ ಶಾಲೆ, ಮಹಿಳಾ ಹೊಲಿಗೆ ತರಬೇತಿ ಕೇಂದ್ರ, ಧಾರ್ಮಿಕ ಕೇಂದ್ರಗಳು ಹಾಗೂ ಜನವಸತಿ ಪ್ರದೇಶ ಇರುವುದರಿಂದ ಮುಂದೆ ಬಹಳಷ್ಟು ಸಮಸ್ಯೆಗಳು ಉದ್ಭವಿಸಲಿವೆ ಎಂಬ ಆತಂಕ ಸ್ಥಳೀಯರಲ್ಲಿ ಮನೆಮಾಡಿವೆ. ಮಾತ್ರವಲ್ಲ ಇಲ್ಲಿ ಹೆಚ್ಚಾಗಿ ಕೂಲಿ ಕೆಲಸ ಮಾಡಿ ಬದುಕುವ ಬಡವರು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದ ಜನರೇ ಹೆಚ್ಚಾಗಿ ವಾಸಿಸುತ್ತಿರುವುದರಿಂದ ಮುಂದೆ ಅವರು ಮದ್ಯದ ದಾಸ್ಯಕ್ಕೆ ತುತ್ತಾಗಿ ಕುಟುಂಬ ಸಹಿತ ಬೀದಿಪಾಲಾಗುವ ಭಯವು ಮಹಿಳೆಯರನ್ನು ಕಾಡತೊಡಗಿದೆ. ಅಲ್ಲದೆ ಶಿಕ್ಷಣ ಕೇಂದ್ರಗಳ ಬಳಿ ಮದ್ಯದಂಗಡಿ ತೆರೆಯಬಾರದೆಂಬ ಕಾನೂನು ಇದ್ದರೂ ಅದೆಲ್ಲವನ್ನ ಗಾಳಿಗೆ ತೂರಿ ಅನಧಿಕೃತವಾಗಿ ಮದ್ಯದಂಗಡಿ ಪ್ರಾರಂಭಗೊಂಡಿರುತ್ತದೆ. ಈಗಾಗಲೇ ಈ ರೀತಿ ದಿಢೀರನೆ ಪ್ರಾರಂಭಗೊಂಡಿರುವ ಮದ್ಯದಂಗಡಿಯನ್ನು ಮುಚ್ಚಲು ಒತ್ತಾಯಿಸಿ ಇಂದು ಊರ ನಾಗರಿಕರು ಪ್ರತಿಭಟನೆಯನ್ನು ಹಮ್ಮಿಕೊಂಡಿರುತ್ತಾರೆ. ಈ ಪ್ರತಿಭಟನೆಯನ್ನು ಡಿವೈಎಫ್ಐ ಹರೇಕಳ ಗ್ರಾಮ ಸಮಿತಿ ಬೆಂಬಲಿಸಿವೆ ಮುಂದೆ ಸಮಸ್ಯೆ ಇತ್ಯರ್ಥಗೊಳ್ಳುವವರೆಗೂ ಊರ ನಾಗರಿಕರ ಸಹಕಾರದೊಂದಿಗೆ ಹೋರಾಟ ಕೈಗೊಳ್ಳಲಿವೆ ಎಂಬ ಎಚ್ಚರಿಕೆಯನ್ನು ನೀಡಿರುತ್ತಾರೆ.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಬಗ್ಗೆ ಗಮನ ಹರಿಸಿ ಪ್ರಾರಂಭಗೊಂಡಿರುವ ಅನಧಿಕೃತ ಮದ್ಯದಂಗಡಿಯನ್ನು ಮುಚ್ಚಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

**ರಫೀಕ್ ಹರೇಕಳ**

# ಪ್ರಾಣವನ್ನು ಮುಡಿಪಾಗಿಡುವೆವೆ ಹೊರತು ರಾಜಿ ಮಾಡ್ಕೊಳ್ಳುವ ಪ್ರಶ್ನೆಯೇ ಇಲ್ಲ– ಸಂತೋಷ್ ಬಜಾಲ್

ಇಂದು ದೇಶವನ್ನು ಆಳುವಂತಹ ವ್ಯವಸ್ಥೆ ಬಹಳ ವ್ಯವಸ್ಥಿತವಾಗಿ ನಮ್ಮ ಸಂವಿಧಾನದ ಆಶಯವನ್ನು, ಪ್ರಜಾಪ್ರಭುತ್ವ ಮೌಲ್ಯಗಳನ್ನು ಬುಡಮೇಲು ಮಾಡಲು ಹೊರಟಿದೆ. ಇಂತಹ ದೇಶವಿರೋಧಿ, ಜನವಿರೋಧಿ ನೀತಿಗಳ ವಿರುದ್ಧ ಸಂವಿಧಾನದ ರಕ್ಷಣೆಗಾಗಿ, ಕೋಮು ಸೌಹಾರ್ದತೆಗಾಗಿ ಮತ್ತು ನವ ಸಮಾಜದ ನಿರ್ಮಾಣಕ್ಕಾಗಿ ನಡೆಯುವ ಹೋರಾಟದಲ್ಲಿ ನಮ್ಮ ಪ್ರಾಣವನ್ನೇ ಮುಡಿಪಾಗಿಡುವೆವೆ ಹೊರತು ರಾಜಿ ಮಾಡ್ಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಡಿವೈಎಫ್ಐ ದ.ಕ ಜಿಲ್ಲಾಕಾರ್ಯದರ್ಶಿ ಸಂತೋಷ್ ಬಜಾಲ್ ಅವರು ಇಂದು ಪಕ್ಕಲಡ್ಕದಲ್ಲಿ 17 ವರುಷದ ಹಿಂದೆ ಕೋಮುವಾದಿಗಳ ಅಟ್ಟಹಾಸಕ್ಕೆ ಬಲಿಯಾದ ಕಾಂ ಶ್ರೀನಿವಾಸ್ ಬಜಾಲ್ ಅವರ ಹುತಾತ್ಮ ದಿನಾಚರಣೆಯ ಅಂಗವಾಗಿ ನಡೆದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ದೇಶದ ಬಡವರ ನೆಮ್ಮದಿಯ ಬದುಕಿಗಾಗಿ, ಸೌಹಾರ್ದ ಪರಂಪರೆಯ ಉಳಿವಿಗಾಗಿ ಹೋರಾಡುತ್ತಿರುವ ಎಡಪಂಥೀಯ ನಾಯಕರುಗಳನ್ನು, ಕಾರ್ಯಕರ್ತರನ್ನು ಇಲ್ಲವಾಗಿಸುವ ಕೃತ್ಯವನ್ನು ಕೋಮುವಾದಿ ನರಹಂತಕರು ಮಾಡುತ್ತಾ ಬಂದಿದ್ದಾರೆ. ಇಂತಹ ಹೋರಾಟದಲ್ಲಿ ಮಡಿದವರಲ್ಲೊಬ್ಬರಾದ ನಮ್ಮೆಲ್ಲರ ಒಡನಾಡಿ ಶ್ರೀನಿವಾಸ್ ಬಜಾಲ್ ಅವರಿಂದ ಹಿಡಿದು ಎಂ ಎಂ ಕಲಬುರ್ಗಿ, ನರೇಂದ್ರ ದಾಬೋಲ್ಕರ್, ಗೋವಿಂದ ಪನ್ಸಾರೆ, ಗೌರಿ ಲಂಕೇಶ್ ಅವರಂತಹ ಪ್ರಗತಿಪರರನ್ನು ಹತ್ಯೆ ಮಾಡುವ ಮೂಲಕ ಅವರ ವಿಚಾರಧಾರೆಗಳನ್ನು ಧಮನಿಸಲು ಹೊರಟಿದ ಶಕ್ತಿಗಳನ್ನು ದೇಶವನ್ನಾಳುವ ರಾಜಕೀಯ ವ್ಯವಸ್ಥೆಯು ಪ್ರೇರೇಪಿಸುತ್ತಿರುವುದು ದುರಂತದ ಸಂಗತಿ. ಇಂತಹ ಮತಾಂದತೆಯನ್ನು ಪೋಷಿಸುವ ವ್ಯವಸ್ಥೆ ಅದೆಷ್ಟೇ ಎಡಪಂಥೀಯ ಕಾರ್ಯಕರ್ತರನ್ನು, ಪ್ರಗತಿಪರರನ್ನು ಕೊಂದರೂ ಅವರ ಜೀಪಪರ ವಿಚಾರಧಾರೆಗಳಿಗೆಂದೂ ಸಾವಿಲ್ಲ ಅನ್ನೋದು ಅಷ್ಟೇ ಸತ್ಯ. ಕ್ರಾಂತಿಕಾತಿಗಳಿಗೆಂದೂ ಸಾವಿಲ್ಲ ಅವರೆಂದೂ ಸಾಯುವುದಿಲ್ಲ. ಅವರೆಲ್ಲರ ತ್ಯಾಗ, ಆದರ್ಶಗಳನ್ನು ಮುನ್ನಡೆಸುವ ಮನಸ್ಸುಗಳು ಮತ್ತೆ ಮತ್ತೆ ಹುಟ್ಟಿಬರಲಿವೆ. ನವ ಸಮಾಜದ ನಿರ್ಮಾಣಕ್ಕಾಗಿ ನಡೆಯುವ ಹೋರಾಟಗಳಲ್ಲಿ ಆ ಎಲ್ಲಾ ಮನಸ್ಸುಗಳು ಜೊತೆಯಾಗಲಿವೆ ಎಂದರು.

ಡಿವೈಎಫ್ಐ ಹಿಂದಿನ ಮುಖಂಡರಾದ ರಾಜೇಶ್ ಈ ವೇಳೆ ಧ್ವಜಾರೋಹಣಗೈದು ಮಾತನಾಡಿದರು. ಶ್ರೀನಿವಾಸ್ ಬಜಾಲ್ ಆ ದಿನ ರೋಗಿಯೊಬ್ಬರಿಗೆ ರಕ್ತದಾನ ಮಾಡಲೆಂದು ಬೇಗನೆ ಹೊರಟಾಗ ಕೋಮುವಾದಿ ನರಹಂತಕರು ಅವರನ್ನು ಹೊಂಚುಹಾಕಿ ಕೊಂದರು. ಶ್ರೀನಿವಾಸ್ ಆ ಪ್ರದೇಶದಲ್ಲಿ ಪರೋಪಕಾರಿಯಾಗಿದ್ದ, ಬಡವರ ಕಷ್ಟ ಕಾರ್ಪಣ್ಯಗಳಿಗೆ, ಅಸಹಾಯಕರಿಗೆ ಸ್ಪಂದಿಸುವ ಗುಣವನ್ನು ಹೊಂದಿದ್ದ ಅವರ ಆದರ್ಶವನ್ನು ನಾವುಗಳು ಮುನ್ನಡೆಸಿಕೊಂಡು ಹೋಗಬೇಕೆಂದು ಹೇಳಿದರು.

ಈ ವೇಳೆ ಕಾರ್ಮಿಕ ಮುಖಂಡರಾದ ಲೋಕೇಶ್ ಎಂ, ಸುರೇಶ್ ಬಜಾಲ್, ದೀಪಕ್ ಬೊಲ್ಲ , ಅಶೋಕ್ ಸಾಲ್ಯಾನ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ನೇತೃತ್ವವನ್ನು ಡಿವೈಎಫ್ಐ ಪಕ್ಕಲಡ್ಕ ಘಟಕದ ಕಾರ್ಯದರ್ಶಿ ಪ್ರಕಾಶ್ ಶೆಟ್ಟಿ , ಧಿರಾಜ್, ನಾಗರಾಜ್ ಬಜಾಲ್, ವರಪ್ರಸಾದ್ ಕುಲಾಲ್, ಹರಿಹರನ್, ಅಖಿಲೇಶ್, ಸೋನಿಲ್ , ಅಶೋಕ್ ಎನೆಲ್ ಮಾರ್ ಮುಂತಾದವರು ವಹಿಸಿದ್ದರು.

ಕಾರ್ಯಕ್ರಮಕ್ಕೂ ಮುನ್ನ ಶ್ರೀನಿವಾಸ್ ಬಜಾಲ್ ಹತ್ಯೆಯಾದ ಸ್ಥಳದಿಂದ ಘೋಷಣೆಗಳೊಂದಿಗೆ ಪಕ್ಕಲಡ್ಕ ಬಸ್ ನಿಲ್ದಾಣದವರೆಗೂ ಮೆರವಣಿಗೆ ನಡೆಸಲಾಯಿತು.



# ಕಾರ್ಮಿಕರ ಐಕ್ಯ ಚಳುವಳಿಯಿಂದ ಮಾತ್ರವೇ ಆಳುವ ವರ್ಗಗಳ ದಮನಕಾರಿ ನೀತಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ – ವಸಂತ ಆಚಾರಿ

'ಬದಲಾದ ರಾಜಕೀಯ ಸನ್ನಿವೇಶದಲ್ಲಿ ದೇಶದ ಕಾರ್ಮಿಕ ವರ್ಗ ಮುಂದಿನ ದಿನಗಳಲ್ಲಿ ತೀವ್ರವಾದ ಸಂಕಷ್ಟಗಳನ್ನು ಅನುಭವಿಸಲಿದೆ. ದೇಶವನ್ನಾಳುವ ಕೇಂದ್ರ ಸರಕಾರವು ಬಂಡವಾಳಶಾಹಿಗಳ ಹಿತಾಸಕ್ತಿಗಳನ್ನು ಕಾಪಾಡುವ ಮೂಲಕ ಕಾರ್ಪೋರೇಟ್ ಕಂಪೆನಿಗಳ ಋಣ ಸಂದಾಯ ಮಾಡುತ್ತಿದೆ. ಕಾರ್ಮಿಕ ವರ್ಗದ ಏಳಿಗೆಗಾಗಿ ಯಾವುದೇ ಯೋಜನೆಗಳನ್ನು ಜಾರಿಗೊಳಿಸುತ್ತಿಲ್ಲ. ಕಾರ್ಮಿಕ ಕಾನೂನುಗಳನ್ನೇ ಮಾಲಕರ ಪರವಾಗಿ ತಿದ್ದುಪಡಿ ಮಾಡಿ ಕಾರ್ಮಿಕರ ಬದುಕಿಗೆ ಕೊಡಲಿಯೇಟು ನೀಡುತ್ತಿದೆ. ಕಾರ್ಮಿಕ ವರ್ಗದ ವಿರೋಧಿಯಾದ ನರೇಂದ್ರ ಮೋದಿ ಸರಕಾರವು ಮತ್ತೆ ಅಧಿಕಾರಕ್ಕೇರಿದ್ದು, ಕಾರ್ಮಿಕರ ಸಂಕಷ್ಟಗಳು ದುಪ್ಪಟ್ಟಾಗಲಿದೆ. ಕನಿಷ್ಠ ಕೂಲಿ, ಪಿಂಚಣಿ, ಸಾಮಾಜಿಕ ಭದ್ರತೆಗಾಗಿ ಹೋರಾಡುತ್ತಿರುವ ಕಾರ್ಮಿಕರು ಇಂದು ತಮ್ಮ ಉದ್ಯೋಗವನ್ನೇ ಕಳೆದುಕೊಳ್ಳುವಂತಹ ಭೀತಿಯನ್ನು ಎದುರಿಸುತ್ತಿದ್ದಾರೆ. ಇಂತಹ ಸಂಧರ್ಭದಲ್ಲಿ ಇಡೀ ದೇಶದ ಕಾರ್ಮಿಕ ವರ್ಗ ಒಂದಾಗಿ ನಿಂತು ಆಳುವ ವರ್ಗಗಳ ದಮನಕಾರಿ ನೀತಿಗಳನ್ನು ಹಿಮ್ಮೆಟ್ಟಿಸಲು ಸಮರಶೀಲ ಹೋರಾಟಗಳನ್ನು ರೂಪಿಸಬೇಕಾಗಿದೆ' ಎಂದು ಸಿಐಟಿಯು ಕರ್ನಾಟಕ ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಅಭಿಪ್ರಾಯ ಪಟ್ಟರು.




ಅವರು ನಗರದ ಎನ್‌ಜಿಒ ಸಭಾಂಗಣದಲ್ಲಿ ಜರುಗಿದ ಸಿಐಟಿಯುನ ಸುವರ್ಣ ಮಹೋತ್ಸವ ಆಚರಣಾ ಸಮಿತಿ ರಚನಾ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ದೇಶದ ಕಾರ್ಮಿಕ ವರ್ಗದ ಚಳುವಳಿಗೆ ಶತಮಾನೋತ್ಸವದ ಸಂಭ್ರಮ ಹಾಗೂ ಕಾರ್ಮಿಕ ಚಳುವಳಿಯ ಧ್ರುವತಾರೆ ಸಿಐಟಿಯುಗೆ ಸುವರ್ಣ ಮಹೋತ್ಸವದ ಸಂಭ್ರಮವನ್ನು ದ.ಕ. ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳ ಮೂಲಕ ವ್ಯವಸ್ಥಿತವಾಗಿ ಆಚರಿಸುವ ಸಲುವಾಗಿ ಈ ಸಭೆಯನ್ನು ಆಯೋಜಿಸಲಾಗಿತ್ತು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, 'ದೇಶದ ಸ್ವಾತಂತ್ರ್ಯ ಚಳುವಳಿಗೆ ದೀರ್ಘಕಾಲದ ಇತಿಹಾಸವಿದ್ದರೂ,ಅದು ಇನ್ನಷ್ಟು ಪ್ರಖರವಾಗಿ ಹರಿತತೆಯನ್ನು ಪಡೆಯಲು ಸಾಧ್ಯವಾಗಿರುವುದು ದೇಶದ ಕಾರ್ಮಿಕ ವರ್ಗದ ಚಳುವಳಿಯಿಂದಾಗಿ ಎಂಬುದನ್ನು ಮರೆಯಬಾರದು. 1920ರಲ್ಲಿ ಜನ್ಮತಾಳಿದ ಕೇಂದ್ರ ಕಾರ್ಮಿಕ ಸಂಘಟನೆಯು ಇಡೀ ದೇಶದ ಕಾರ್ಮಿಕರ ಬದುಕಿಗಾಗಿ ನಡೆಸಿದ ಹೋರಾಟಗಳನ್ನು ಸ್ವಾತಂತ್ರ್ಯ ಚಳುವಳಿಯೊಂದಿಗೆ ಮಿಳಿತಗೊಳಿಸಿ ಬ್ರಿಟೀಷರ ನಿದ್ದೆಗೆಡಿಸಲು ಸಾಧ್ಯವಾಗಿದೆ. ಕಳೆದ 100 ವರ್ಷಗಳಲ್ಲಿ ವಿವಿಧ ವಿಭಾಗದ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಾ ತ್ಯಾಗಬಲಿದಾನದ ಪರಂಪರೆಯನ್ನು ಹೊಂದಿದ್ದಾರೆ. ಕಾರ್ಮಿಕರ ಪ್ರತಿಯೊಂದು ಕಾನೂನುಗಳು ರೂಪುಗೊಳ್ಳಲು ಅದರ ಹಿಂದೆ ಸಮರಶೀಲ ಹೋರಾಟವಿದೆ. ದ.ಕ. ಜಿಲ್ಲೆಯಲ್ಲಿಯೂ ಕೂಡ ಸ್ವಾತಂತ್ರ್ಯಪೂರ್ವದಿಂದಲೇ ಕಾರ್ಮಿಕ ಚಳುವಳಿಯ ಪರಂಪರೆ ಇದ್ದು, ಅದನ್ನು ಪ್ರಸ್ತುತ ಜಿಲ್ಲೆಯ ಜನತೆಗೆ ತಿಳಿಸಬೇಕಾಗಿದೆ. ಕರಾವಳಿ ಜಿಲ್ಲೆಗಳು ಶಾಂತಿ ಸೌಹಾರ್ದತೆಗೆ ಹೆಸರುವಾಸಿಯಾಗಲು ಇಲ್ಲಿನ ಕಾರ್ಮಿಕ ವರ್ಗದ ಐಕ್ಯ ಚಳುವಳಿ ಕಾರಣ ಎಂಬುವುದರಲ್ಲಿ ಎರಡು ಮಾತಿಲ್ಲ' ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು, ಇಡೀ ದೇಶದಲ್ಲಿ ಕಾರ್ಮಿಕ ವರ್ಗ ನಡೆಸಿದ ಅನೇಕ ಧೀರೋದತ್ತ ಹೋರಾಟಗಳನ್ನು ಮೆಲುಕು ಹಾಕುತ್ತಾ, ದೇಶದ ಸ್ವಾತಂತ್ರ್ಯ, ಐಕ್ಯತೆ, ಸಮಗ್ರತೆ, ಸೌಹಾರ್ದತೆಯನ್ನು ಕಾಪಾಡುವಲ್ಲಿ ಕಾರ್ಮಿಕ ವರ್ಗ ವಹಿಸಿದ ಪ್ರಧಾನ ಪಾತ್ರವನ್ನು ಸ್ಮರಿಸಿದರು. ವೇದಿಕೆಯಲ್ಲಿ ಸಿಐಟಿಯು ಜಿಲ್ಲಾ ಮುಖಂಡರಾದ ಯು.ಬಿ. ಲೋಕಯ್ಯ, ಪದ್ಮಾವತಿ ಶೆಟ್ಟಿ, ಯೋಗೀಶ್ ಜಪ್ಪಿನಮೊಗರುರವರು ಉಪಸ್ಥಿತರಿದ್ದರು.

ಸಭೆಯಲ್ಲಿ ವಿವಿಧ ವಿಭಾಗದ ಕಾರ್ಮಿಕರ ಸಂಘಟನೆಗಳ ಮುಖಂಡರು, ಮಧ್ಯಮ ವರ್ಗದ ನೌಕರರ ಸಂಘಟನೆಗಳಾದ ಬ್ಯಾಂಕ್, ವಿಮೆ, ರೈಲ್ವೇ, BSNL, RMS, ಸಂಘಟನೆಗಳ ನಾಯಕರು, ವಿದ್ಯಾರ್ಥಿ–ಯುವಜನ–ಮಹಿಳಾ–ರೈತ–ವಕೀಲರ ಸಂಘಟನೆಗಳ ಮುಖಂಡರು ಹಾಗೂ ಪ್ರಗತಿಪರ ಚಿಂತಕರು, ಜನಪರ ಹೋರಾಟಗಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ವರ್ಷವಿಡೀ ನಡೆಸುವ ಸುವರ್ಣ ಮಹೋತ್ಸವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಆಚರಿಸಲು ವಿವಿಧ ಸಂಘಟನೆಗಳ ಮುಖಂಡರಾದ ಬಿ.ಎಂ. ಮಾಧವ, ವಾಸುದೇವ ಉಚ್ಚಿಲ್, ಡಾ. ಕೃಷ್ಣಪ್ಪ ಕೊಂಚಾಡಿ, ಯಾದವ ಶೆಟ್ಟಿ, ಸಂತೋಷ್ ಬಜಾಲ್, ಬಿ.ಎನ್. ದೇವಾಡಿಗ, ಲಕ್ಷ್ಮಣನ್, ಮಾಧುರಿ ಬೋಳಾರ, ಆಲಿ ಹಸನ್, ರಾಮಚಂದ್ರ ಬಬ್ಬುಕಟ್ಟೆ ಮುಂತಾದವರು ಮಾತನಾಡಿ, ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿದರು.

ಬಳಿಕ ಸಭೆಯು ದ.ಕ.ಜಿಲ್ಲಾ ಮಟ್ಟದ ಸಿಐಟಿಯು ಸುವರ್ಣ ಮಹೋತ್ಸವ ಆಚರಣಾ ಸಮಿತಿಯನ್ನು ರಚಿಸಿತು. ಕೊನೆಯಲ್ಲಿ ಸಿಐಟಿಯು ಜಿಲ್ಲಾ ನಾಯಕರಾದ ಯೋಗೀಶ್ ಜಪ್ಪಿನಮೊಗರು ವಂದಿಸಿದರು.

**ಸುನಿಲ್ ಕುಮಾರ್ ಬಜಾಲ್**

## ಬಡಪಾಯಿ ಶಾಲಾ ಮಕ್ಕಳ ವಾಹನ ಚಾಲಕರ ಮೇಲಿನ ಪೋಲೀಸ್ ಧಾಳಿ ತೀರಾ ಖಂಡನೀಯ– ವೇದವ್ಯಾಸ್ ಕಾಮತ್

'ಉತ್ತಮ ಶಿಕ್ಷಣ ಪಡೆಯಲಿಕ್ಕಾಗಿ ನಗರದ ಹೃದಯ ಭಾಗದಲ್ಲಿರುವ ಶಿಕ್ಷಣ ಸಂಸ್ಥೆಗಳಿಗೆ ಆಗಮಿಸುವ ಬಹುತೇಕ ವಿಧ್ಯಾರ್ಥಿಗಳಿಗೆ ಆಸರೆಯಾಗಿರುವ ಶಾಲಾ ಮಕ್ಕಳ ವಾಹನ ಚಾಲಕರು ಮಕ್ಕಳ ಸುರಕ್ಷತೆಯನ್ನೇ ಧ್ಯೇಯವನ್ನಾಗಿಟ್ಟುಕೊಂಡು ಪ್ರಾಮಾಣಿಕವಾಗಿ ದುಡಿಯುತ್ತಿದ್ದರೂ,ಅವರ ಮೇಲೆ ಅಪನಂಬಿಕೆ ಬರುವಂತೆ ಪೋಲೀಸ್ ಇಲಾಖೆಯು ವರ್ತಿಸುತ್ತಿರುವುದು ಸರಿಯಲ್ಲ. ರಾಜ್ಯ ಉಚ್ಛ ನ್ಯಾಯಾಲಯದ ತೀರ್ಪಿನ ಜಾರಿಯ ಭಾಗವಾಗಿ ಮಿತಿಗಿಂತ ಜಾಸ್ತಿ ಮಕ್ಕಳನ್ನು ಸಾಗಿಸಬಾರದೆಂಬ ಕಾನೂನು ರಕ್ಷಣೆಯ ಹೆಸರಿನಲ್ಲಿ ನಿರಂತರ ಕೇಸ್, ವಿಪರೀತ ದಂಡ ವಸೂಲಿ,ಲೈಸೆನ್ಸ್ ರದ್ದು,ಶಾಲಾ ವಾಹನವನ್ನು ಬೆನ್ನಟ್ಟುವುದು, ಶಾಲಾ ವಾಹನದಲ್ಲೇ ಪೋಲೀಸ್ ಸಿಬ್ಬಂದಿ ಸಂಚರಿಸುವುದು ಇತ್ಯಾದಿ ಕಿರುಕುಳ ನೀಡುವ ಮೂಲಕ ಬಡಪಾಯಿ ಶಾಲಾ ಮಕ್ಕಳ ವಾಹನ ಚಾಲಕರ ಮೇಲಿನ ಧಾಳಿ ತೀರಾ ಖಂಡನೀಯ' ಎಂದು ಮಂಗಳೂರು ನಗರ ದಕ್ಷಿಣ ಕ್ಷೇತ್ರದ ಶಾಸಕರಾದ ಡಿ.ವೇದವ್ಯಾಸ್ ಕಾಮತ್ ರವರು ಅಭಿಪ್ರಾಯಪಟ್ಟರು.

ಅವರು ದ.ಕ.ಜಿಲ್ಲಾ ಶಾಲಾ ಮಕ್ಕಳ ವಾಹನ ಚಾಲಕರ ಸಂಘ(ರಿ)ದ 3ನೇ ವಾರ್ಷಿಕ ಮಹಾಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಾ, ಈ ಮಾತುಗಳನ್ನು ಹೇಳಿದರು. ಅವರು ದೀಪ ಪ್ರಜ್ವಲನೆ ಮಾಡುವ ಮೂಲಕ ಮಹಾಸಭೆಗೆ ಚಾಲನೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಂಘದ ಕಾನೂನು ಸಲಹೆಗಾರರೂ, ನಗರದ ಖ್ಯಾತ ವಕೀಲರಾದ ರಾಮ ಪ್ರಸಾದ್ ರವರು ಮಾತನಾಡುತ್ತಾ, 'ನ್ಯಾಯಾಲಯಗಳ ತೀರ್ಪುಗಳನ್ನು ಗೌರವಿಸುವುದು ಹಾಗೂ ಪಾಲನೆ ಮಾಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಯಾವುದೇ ಕಾನೂನುಗಳು ಜನರ ಒಳಿತಿಗಾಗಿ ಇರುವುದೇ ಹೊರತು ಅನ್ಯಾಯ ಮಾಡುವುದಕ್ಕಲ್ಲ.ಆದರೆ ಕೆಲವೊಂದು ಕಾನೂನುಗಳ ರಕ್ಷಣೆಯ ನೆಪದಲ್ಲಿ ಬಡಪಾಯಿಗಳ ಅಮಾಯಕರ ಮೇಲೆ ಸವಾರಿ ನಡೆಸುವುದು ಪ್ರಜಾಪ್ರಭುತ್ವದ ಲಕ್ಷಣವಲ್ಲ. ಇಂತಹ ಸಂಧರ್ಭದಲ್ಲಿ ರಾಜ್ಯ ಹಾಗೂ ದೇಶವನ್ನಾಳುವ ಸರಕಾರಗಳು ತಕ್ಷಣ ಮಧ್ಯಪ್ರವೇಶಿಸಿ ನ್ಯಾಯ ಕಲ್ಪಿಸಲು ಸಾಧ್ಯವಾಗಬೇಕೆಂದು' ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ಗೌರವ ಅಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್ ರವರು, 'ಅನ್ಯಾಯ ದಬ್ಬಾಳಿಕೆಗಳ ವಿರುದ್ದ ಸಿಡಿದೆದ್ದ ಶಾಲಾ ಮಕ್ಕಳ ವಾಹನ ಚಾಲಕರು ಸಂಘಟಿತ ಶಕ್ತಿಯಾಗಿ ಹೊರಹೊಮ್ಮಿ ಕಳೆದ 3 ವರ್ಷಗಳಲ್ಲೇ ಅನೇಕ ಜನಪರ ಕಾರ್ಯಕ್ರಮಗಳ ಮೂಲಕ ಜನಮನ್ನಣೆ ಗಳಿಸಲಾಗಿದೆ.ಅಂತಹುದರಲ್ಲಿ ಶಾಲಾ ವಾಹನ ಚಾಲಕರನ್ನು ನಿಕೃಷ್ಟವಾಗಿ ಕಾಣುವ ಮೂಲಕ ಮತ್ತೆ ಧಾಳಿ ನಡೆಸುತ್ತಿರುವುದು ಸರ್ವಥಾ ಸರಿಯಲ್ಲ.ಅದರ ಜೊತೆಗೆ ಆಳುವ ವರ್ಗಗಳ ನೀತಿಗಳೂ ಚಾಲಕ ವರ್ಗದ ವಿರುದ್ದವಾಗಿದ್ದು ಮುಂದಿನ ದಿನಗಳಲ್ಲಿ ಪ್ರಬಲ ಹೋರಾಟವನ್ನು ರೂಪಿಸಬೇಕಾಗಿದೆ' ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಮೋಹನ್ ಕುಮಾರ್ ಅತ್ತಾವರರವರು ವಹಿಸಿದ್ದರು. ವೇದಿಕೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕಿರಣ್ ಲೇಡಿಹಿಲ್, ಜಿಲ್ಲಾ ಮುಖಂಡರಾದ ಉಮೇಶ್ ಶೆಟ್ಟಿ, ಶಂಕರ ಶೆಟ್ಟಿ, ಲೋಕೇಶ್ ಸುರತ್ಕಲ್, ಸತೀಶ್ ಪೂಜಾರಿ, ಪ್ರವೀಣ್, ಗಂಗಾಧರ್ ರೈ, ಚಿತ್ತರಂಜನ್ ಸುವರ್ಣ, ಸತೀಶ್ ಅಡಪ, ನರೇಂದ್ರ ಹೊಯಿಗೆಬೈಲ್, ಜಯರಾಮ, ಸಂಕಪ್ಪ ಉಳ್ಳಾಲ, ಸುನೀತ ಶಕ್ತಿನಗರ, ಹರೀಶ್ ಪುತ್ರನ್, ಬೆಂಜಮಿನ್, ದೇವರಾಜ್, ಚರಣ್, ರಾಜೇಶ್ ಕುಳಾಯಿ, ಮುನ್ನಾ ಪದವಿನಂಗಡಿ, ದೇವರಾಜ್, ರೆಹಮಾನ್ ಕುಂಜತ್ತಬೈಲ್, ಉದಯ, ಮುಂತಾದವರು ಉಪಸ್ಥಿತರಿದ್ದರು.

**–ಕಿರಣ್ ಲೇಡಿಹಿಲ್**

ಅತಿಥಿ ಅಂಕಣ



ಪ್ರೊ. ಟಿ. ಆರ್. ಚಂದ್ರಶೇಖರ

**ಜಿಡಿಪಿಯ ಕುಸಿತವನ್ನು ಮಹಾದುರಂತ ಎನ್ನುವ ರೀತಿಯಲ್ಲಿ ಮಾಧ್ಯಮಗಳು ಮತ್ತು ಸರ್ಕಾರಗಳು ಆತಂಕ ವ್ಯಕ್ತಪಡಿಸುತ್ತಿವೆ. ಸಮಸ್ಯೆಯಿರುವುದು ಅದರ ಕುಸಿತದಲ್ಲಲ್ಲ. ಜನರ ಅನುಭೋಗಿ ಬೇಡಿಕೆಯಲ್ಲಿ ತೀವ್ರ ಕುಸಿತ ಉಂಬಾಗಿದೆ. ಕೌಟುಂಬಿಕ ಉಳಿತಾಯದ ಪ್ರಮಾಣ ನೆಲಕಚ್ಚಿದೆ. ನಿರುದ್ಯೋಗ ಪ್ರಮಾಣವು ಉತ್ತುಂಗ ಸ್ಥಿತಿ ತಲುಪಿದೆ. ಇದು ಒಂದು ಕಡೆ ಮಾನವ ನಿರ್ಮಿತ ಸಮಸ್ಯೆಯಾಗಿದ್ದರೆ ಮತ್ತೊಂದು ಕಡೆ ಇದು ಜನರನ್ನು ಆನುಷಂಗಿಕ ಮಾಡಿ ಜಿಡಿಪಿಯೇ ಪರಮೋಚ್ಚ ಸಂಗತಿ ಎಂಬ ನೀತಿಯನ್ನು ಅನುಸರಿಸಿಕೊಂಡು ಬರುತ್ತಿರುವುದರ ಪರಿಣಾಮವಾಗಿದೆ. ಇಂದಿನ ಅಗತ್ಯವೆಂದರೆ ಜನರ ವರಮಾನದ ಮಟ್ಟವನ್ನು ಉತ್ತಮಪಡಿಸುವುದು, ಅನುಭೋಗಿ ಬೇಡಿಕೆ ಉತ್ತಮವಾಗುವಂತೆ ಮಾಡುವುದು ಮತ್ತು ವರಮಾನವು ಖಾಸಗಿ ಉದ್ದಿಮೆಪತಿಗಳಲ್ಲಿ ಕೇಂದ್ರೀಕರಣಗೊಳ್ಳುವುದನ್ನು ತಡೆಯುವುದು.**

# ಜಿಡಿಪಿಯೇ ಜನರ ಬದುಕಲ್ಲ !

ಜಗತ್ತಿನಲ್ಲಿ ಅತ್ಯಂತ ವೇಗದಿಂದ ಬೆಳೆಯುತ್ತಿರುವ ಆರ್ಥಿಕತೆ ಎಂದು ಭಾರತವನ್ನು ಬಣ್ಣಿಸಲಾಗುತ್ತಿದೆ. ಒಟ್ಟು ಆಂತರಿಕ ಉತ್ಪನ್ನದ(ಜಿಡಿಪಿ) ಬೆಳವಣಿಗೆ ದೃಷ್ಟಿಯಿಂದ ಇದು ಸರಿಯಿರಬಹುದು. ಮೆಹಬೂಬ್ ಉಲ್ ಹಕ್ ಅವರು 1990ರಲ್ಲಿ ಯುಎನ್‌ಡಿಪಿಗಾಗಿ ಸಿದ್ಧಪಡಿಸಿದ ಪ್ರಥಮ ಮಾನವ ಅಭಿವೃದ್ಧಿ ವರದಿಯಲ್ಲಿ ಎಚ್ಚರಿಸಿದಂತೆ ವರಮಾನವೇ ಬದುಕಿನ ಮೊತ್ತವಲ್ಲ. ಇಂದು ಭಾರತದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಸಂಗತಿಯೆಂದರೆ ಜಿಡಿಪಿ ಬೆಳವಣಿಗೆಯಲ್ಲಿನ ಕುಸಿತ. ದೇಶಕ್ಕೆ ಎದುರಾಗಿರುವ ದೊಡ್ಡ ಗಂಡಾಂತರ ಎನ್ನುವ ರೀತಿಯಲ್ಲಿ ಇದನ್ನು ಗುರುತಿಸಲಾಗುತ್ತಿದೆ. ಜಿಡಿಪಿ ಬೆಳವಣಿಗೆ ಪ್ರಮಾಣ ಮನಮೋಹನಸಿಂಗ್ ಅವರ ಅವಧಿಯಲ್ಲಿ ಅಧಿಕವಾಗಿತ್ತೋ ಅಥವಾ ನರೇಂದ್ರಮೋದಿ ಅವಧಿಯಲ್ಲಿ ಅಧಿಕವಾಗಿತ್ತೋ ಎಂಬ ತುಲನಾತ್ಮಕ ಚರ್ಚೆಯು ತೀವ್ರ ವಿವಾದದ ಸಂಗತಿಯಾಗಿದೆ. ನಮ್ಮ ಅವಧಿಯಲ್ಲಿ ಜಿಡಿಪಿ ಬೆಳವಣಿಗೆ ಪ್ರಮಾಣ ಅಧಿಕವಾಗಿತ್ತು ಎಂಬುದನ್ನು ಸಿದ್ಧ ಮಾಡಲು ಈಗಿನ ಸರ್ಕಾರ ಅಂಕಿಅಂಶಗಳನ್ನೇ ತಿದ್ದುವ/ತಿರುಚುವ ಕೆಲಸ ಮಾಡುತ್ತಿರುವಂತೆ ಕಾಣುತ್ತದೆ. ನಮ್ಮ ದೇಶದ ಆರ್ಥಿಕ ಅಂಕಿಅಂಶಗಳ ಗುಣಮಟ್ಟದ ಬಗ್ಗೆ ಜಾಗತಿಕವಾಗಿ ಅನುಮಾನ ಉಂಟಾಗುವಂತೆ ಇದು ಮಾಡುತ್ತಿದೆ. ಈ ಜಿಡಿಪಿ ಬಗ್ಗೆ, ನಿರುದ್ಯೋಗದ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದಿದ್ದ ಪ್ರಧಾನಮಂತ್ರಿ ಇದೀಗ ಇದರ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ತಮ್ಮ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಸಮಿತಿಯೊಂದನ್ನು ರಚಿಸಿದ್ದಾರೆ. ಉದ್ದಿಮೆದಾರರು, ಆರ್ಥಿಕತಜ್ಞರು, ರಾಜಕಾರಣಿಗಳು, ಪತ್ರಕರ್ತರು – ಹೀಗೆ ಎಲ್ಲರೂ ಜಿಡಿಪಿಯ ಕುಸಿತದ ಬಗ್ಗೆ ಏನೋ ಅನಾಹುತ ನಡೆದಿದೆ ಎನ್ನುವ ರೀತಿಯಲ್ಲಿ ಆತಂಕ ವ್ಯಕ್ತಪಡಿಸುತ್ತಿದ್ದಾರೆ. ನಿಜಕ್ಕೂ ಜಿಡಿಪಿ ಕುಸಿತದ ಪರಿಣಾಮಗಳೇನು? ಜಿಡಿಪಿ ಬೆಳವಣಿಗೆಗೂ ಮತ್ತು ಬಡತನಕ್ಕೂ–ದುಸ್ಥಿತಿಗೂ ನಡುವೆ ವಿಲೋಮ ಸಂಬಂಧವಿದೆಯೇ? ಜಿಡಿಪಿಯ ಬೆಳವಣಿಗೆ ಈಗಿರುವ ಶೇ. 6 ರಿಂದ ಶೇ. 8 ಕ್ಕೆ ಅಥವಾ ಶೇ. 10ಕ್ಕೇ ಏರಿಕೆಯಾದರೆ ದೇಶದಲ್ಲಿನ ಬಡತನ, ಹಸಿವು ನಿವಾರಣೆಯಾಗಿ ಬಿಡುತ್ತದೆಯೇ? ಜಿಡಿಪಿ ಕುರಿತ ಚರ್ಚೆಗಳಲ್ಲಿ ಮೇಲಿನ ಪ್ರಶ್ನೆಗಳು ಮುಖ್ಯವಾಗಬೇಕಾಗಿತ್ತು. ಜಾಗತಿಕವಾಗಿ ಅನೇಕ ಅಧ್ಯಯನಗಳು ಮತ್ತು ದೇಶಗಳ ಅನುಭವಗಳು ತೋರಿಸುತ್ತಿರುವುದೇನೆಂದರೆ ಜಿಡಿಪಿ ಬೆಳವಣಿಗೆಗೂ ಮತ್ತು ಬಡತನದ ನಿವಾರಣೆಗೂ ನಡುವೆ ವಿಲೋಮ ಸಂಬಂಧವಿಲ್ಲ. ಒಂದು ವೇಳೆ ಸಂಬಂಧವಿದ್ದರೆ ಅದು ಆಕಸ್ಮಿಕ ಅಥವಾ ಅಪವಾದ. ಜಿಡಿಪಿಯ ಕುಸಿತದ ಬಗೆಗಿನ ಆತಂಕವು ಮೂಲತಃ ಉದ್ದಿಮೆ–ಬಂಡವಾಳ ಸ್ಪಂದಿಯಾದುದು. ವಿದೇಶಿ ಬಂಡವಾಳದ ಒಳಹರಿವಿನ ಬಗ್ಗೆ ಸರ್ಕಾರವು ಹೆಚ್ಚು ಚಿಂತಿತವಾಗಿರುವಂತೆ ಕಾಣುತ್ತದೆ.

ಸರ್ಕಾರಕ್ಕೆ ಜಿಡಿಪಿ ಬೆಳವಣಿಗೆಗಿಂತ ಏರಿಕೆಯಾದ ಜಿಡಿಪಿಯು ಆರ್ಥಿಕತೆಯ ಯಾವ ವರ್ಗಗಳ ಪಾಲಾಗುತ್ತಿದೆ ಅಥವಾ ಅದರ ಎಷ್ಟು ಭಾಗ ಬಡವರಿಗೆ, ಹಸಿವನ್ನು ಎದುರಿಸುತ್ತಿರುವವರಿಗೆ, ಮಹಿಳೆಯರಿಗೆ ದೊರೆಯುತ್ತಿದೆ ಎಂಬ ಪ್ರಶ್ನೆ ಮುಖ್ಯವಾಗಬೇಕು. ಸರ್ಕಾರಗಳು ಸರ್ವೇ ಸಾಮಾನ್ಯವಾಗಿ ಉದ್ದಿಮೆದಾರರಿಗೆ, ಬಂಡವಾಳಿಗರಿಗೆ, ಕಾರ್ಪೋರೇಟ್ ಕುಳಗಳಿಗೆ ಹೆಚ್ಚು ಸ್ಪಂದಿಸುತ್ತಿರುತ್ತದೆಯೇ ವಿನಾ ಬಡವರ, ದಲಿತರ, ಮಹಿಳೆಯರ, ಅಲ್ಪಸಂಖ್ಯಾತರ ದುಸ್ಥಿತಿಯ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಏಕೆಂದರೆ ಬಡವರ, ಹಸಿದವರ, ದಲಿತರ ಸಮಸ್ಯೆಗಳಿಗೆ ಸ್ಪಂದಿಸದೆಯೂ ಸರ್ಕಾರಗಳು ಅಧಿಕಾರದಲ್ಲಿ ಉಳಿಯಬಹುದು. ಆದರೆ ಕಾರ್ಪೋರೇಟ್ ಕುಳಗಳ ಅಗತ್ಯಗಳಿಗೆ ಸ್ಪಂದಿಸದಿದ್ದರೆ ಸರ್ಕಾರಗಳು ಅಧಿಕಾರದಲ್ಲಿ ಉಳಿಯುವುದು ಕಷ್ಟ. ಗೌತಮ್ ಆದಾನಿ, ಮುಖೇಶ್ ಅಂಬಾನಿ ಮುಂತಾದ ಖಾಸಗಿ ಉದ್ದಿಮೆದಾರರಲ್ಲಿ ಸಂಪತ್ತು ಕೇಂದ್ರೀಕೃತಗೊಳ್ಳುತ್ತಿರುವುದನ್ನು 'ಇದರಲ್ಲಿ ತಪ್ಪೇನಿದೆ' ಎಂದು ಸರ್ಕಾರವೇ ಸಮರ್ಥಿಸುತ್ತಿರುವುದರಲ್ಲಿ ಇದನ್ನು ಕಾಣಬಹುದು.

ಜಿಡಿಪಿಯ ಬೆಳವಣಿಗೆಯು ಉಳ್ಳವರ ಸಮೃದ್ಧತೆಯನ್ನು ಸೂಚಿಸುತ್ತದೆಯೇ ವಿನಾ ಉಳಿದವರ ಬದುಕಿನ ಸ್ಥಿತಿಗತಿಯನ್ನು ಬಹಿರಂಗಪಡಿಸುವುದಿಲ್ಲ. ಅಮರ್ತ್ಯ ಸೇನ್ ಹೇಳಿದಂತೆ ಜಿಡಿಪಿಯು ಆರ್ಥಿಕ ಸಮೃದ್ಧತೆಯ ಸೂಚಿಯಾಗಿದೆ. ಅಭಿವೃದ್ಧಿಯಲ್ಲಿ ನಮಗೆ ಮುಖ್ಯವಾದುದು ಜಿಡಿಪಿ ಬೆಳವಣಿಗೆಗಿಂತ ಅದರ ವಿತರಣೆಯ ವಿನ್ಯಾಸ. ಆಕ್ಸ್‌ಫಾಮ್ ಸಂಸ್ಥೆಯ 2018ರ ವರದಿ ಪ್ರಕಾರ ಭಾರತದಲ್ಲಿ ವರಮಾನ ರಚನೆಯ ಮೇಲುಸ್ತರದಲ್ಲಿನ ಶೇ. 1 ರಷ್ಟು ಜನರು ದೇಶದ ಒಟ್ಟು ಸಂಪತ್ತಿನಲ್ಲಿ ಶೇ.51.53 ರಷ್ಟು ಪಾಲು ಪಡೆದಿದ್ದರೆ ಅದರಲ್ಲಿ ಕೆಳಸ್ತರದ ಶೇ.60 ರಷ್ಟು ಜನರ ಪಾಲು ಶೇ.4.8. ನಮ್ಮ ದೇಶದಲ್ಲಿ 2017ರಲ್ಲಿನ ಶತಕೋಟ್ಯಾಧೀಶರ ಸಂಪತ್ತು 326 ಶತಕೋಟಿ ಡಾಲರುಗಳಷ್ಟಿದ್ದರೆ 2018ರಲ್ಲಿ ಅದು 440 ಶತಕೋಟಿ ಡಾಲರುಗಳಿಗೇರಿದೆ. ಶತಕೋಟ್ಯಾಧೀಶರ ಸಂಪತ್ತಿನ ಬೆಳವಣಿಗೆ ಪ್ರಮಾಣ ವಾರ್ಷಿಕ ಶೇ.35 ರಷ್ಟಿದ್ದರೆ ಕೆಳಸ್ತರದ ಶೇ.50 ರಷ್ಟು ಜನರ ಸಂಪತ್ತಿನ ಬೆಳವಣಿಗೆ ಪ್ರಮಾಣ ಶೇ.3. ಈ ರಾಕ್ಷಸ ಸ್ವರೂಪದ ಅಸಮಾನತೆಯ ಹಿನ್ನೆಲೆಯಲ್ಲಿ ಜಿಡಿಪಿಯ ಬೆಳವಣಿಗೆ ಅಥವಾ ಕುಸಿತದ ಬಗ್ಗೆ ಮಾತನಾಡುವುದು/ಚರ್ಚಿಸುವುದು ಹಾಸ್ಯಾಸ್ಪದವೆನಿಸುತ್ತದೆ.

ಅಕ್ಷರ, ಆರೋಗ್ಯ, ಅನ್ನ ಮುಂತಾದ ಜನರ ಜೀವನಾವಶ್ಯಕತೆಗಳನ್ನು ಹಕ್ಕಿನ ರೂಪದಲ್ಲಿ ಜನರಿಗೆ ನೀಡಲು ಸಾಮಾನ್ಯವಾಗಿ ಸರ್ಕಾರಗಳು ಸಂಪನ್ಮೂಲದ ಕೊರತೆಯನ್ನು ಕಾರಣವಾಗಿ ಮುಂದಿಡುತ್ತವೆ. ಇದು ಸಂಪನ್ಮೂಲದ ಕೊರತೆಯ ಸಮಸ್ಯೆಯಲ್ಲ. ಇದು ತೆರಿಗೆ ಮೂಲಕ ಸಂಪನ್ಮೂಲವನ್ನು ರೂಢಿಸಿಕೊಳ್ಳುವಲ್ಲಿನ ಇಚ್ಛಾಶಕ್ತಿಯ ಕೊರತೆಯ ಪಶ್ನೆ. ಏಕೆಂದರೆ ಮೇಲೆ ತಿಳಿಸಿರುವ 119 ಶತಕೋಟ್ಯಾಧೀಶರ ಸಂಪತ್ತಾದ 440 ಶತಕೋಟಿ ಡಾಲರ್‌ಗಳು ರೂಪಾಯಿಯಲ್ಲಿ ರೂ.30.80 ಲಕ್ಷ ಕೋಟಿಯಾಗುತ್ತದೆ. ಈ ಸಂಪತ್ತಿನ ಮೇಲೆ ಶೇ 5 ರಷ್ಟು ತೆರಿಗೆ ವಿಧಿಸಿದರೆ ವರ್ಷಕ್ಕೆ ರೂ.1.54 ಲಕ್ಷ ಕೋಟಿ ದೊರೆಯುತ್ತದೆ. ಇದನ್ನು ದೇಶದಲ್ಲಿರುವ ವಂಚಿತರಿಗೆ, ಬಡವರಿಗೆ, ದಲಿತರಿಗೆ ಜೀವನಾವಶ್ಯಕತೆಗಳನ್ನು ನೀಡಲು ಬಳಸಿಕೊಳ್ಳಬಹುದು. ಆದರೆ ಸರ್ಕಾರಗಳು ಕಾರ್ಪೋರೇಟುಗಳ ಮೇಲಿನ ತೆರಿಗೆಯನ್ನು ಕಡಿತಗೊಳಿಸುವುದರ ಬಗ್ಗೆ ಯೋಚಿಸುತ್ತವೆ ವಿನಾ ತೆರಿಗೆಯನ್ನು ಹೇರುವ ಬಗ್ಗೆ ಅವು ತಲಕೆಡಿಸಿಕೊಳ್ಳುವುದಿಲ್ಲ.




ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ನಮ್ಮ ಸರ್ಕಾರಗಳಿಗೆ, ಅರ್ಥಶಾಸ್ತ್ರಜ್ಞರಿಗೆ, ನೀತಿ ಆಯೋಗಕ್ಕೆ, ಆಡಳಿತಗಾರರಿಗೆ ಮತ್ತು ಬಂಡವಳಿಗರಿಗೆ ಜಿಡಿಪಿಯಲ್ಲಿನ ಬೆಳವಣಿಗೆ ಮುಖ್ಯವಾಗಿದೆಯೇ ವಿನಾ ಜನರ ಬದುಕನ್ನು ಸಮೃದ್ಧಗೊಳಿಸುವ ಸಂಗತಿಯು ಮುಖ್ಯವಾಗುತ್ತಿಲ್ಲ. ಈ ಜಿಡಿಪಿಯ ಮೂಲದಲ್ಲಿರುವ ಸೂತ್ರವೆಂದರೆ 'ಉತ್ಪಾದನೆ ಮೊದಲು: ವಿತರಣೆ ನಂತರ' ಎಂಬುದಾಗಿದೆ. ನಮ್ಮ ದೇಶದ ಜಿಡಿಪಿಯು ವಾರ್ಷಿಕ ಶೇ 6 ರ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಇದೇನು ನಿರಾಶಾದಾಯಕ ಪ್ರಮಾಣವೇನಲ್ಲ. ಯಾವುದನ್ನು ಅರಿಸ್ಟಾಟಲ್ ಕಾಮನ್ ಗುಡ್ ಎನ್ನುತ್ತಾನೋ, ಯಾವುದನ್ನು ಜಾನ್ ರಾಲ್ಸ್ ವಿತರಣೆಯ ಭಿನ್ನತೆ ನಿಯಮ ಎನ್ನುತ್ತಾನೋ, ಯಾವುದನ್ನು ಅಮರ್ತ್ಯ ಸೇನ್ ಜನರ ಬದುಕಿನ ಸಮೃದ್ಧತೆ ಎನ್ನುತ್ತಾರೋ ಅವುಗಳ ಬಗ್ಗೆ ನಮ್ಮ ಸರ್ಕಾರಗಳಿಗೆ ಸಹಮತವಿಲ್ಲ.

ವಾಸ್ತವವಾಗಿ ಜಿಡಿಪಿಯ ಗಣನೆ ಅನೇಕ ಸಮಸ್ಯೆಗಳಿಂದ ಕೂಡಿದೆ. ಮೊದಲನೆಯದಾಗಿ ಜಿಡಿಪಿಯು ಮಹಿಳೆಯರ ಸಂಗೋಪನಾ(ಕೇರಿಂಗ್) ಮತ್ತು ಸಂತಾನೋತ್ಪತ್ತಿ(ರಿಪ್ರೊಡಕ್ಟಿವ್)ದುಡಿಮೆಯನ್ನು ಒಳಗೊಳ್ಳುವುದಿಲ್ಲ. ದೇಶದ ಶೇ 90ಕ್ಕೂ ಮಿಕ್ಕ ದುಡಿಮೆಗಾರರು ಅವಲಂಬಿಸಿರುವ ಅನೌಪಚಾರಿಕ ಮಾರುಕಟ್ಟೆಯ ಎಲ್ಲ ವ್ಯವಹಾರಗಳನ್ನು ಇದು ಒಳಗೊಳ್ಳುವುದಿಲ್ಲ. ಮೇಲಾಗಿ ಇದು ವರಮಾನದ ವಿತರಣೆಯ ಸಂಗತಿಗಳನ್ನು ಅಥವಾ ಉತ್ಪಾದನಾ ಪ್ರಕ್ರಿಯೆಯಲ್ಲಿ ಸವಕಳಿಯಾಗುವ ನೈಸರ್ಗಿಕ ಬಂಡವಾಳದ ಸಂಗತಿಗಳನ್ನು ಇದು ಒಳಗೊಳ್ಳುವುದಿಲ್ಲ. ಜಿಡಿಪಿಯ ಮುಖ್ಯ ಸಮಸ್ಯೆಯೆಂದರೆ ಇದು ಅಖಂಡ(ಅಗ್ರಗೇಟ್) ಸೂಚಿಯಾಗಿದೆ. ಅಖಂಡ ಸೂಚಿಗಳು ಬಹಿರಂಗಪಡಿಸುವ ಸಂಗತಿಗಳಿಗಿಂತ ಮುಚ್ಚಿಡುವ ಸಂಗತಿಗಳು ಹೆಚ್ಚಿರುತ್ತವೆ. ಜಿಡಿಪಿಯಲ್ಲಿ ಜನರು ಆನುಷಂಗಿಕರಾಗಿ ಬಿಡುತ್ತಾರೆ.

ಜಿಡಿಪಿಗೆ ಪ್ರತಿಯಾಗಿ ಎಚ್‌ಡಿಐ(ಮಾನವ ಅಭಿವೃದ್ಧಿ ಸೂಚ್ಯಂಕ)ಗೆ ಆದ್ಯತೆ ನೀಡಿದರೆ, ಜನರ ಬದುಕು ಸಮೃದ್ಧವಾಗುವ ಸಾಧ್ಯತೆಯಿರುತ್ತದೆ. ಉದಾಹರಣೆಗೆ ಕೇರಳದ ತಲಾ ವರಮಾನವು 2015–16ರಲ್ಲಿ ರೂ.147190 ರಷ್ಟಿದ್ದರೆ ಹರಿಯಾಣದ ತಲಾ ವರಮಾನವು ರೂ. 162034 ರಷ್ಟಿದೆ. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕೇರಳದ ಮೌಲ್ಯ 0.693 ಇದ್ದರೆ ಹರಿಯಾಣದ್ದು 0.628. ಇದೇ ರೀತಿಯಲ್ಲಿ ಕೇರಳವು ಹರಿಯಾಣಕ್ಕಿಂತ ಸಾಕ್ಷರತೆಯಲ್ಲಿ, ಜನರ ಜೀವನಾಯುಷ್ಯದಲ್ಲಿ, ಶಿಶು ಮರಣ ಪ್ರಮಾಣದಲ್ಲಿ ಮತ್ತು ಒಟ್ಟು ಸಂತಾನೋತ್ಪತ್ತಿ ಪ್ರಮಾಣದಲ್ಲಿ ಬಹಳ ಉತ್ತಮ ಸ್ಥಿತಿಯಲ್ಲಿದೆ. ಆರ್ಥಿಕ ಅಭಿವೃದ್ಧಿಯಲ್ಲಿ ಹರಿಯಾಣವು ಸಮೃದ್ಧವಾಗಿದೆ. ಆದರೆ ಕೇರಳದಲ್ಲಿ ಜನರ ಬದುಕು ಸಮೃದ್ಧವಾಗಿದೆ. ಏಕೆಂದರೆ ಕೇರಳವು ಜನಪರ ನೀತಿಯ ಮೂಲಕ ಮತ್ತು ಸಾಮಾಜಿಕ ನ್ಯಾಯಕ್ಕೆ ಆದ್ಯತೆ ನೀಡುವ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಜನರ ಬದುಕನ್ನಾಗಿ, ಜನರ ಆರೋಗ್ಯವನ್ನಾಗಿ ಮತ್ತು ಜನರ ಶಿಕ್ಷಣವನ್ನಾಗಿ ಪರಿವರ್ತಿಸುವುದರಲ್ಲಿ ಯಶಸ್ವಿಯಾಗಿದೆ. ಅದರೆ ಹರಿಯಾಣವು ಜಿಡಿಪಿ ಪ್ರಣೀತ ಅಭಿವೃದ್ಧಿ ಪ್ರಣಾಳಿಕೆಗೆ ಅಂಟಿಕೊಂಡಿರುವ ಕಾರಣದಿಂದ ಅಲ್ಲಿ ಏರಿಕೆಯಾದ ವರಮಾನವು ಜನರ ಬದುಕಾಗಿ ಪರಿವರ್ತನೆಯಾಗಿಲ್ಲ. ವರಮಾನವೇ ಜನರ ಬದುಕಿನ ಮೊತ್ತವಲ್ಲ ಎನ್ನುವ ಸೂತ್ರವನ್ನು ಅಳವಡಿಸಿಕೊಂಡಿರುವ ಕೇರಳವು ಮಾನವ ಅಭಿವೃದ್ಧಿ ಪ್ರಣಾಳಿಕೆ ಮೂಲಕ ವರಮಾನವು ಕೆಳಮಟ್ಟದಲ್ಲಿದ್ದರೂ ಜನರ ಬದುಕನ್ನು ಉತ್ತಮಪಡಿಸುವಲ್ಲಿ ಯಶಸ್ವಿಯಾಗಿದೆ.

ಜಿಡಿಪಿಯ ಕುಸಿತವನ್ನು ಮಹಾದುರಂತ ಎನ್ನುವ ರೀತಿಯಲ್ಲಿ ಮಾಧ್ಯಮಗಳು ಮತ್ತು ಸರ್ಕಾರಗಳು ಆತಂಕ ವ್ಯಕ್ತಪಡಿಸುತ್ತಿವೆ. ಸಮಸ್ಯೆಯಿರುವುದು ಅದರ ಕುಸಿತದಲ್ಲಲ್ಲ. ಜನರ ಅನುಭೋಗಿ ಬೇಡಿಕೆಯಲ್ಲಿ ತೀವ್ರ ಕುಸಿತ ಉಂಟಾಗಿದೆ. ಕೌಟುಂಬಿಕ ಉಳಿತಾಯದ ಪ್ರಮಾಣ ನೆಲಕಚ್ಚಿದೆ. ನಿರುದ್ಯೋಗ ಪ್ರಮಾಣವು ಉತ್ತುಂಗ ಸ್ಥಿತಿ ತಲುಪಿದೆ. ಇದು ಒಂದು ಕಡೆ ಮಾನವ ನಿರ್ಮಿತ ಸಮಸ್ಯೆಯಾಗಿದ್ದರೆ ಮತ್ತೊಂದು ಕಡೆ ಇದು ಜನರನ್ನು ಆನುಷಂಗಿಕ ಮಾಡಿ ಜಿಡಿಪಿಯೇ ಪರಮೋಚ್ಚ ಸಂಗತಿ ಎಂಬ ನೀತಿಯನ್ನು ಅನುಸರಿಸಿಕೊಂಡು ಬರುತ್ತಿರುವುದರ ಪರಿಣಾಮವಾಗಿದೆ. ಇಂದಿನ ಅಗತ್ಯವೆಂದರೆ ಜನರ ವರಮಾನದ ಮಟ್ಟವನ್ನು ಉತ್ತಮಪಡಿಸುವುದು, ಅನುಭೋಗಿ ಬೇಡಿಕೆ ಉತ್ತಮವಾಗುವಂತೆ ಮಾಡುವುದು ಮತ್ತು ವರಮಾನವು ಖಾಸಗಿ ಉದ್ದಿಮೆಪತಿಗಳಲ್ಲಿ ಕೇಂದ್ರೀಕರಣಗೊಳ್ಳುವುದನ್ನು ತಡೆಯುವುದು. ●

## ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

ಏಜೆನ್ಸಿದಾರರಿಂದ ದೊಡ್ಡ ಮೊತ್ತದ ಪತ್ರಿಕೆಯ ಹಣ ಬಾಕಿಯಿದ್ದು ಪತ್ರಿಕೆಯನ್ನು ಹೊರ ತರುವುದು ಅಸಾಧ್ಯವಾಗಿದೆ. ಹೆಚ್ಚಿನ ಏಜೆನ್ಸಿ ಬಾಕಿ ಹಣವನ್ನು ಉಳಿಸಿಕೊಂಡಿರುವವರು ತಕ್ಷಣವೇ ಬಾಕಿಯನ್ನು ಪಾವತಿ ಮಾಡದಿದ್ದರೆ ಪ್ರತಿಕೆಯನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಮ್ಮಿಂದ ಬರಬೇಕಾದ ಬಾಕಿ ಹಣವನ್ನು ಕೂಡಲೇ ಕಳುಹಿಸಬೇಕೆಂದು ಕೋರಲಾಗಿದೆ.


ಅನೇಕ ನಮ್ಮ ವಾರ್ಷಿಕ ಚಂದಾದಾರರ ಚಂದಾ ಅವಧಿ ಮುಗಿದಿದ್ದು ಅವರು ಕೂಡಲೇ ವಾರ್ಷಿಕ ಚಂದಾ ಪಾವತಿ ಮಾಡಿ ಚಂದಾಗಳನ್ನು ನವೀಕರಿಸಬೇಕೆಂದು ಕೋರುತ್ತೇವೆ.

–ಸಂಪಾದಕರು



# ರಾಷ್ಟ್ರಪತಿ ಭಾಷಣ: 'ಹೊಸ ಭಾರತ'ಕ್ಕೆ ಒಂದೇ ಆಯಾಮ

**ಎರಡನೇ ಮೋದಿ ಸರಕಾರದ ಮೊದಲ ಜಂಟಿ ಅಧಿವೇಶನದಲ್ಲಿ ರಾಷ್ಟ್ರಪತಿಗಳ ಭಾಷಣ ಈ ಸರಕಾರದ ದೃಷ್ಟಿಕೋಣ ಮತ್ತು ಆದ್ಯತೆಗಳ ಬಗ್ಗೆ ಹೇಳಿರುವುದಕ್ಕಿಂತ ಹೇಳದಿರುವುದೇ ಹೆಚ್ಚು. ಒಟ್ಟಾರೆಯಾಗಿ, ಬಿಜೆಪಿಯ ಹಿಂದುತ್ವ ರಾಷ್ಟ್ರವಾದದ ಕಾರ್ಯಸೂಚಿ, ಅದಕ್ಕೆ ಆಸರೆಯಾಗಿ ಒಂದು ರಾಷ್ಟ್ರೀಯ ಭದ್ರತಾ ಪ್ರಭುತ್ವ– ಇದು 'ಹೊಸ ಭಾರತ'ದ ಒಂದೇ ಆಯಾಮದ ದೃಷ್ಟಿಯಾಗಿ ಹೊಮ್ಮಿ ಬರುತ್ತಿದೆ.**



* ಪ್ರಕಾಶ್ ಕಾರಟ್

ಲೋಕಸಭೆ ಚುನಾವಣೆಯ ನಂತರ ಆರಂಭವಾದ ಸಂಸತ್ತಿನ ಮೊದಲ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಷ್ಟ್ರಪತಿ ಮಾಡಿದ ಭಾಷಣವು ಮೋದಿಯವರ ಎರಡನೇ ಸರಕಾರದ ದೃಷ್ಟಿಕೋನ ಮತ್ತು ಆದ್ಯತೆಗಳನ್ನು ವಿವರಿಸಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಭಾಷಣ ತುಂಬಾ ಜಾಳುಜಾಳಾಗಿತ್ತು ಹಾಗೂ ಹೇಳಿದ್ದಕ್ಕಿಂತ ಹೇಳದಿರುವುದೇ ಹೆಚ್ಚಾಗಿತ್ತು.

ಆಳುವ ಪಕ್ಷವು 'ಹೊಸ ಭಾರತ'ವನ್ನು 2014ಕ್ಕಿಂತ ಮುಂಚೆ ಇದ್ದ ಭಾರತಕ್ಕಿಂತ ತೀವ್ರವಾದ ರೀತಿಯಲ್ಲಿ ಭಿನ್ನವಾಗಿ ನೋಡ ಬಯಸುತ್ತದೆ ಎನ್ನುವುದು ಈ ಭಾಷಣದಿಂದ ಸ್ಪಷ್ಟವಾಗುತ್ತದೆ. ಆರ್‌ಎಸ್‌ಎಸ್‌ನ ಹಿಂದೂ ರಾಷ್ಟ್ರವಾದಿ ಭಾರತದ ಕಲ್ಪನೆಯೇ ಅವರ 'ಹೊಸ ಭಾರತ'ದ ಕಣ್ಣೋಟದ ಆಧಾರವಾಗಿದೆ.

ಸರಕಾರದ ಹಿಂದಿನ ಅವಧಿಯ 'ಸಬ್‌ಕಾ ಸಾಥ್ ಸಬ್‌ಕಾ ವಿಕಾಸ್' ಮಂತ್ರವನ್ನು ರಾಷ್ಟ್ರಪತಿ ಪ್ರಸ್ತಾಪಿಸುತ್ತಾರೆ. ಅದನ್ನೀಗ 'ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್' ಎಂದು ವಿಸ್ತರಿಸಲಾಗಿದೆ. ಇದರ ಆವಶ್ಯಕತೆ ಏಕೆ ಕಂಡು ಬಂತು ಎಂದು ಎಲ್ಲಿಯೂ ವಿವರಿಸಿಲ್ಲ. 'ಹೊಸ ಭಾರತ' ಕುರಿತ ಹಂಬಲವು ಜನತೆಯ ಒಂದು ವಿಭಾಗದ ಅಂದರೆ ಅಲ್ಪಸಂಖ್ಯಾತರ ಮೇಲೆ ಗುರಿ ಮಾಡಬೇಕು ಹಾಗೂ ದಾಳಿ ಮಾಡಬೇಕು ಎಂಬುದಾಗಿ ಮೂಲ ಘೋಷಣೆಯ ಅಣಕ ಮಾಡಿದಂತಾದುದರ ಪರಿಣಾಮ ಇದಾಗಿರಬಹುದೇ? ಏನೇ ಇರಲಿ, ಸರಕಾರದ ಎರಡನೇ ಅವಧಿಯು ಮುಸ್ಲಿಮರ ಮೇಲೆ ಜನಜಂಗುಳಿಯ ದಾಳಿಗಳೊಂದಿಗೆ ಉದಯಗೊಂಡಿರುವುದು ಎದ್ದು ಕಾಣುವ ಅಂಶ. ಜಾರ್ಖಂಡ್‌ನಲ್ಲಿ 22 ವರ್ಷದ ತಬರೇಜ್ ಅನ್ಸಾರಿಯ ಹತ್ಯೆ ಇವುಗಳಲ್ಲಿ ಅತ್ಯಂತ ಘೋರ ಪ್ರಕರಣ.

ಸರಕಾರ ಅನುಸರಿಸಲಿರುವ ಒಟ್ಟಾರೆ ಆರ್ಥಿಕ ನೀತಿಗಳ ಬಗ್ಗೆ ರಾಷ್ಟ್ರಪತಿ ಭಾಷಣ ಮೌನವಾಗಿರುವುದು ಢಾಳಾಗಿ ಕಾಣುತ್ತದೆ. ಆರ್ಥಿಕ ಮಂದಗತಿಯನ್ನು ಹೇಗೆ ಹೋಗಲಾಡಿಸಬಹುದು ಎನ್ನುವ ಬಗ್ಗೆ ಯಾವುದೇ ಹೊಸ ಹೊಳಹು ಇಲ್ಲ. ಕೃಷಿ ಬಿಕ್ಕಟ್ಟಿಗೆ ಸಂಬಂಧಿಸಿ ಹೇಳುವುದಾದರೆ, ರೈತರಿಗೆ ಆದಾಯ ಬೆಂಬಲ ಒದಗಿಸುವ ಪ್ರಧಾನ್ ಮಂತ್ರಿ ಕಿಸಾನ್ ಸಮ್ಮಾನ್ ನಿಧಿಯನ್ನು ಎಲ್ಲಾ ರೈತರಿಗೆ ವಿಸ್ತರಿಸಲಾಗಿದೆ. ಇದಕ್ಕೆ ಮುಂಚೆ, ಎರಡು ಹೆಕ್ಟೇರ್‌ಗಿಂತ ಕಡಿಮೆ ಜಮೀನು ಹೊಂದಿರುವ ರೈತರಿಗೆ ವರ್ಷಕ್ಕೆ 6000 ರೂಪಾಯಿ ನೀಡಲಾಗುವುದು ಎಂದಿತ್ತು. ಈಗ ಜಮೀನಿನ ಗಾತ್ರವನ್ನು ಪರಿಗಣಿಸದೆ ಎಲ್ಲಾ ರೈತರಿಗೆ ವಿಸ್ತರಿಸಿರುವುದು ಒಂದು ರೀತಿಯಲ್ಲಿ ಪ್ರತಿಗಾಮಿ ಹೆಜ್ಜೆಯಾಗಿದೆ. ವಿಶೇಷವಾಗಿ, ಒಕ್ಕಲು ರೈತ ಮತ್ತು ಕೃಷಿ ಕಾರ್ಮಿಕರು ಈ ಬೆಂಬಲವನ್ನು ಪಡೆಯಲಾರರು.

ಹೆಚ್ಚುತ್ತಿರುವ ನೀರಿನ ಬಿಕ್ಕಟ್ಟು ಮತ್ತು ದೇಶದಲ್ಲಿನ ವ್ಯಾಪಕ ಬರಗಾಲವನ್ನು 'ಜಲ ಶಕ್ತಿ' ಎಂಬ ಹೊಸ ಖಾತೆಯನ್ನು ತೆರೆಯುವ ಮೂಲಕ ಅಧಿಕಾರಶಾಹಿ ಕ್ರಮದಿಂದ ಎದುರಿಸಲು ಸರಕಾರ ಹೊರಟಿದೆ.

ಉದ್ಯೋಗ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಸ್ವಯಂ ಉದ್ಯೋಗಕ್ಕೆ ಹೆಚ್ಚು ಒತ್ತು ನೀಡುವುದನ್ನು ಮುಂದುವರಿಸಲಾಗಿದೆ. ಮುದ್ರಾ ಸಾಲವನ್ನು 30 ಕೋಟಿ ಜನರಿಗೆ ವಿಸ್ತರಿಸಲು ಭರವಸೆ ನೀಡಲಾಗಿದೆ. 2024ರ ವೇಳೆಗೆ ಉನ್ನತ ಶಿಕ್ಷಣದಲ್ಲಿ ಎರಡು ಕೋಟಿ ಹೆಚ್ಚುವರಿ ಸೀಟುಗಳನ್ನು ಒದಗಿಸುವ ಭರವಸೆ ನೀಡಿರುವುದರಿಂದ ಶಿಕ್ಷಿತ ನಿರುದ್ಯೋಗಿಗಳ ಪಾಡು ಹೆಚ್ಚು ತೀವ್ರಗೊಳ್ಳಲಿದೆ. ಅವರಿಗೆ ಹೇಗೆ ಉದ್ಯೋಗ ನೀಡುತ್ತೀರಿ?.

ಮಹಿಳಾ ಸಬಲೀಕರಣ ಮತ್ತು ಅವರ ಸ್ಥಾನಮಾನ ಹೆಚ್ಚಿಸುವ ಬಗ್ಗೆ ಅನೇಕ ಭರವಸೆಗಳನ್ನು ನೀಡಿರುವುದಾದರೂ ಮಹಿಳೆಯರಿಗೆ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಮೂರನೇ ಒಂದರಷ್ಟು ಮೀಸಲಾತಿ ಕಲ್ಪಿಸುವ ಅತ್ಯಂತ ಮಹತ್ವದ ಕ್ರಮದ ಪತ್ತೆಯಿಲ್ಲ. ಲೋಕಸಭೆಯಲ್ಲಿ ಭಾರೀ ಬೆಂಬಲ ಸಿಗಲಿರುವ ಕಾಲಘಟ್ಟದಲ್ಲಿ ಈ ಬದ್ಧತೆಗೆ ಬೆನ್ನು ತೋರಿಸುವುದಕ್ಕೆ ಯಾವ ಕಾರಣವೂ ಇಲ್ಲ.

ವಿದೇಶ ನೀತಿಯ ವಿಭಾಗವಂತೂ ತೀರಾ ಜಾಳು ಮತ್ತು ಸಂಕುಚಿತವಾಗಿರುವುದು ಗಮನಾರ್ಹ. 'ನೆರೆಹೊರೆ ಮೊದಲು' ನೀತಿಗೆ ಆದ್ಯತೆ ನೀಡಲಾಗಿದೆ. ಇದು ದಕ್ಷಿಣ ಏಷ್ಯಾ ಮತ್ತು 'ಬಿಐಎಂಎಸ್‌ಟಿಇಸಿ' ಯಲ್ಲಿರುವ ನೆರೆಯ ದೇಶಗಳಿಗೆ ಸಂಬಂಧಿಸಿದ್ದು. ಆದರೆ ಜಾಗತಿಕವಾಗಿ ಪ್ರಮುಖ ಬದಲಾವಣೆಗಳು ಮತ್ತು ಕ್ಷೋಭೆಗಳು ನಡೆಯುತ್ತಿರುವ ಸಂದರ್ಭದಲ್ಲಿ ಸರಕಾರದ ಜಾಗತಿಕ ದೃಷ್ಟಿಕೋನವೇನಾದರೂ ಏನು? ಸ್ವರಕ್ಷಣಾವಾದ ಮತ್ತು ವಾಣಿಜ್ಯ ಸಮರಗಳು, ಪಶ್ಚಿಮ ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕಾದಲ್ಲಿ ಅಮೆರಿಕದ ಆಕ್ರಮಣದ ಬೆದರಿಕೆಗಳು, ಹವಾಮಾನ ಬದಲಾವಣೆಯ ಅಪಾಯಕಾರಿ ಪರಿಣಾಮಗಳು– ಈ ಎಲ್ಲವನ್ನೂ ಮೌನವಾಗಿ ಪಕ್ಕಕ್ಕೆ ಸರಿಸಲಾಗಿದೆ. ಪ್ರಮುಖ ರಾಷ್ಟ್ರಗಳಾದ ಅಮೆರಿಕ, ರಷ್ಯಾ, ಯುರೋಪ್, ಚೀನಾದೊಂದಿಗಿನ ಭಾರತದ ಸಂಬಂಧ ಕುರಿತಂತೆ ಸಾಂಪ್ರದಾಯಿಕವಾದ ಟಿಪ್ಪಣಿಯನ್ನು ಕೂಡ ಭಾಷಣದಲ್ಲಿ ಮಾಡಲಾಗಿಲ್ಲ. ಮೋದಿ ಸರಕಾರ ಅಮೆರಿಕಕ್ಕೆ ಜೋತು ಬಿದ್ದಿರುವುದರಿಂದ ಮತ್ತು ಟ್ರಂಪ್ ಆಡಳಿತದ ಧಮಕಿಗಳನ್ನು ಎದುರಿಸುತ್ತಿರುವುದರಿಂದ, ನಮ್ಮ ರಾಷ್ಟ್ರೀಯ ಹಿತದ ಆಧಾರದಲ್ಲಿ ಯಾವುದೇ ನಿರ್ದಿಷ್ಟ ಧೋರಣೆ ತಳೆಯಲು ಸರಕಾರಕ್ಕೆ ಸಾಧ್ಯವಾಗುತ್ತಿಲ್ಲ ಎನ್ನುವುದು ಇದರ ಅರ್ಥವೇ?.

ಭಾಷಣದ ಪ್ರಕಾರವೇ ಹೇಳುವುದಾದರೆ, ತನ್ನ ಹಿಂದುತ್ವ ಕಣ್ಣೋಟಕ್ಕೆ ಅನುಗುಣವಾಗಿ ಸರಕಾರ ರಾಷ್ಟ್ರೀಯ ಭದ್ರತೆಗೆ ಅತಿ ಹೆಚ್ಚಿನ ಆದ್ಯತೆ ನೀಡುತ್ತದೆ. "ಭಯೋತ್ಪಾದನೆ ಮತ್ತು ನಕ್ಸಲ್‌ವಾದ"ದ ವಿರುದ್ಧ ಹೋರಾಡುವುದಲ್ಲದೆ ರಾಷ್ಟ್ರೀಯ ನಾಗರಿಕ ದಾಖಲೆ (ಎನ್‌ಆರ್‌ಸಿ) ಮತ್ತು ನಾಗರಿಕತ್ವ ಕಾನೂನು ತಿದ್ದುಪಡಿಯ ಎರಡು ಅಸ್ತ್ರಗಳನ್ನು ಬಳಸುವುದು ಸರಕಾರ ಉದ್ದೇಶವಾಗಿದೆ. ನುಸುಳಿಕೆಯನ್ನು ತಡೆಯುವುದು ಹಾಗೂ ಧರ್ಮದ ಆಧಾರದಲ್ಲಿ 'ವಿದೇಶಿಯರು' ಎಂದು ಪರಿಗಣಿಸಲಾಗುವವರನ್ನು ಗುರಿ ಮಾಡುವುದು ಇದರ ಗುರಿಯಾಗಿದೆ. ಬಾಂಗ್ಲಾದೇಶದಿಂದ ನುಸುಳಿಕೆಯಿಂದ ಪೀಡಿತವಾದ ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ಇತರ ಈಶಾನ್ಯ ರಾಜ್ಯಗಳಲ್ಲಿ ಎನ್‌ಆರ್‌ಸಿ ಆದ್ಯತೆಯ ಮೇಲೆ ಅನ್ವಯವಾಗುತ್ತದೆ. ಅಸ್ಸಾಮ್ ನ ಎನ್‌ಆರ್‌ಸಿ ಅನುಭವವನ್ನು ನೋಡಿದರೆ ಅದು ಮುಸ್ಲಿಮರನ್ನೇ ಮುಖ್ಯವಾಗಿ ಗುರಿಯಾಗಿಸುತ್ತದೆ; ಅವರು ಗಡಿಯಾಚೆಯಿಂದ ಬಂದವರೇ ಇರಲಿ, ಅಲ್ಲದವರೇ ಇರಲಿ. ಮುಸ್ಲಿಮೇತರ ಮೂಲದ ವಲಸೆಗಾರರನ್ನು ನಾಗರಿಕತ್ವಕ್ಕೆ ಅನರ್ಹಗೊಳಿಸುವ ಉದ್ದೇಶದಿಂದ ನಾಗರಿಕತ್ವ ಕಾನೂನಿಗೆ ತಿದ್ದುಪಡಿ ತರುವುದು ಗಡಿಯಾಚೆಯಿಂದ ಬಂದ ಹಿಂದೂ ನಿರಾಶ್ರಿತರು ಮತ್ತು ವಲಸಿಗರನ್ನು ಸೆಳೆದುಕೊಳ್ಳುವ ತಂತ್ರವಾಗಿದೆ.

ಇದು ಈಶಾನ್ಯ ರಾಜ್ಯಗಳು ಮತ್ತು ಪಶ್ಚಿಮ ಬಂಗಾಳದಲ್ಲಿ ಕೋಮು ಧ್ರುವೀಕರಣವೂ ಸೇರಿದಂತೆ ಗಂಭೀರ ದುಷ್ಪರಿಣಾಮ ಬೀರಲಿದ್ದು ಆ ಬಗ್ಗೆ ಬಿಜೆಪಿಗೆ ಕಿಂಚಿತ್ತೂ ಕಾಳಜಿ ಇಲ್ಲ. ಬದಲಿಗೆ ಈ ಒಡಕಿನಿಂದ ಲಾಭ ಪಡೆಯುವುದು ಅದರ ಉದ್ದೇಶವಾಗಿದೆ.

ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, "ಜಮ್ಮು ಮತ್ತು ಕಾಶ್ಮೀರದ ನಿವಾಸಿಗಳಿಗೆ ಸುರಕ್ಷಿತ ಹಾಗೂ ಶಾಂತಿಯುತ ವಾತಾವರಣವನ್ನು" ಕಲ್ಪಿಸಿಕೊಡುವ ಭರವಸೆಯು ಮೋದಿ ಸರಕಾರದ ಸೋಗಲಾಡಿತನಕ್ಕೆ ದೊಡ್ಡ ಉದಾಹರಣೆಯಾಗಿದೆ. ಕಳೆದ ಐದು ವರ್ಷಗಳಲ್ಲಿ ಸರಕಾರದ ತೋಳ್ಬಲ ಪ್ರದರ್ಶನದ ನೀತಿಗಳು ಉಗ್ರಗಾಮಿ ಹಾಗೂ ಪ್ರತಿ–ಉಗ್ರಗಾಮಿ ಕಾರ್ಯಾಚರಣೆಗಳು ಉಚ್ಚವ ಮೂಲಕ ಕಣಿವೆಯಲ್ಲಿ ಪರಿಸ್ಥಿತಿ ಹದಗೆಡಲು ಕಾರಣವಾಗಿದ್ದವು. ಸಂಬಂಧಪಟ್ಟ ಪಕ್ಷಗಳೊಂದಿಗೆ ರಾಜಕೀಯ ಮಾತುಕತೆ ಆರಂಭಿಸುವ ಬಗ್ಗೆ ಭಾಷಣದಲ್ಲಿ ಚಕಾರ ಎತ್ತಿಲ್ಲ. ಅಮಿತ್ ಷಾ ಗೃಹ ಸಚಿವ ಆಗಿರುವುದರಿಂದ ತುಂಬಾ ಕಠಿಣ ಭದ್ರತಾ ಧೋರಣೆ ತಾಳಲು ಒತ್ತಡ ಬರುವ ಸಾಧ್ಯತೆಯಿದೆ. ಇದಕ್ಕೆ ಬದಲು, ಬಿಕ್ಕಟ್ಟನ್ನು ಬಗೆಹರಿಸಬೇಕೆಂದಿದ್ದರೆ ಮಾತುಕತೆ ನಡೆಸುವ ಕುರಿತು ಸೌಮ್ಯವಾದಿ ಹುರಿಯತ್ ಮುಂದಿಟ್ಟಿರುವ ಪ್ರಸ್ತಾವನೆಯನ್ನು ಅಂಗೀಕರಿಸಿ ಸಂಧಾನ ಮಾತುಕತೆಗೆ ಮುಂದಾಗುವುದು ಒಳ್ಳೆಯದು.

"ಸಹಕಾರಿ ಒಕ್ಕೂಟ ತತ್ವದ ವ್ಯವಸ್ಥೆ ಹಾಗೂ ಅದರ ಭಾವವನ್ನು ಬಲಗೊಳಿಸುವ" ಬಗ್ಗೆ ಈ ಭಾಷಣದಲ್ಲಿ ತೋರಿಕೆಯ ಮಾತುಗಳಿದ್ದರೂ, ಈ ವಿಚಾರದಲ್ಲಿ ಆಶಾಭಾವನೆ ಹೊಂದಬಹುದಾದ ಯಾವುದೇ ಅಂಶವನ್ನು ಅದು ಪ್ರಸ್ತಾವಿಸಿಲ್ಲ. ಅದರ ಬದಲು, ಭಯೋತ್ಪಾದನೆಯ ವಿರುದ್ಧ ಹೋರಾಡುವ ನೆಪದಲ್ಲಿ ಸೂಚಿಸಲಾಗಿರುವ ಕ್ರಮಗಳಲ್ಲಿ ಒಂದು ರಾಜ್ಯಗಳ ಹಕ್ಕುಗಳ ಮೇಲೆ ಸವಾರಿ ಮಾಡುತ್ತದೆ. ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಕಾನೂನಿನ ವಿವಿಧ ತಿದ್ದುಪಡಿಗಳಿಗೆ ಕೇಂದ್ರ ಸಚಿವ ಸಂಪುಟ ಹಸಿರು ನಿಶಾನೆ ತೋರಿದೆ. ಯಾವುದೇ ರಾಜ್ಯದ ಅತ್ಯುನ್ನತ ಪೊಲೀಸ್ ಅಧಿಕಾರಿಯ ಒಪ್ಪಿಗೆ ಇಲ್ಲದೆಯೇ ತನಿಖೆ ನಡೆಸಲು ಎನ್‌ಐಎಗೆ ಅಧಿಕಾರ ನೀಡುವುದು ಅಂಥ ತಿದ್ದುಪಡಿಗಳಲ್ಲಿ ಒಂದಾಗಿದೆ. ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾನೂನು ಮತ್ತು ಎನ್‌ಐಎ ಕಾನೂನು ಅನೇಕ ವಿಚಾರಗಳಲ್ಲಿ ರಾಜ್ಯಗಳ ಪೊಲೀಸರನ್ನು ಕಡೆಗಣಿಸಿ ಕ್ರಮ ಕೈಗೊಳ್ಳಲು ಈಗಾಗಲೇ ಕೇಂದ್ರೀಯ ಸಂಸ್ಥೆಗೆ ಅನುವು ಮಾಡಿಕೊಟ್ಟಿವೆ. ಪ್ರಸ್ತಾವಿತ ತಿದ್ದುಪಡಿಯು ರಾಜ್ಯಗಳ ಅಧಿಕಾರಗಳನ್ನು ಇನ್ನಷ್ಟು ಮೊಟಕುಗೊಳಿಸಲಿದೆ.

ಬಿಜೆಪಿಯ ಹಿಂದುತ್ವ ರಾಷ್ಟ್ರವಾದದ ಕಾರ್ಯಸೂಚಿ, ಅದಕ್ಕೆ ಆಸರೆಯಾಗಿ ಒಂದು ರಾಷ್ಟ್ರೀಯ ಭದ್ರತಾ ಪ್ರಭುತ್ವ–ಇದು 'ಹೊಸ ಭಾರತ'ದ ಒಂದೇ ಆಯಾಮದ ದೃಷ್ಟಿಯಾಗಿ ಹೊಮ್ಮಿ ಬರುತ್ತಿದೆ.


ಅನು: ವಿಶ್ವ

**ವಿಕಾಸ್' ನ್ನು 'ವಿಶ್ವಾಸ್'ಗೆ ವಿಸ್ತರಿಸುವ ಆವಶ್ಯಕತೆ ಏಕೆ ಕಂಡು ಬಂತು?**





ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ನ್ಯೂಸ್‌ಸ್ಟಿಂಗ್

**ಬರಗಾಲವನ್ನು ಎದುರಿಸಲು ಅಧಿಕಾರಶಾಹಿ ಕ್ರಮ ಮಾತ್ರ !**




ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

**ಒಟ್ಟಾರೆ ಆರ್ಥಿಕ ನೀತಿಗಳ ಬಗ್ಗೆ ರಾಷ್ಟ್ರಪತಿ ಭಾಷಣ ಮೌನ!**



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ಪ್ರಜಾವಾಣಿ

## ನಿರಾಶೆಯೂ ಇಲ್ಲ.. ಹತಾಶೆಯೂ ಇಲ್ಲ

# ಬಲಪಂಥೀಯ ಕ್ರೋಢೀಕರಣಕ್ಕೆ ಎಡಪಂಥ ಮಾತ್ರ ಪರಿಣಾಮಕಾರಿ ಪ್ರತಿರೋಧ ಒಡ್ಡಲು ಸಾಧ್ಯ

## – ಸಿಪಿಐ–ಎಂ ಕೇಂದ್ರ ಸಮಿತಿ ಕರೆ

**ಜೂನ್ 7–9 ರಂದು ದೆಹಲಿಯಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಕೇಂದ್ರ ಸಮಿತಿ 17ನೇ ಲೋಕಸಭಾ ಚುನಾವಣೆಯ ವಿಮರ್ಶಾ ವರದಿಯನ್ನು ಚರ್ಚಿಸಿ ಅಂಗೀಕರಿಸಿದೆ. ಬಿಜೆಪಿಯ ನಿರ್ಣಾಯಕ ಗೆಲುವು, ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳ ಸೋಲು, ಹಾಗೂ ಅದಕ್ಕೆ ಕಾರಣಗಳನ್ನು ವರದಿ ವಿಶ್ಲೇಷಿಸಿದೆ. ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಸೋಲನ್ನು ವಿವರವಾಗಿ ವಿಶ್ಲೇಷಿಸಿದ ವರದಿ, ಪಕ್ಷದ ಪ್ರಮುಖ ನ್ಯೂನತೆಗಳನ್ನು ಗುರುತಿಸಿ ಪರಿಹಾರ ಕ್ರಮಗಳನ್ನು ಸೂಚಿಸಿದೆ. ಬಲಪಂಥೀಯ ಕ್ರೋಢೀಕರಣದ ವಿರುದ್ಧ ಪರಿಣಾಮಕಾರಿ ಪ್ರತಿರೋಧ ಒಡ್ಡಲು ಸಿಪಿಐ(ಎಂ) ಮತ್ತು ಎಡಪಂಥವನ್ನು ಬಲಪಡಿಸಲು ಕೇಂದ್ರ ಸಮಿತಿ ಕರೆ ಕೊಟ್ಟಿದೆ.**

**(ಕೇಂದ್ರ ಸಮಿತಿ ಅಂಗೀಕರಿಸಿದ ವರದಿಯ ಕೊನೆಯ ಭಾಗವನ್ನು ಇಲ್ಲಿ ಕೊಡಲಾಗಿದೆ)**



**ಬಂಗಾಳದಲ್ಲಿ ರಾಜಕೀಯ ಹಿಂಸಾಚಾರ ಮತ್ತು ಕೋಮುವಾದೀಕರಣ ಹರಡುತ್ತಿರುವ ಬಿಜೆಪಿ–ತೃಣಮೂಲಗಳ ವಿರುದ್ಧ ಶಾಂತಿ–ಸೌಹಾರ್ದತೆ ಸ್ಥಾಪಿಸಲು ಬಂಗಾಳ ತಮ್ಲೋಕ್ ನಲ್ಲಿ ರ್‍ಯಾಲಿ**

### ಮುಂದುವರೆಯುತ್ತಿರುವ ನಮ್ಮ ಸ್ವಂತ ಬಲದ ಇಳಿಕೆ

ಹಿಂದಿನ ಎರಡು ಚುನಾವಣೆಗಳಲ್ಲಿ ಸತತವಾಗಿ ಅನುಭವಿಸಿದ ಸೋಲುಗಳ ನಂತರ ಬಂದಿರುವ ಈ ಫಲಿತಾಂಶಗಳು, ನಮ್ಮ ಸ್ವಂತ ಬಲ ಕುಸಿಯುತ್ತಿರುವುದನ್ನು ಮತ್ತು ಪರಿಸ್ಥಿತಿಗಳನ್ನು ಬದಲಿಸಲು ನಾವು ರಾಜಕೀಯವಾಗಿ ಮಧ್ಯ ಪ್ರವೇಶಿಸುವ ನಮ್ಮ ಸಾಮರ್ಥ್ಯವನ್ನು ಬಹಳವಾಗಿ ಕುಂದಿಸಿವೆ ಎಂಬುದನ್ನು ತೋರಿಸುತ್ತವೆ. ನಾವು ಸ್ಪರ್ಧಿಸಿದ್ದ ಸೀಟುಗಳಲ್ಲಿ ನಮ್ಮ ಮತಗಳಿಕೆಯ ಪಾಲು ಮತ್ತಷ್ಟು ಇಳಿದಿದೆ. ತಮಿಳುನಾಡು ಮತ್ತು ಒಂದು ಸೀಮಿತ ಮಟ್ಟದಲ್ಲಿ ಆಂಧ್ರ ಹಾಗೂ ತೆಲಂಗಾಣ ರಾಜ್ಯಗಳನ್ನು ಹೊರುತುಪಡಿಸಿದರೆ, ಬೇರೆ ಯಾವುದೇ ರಾಜ್ಯದಲ್ಲಿ ನಾವು ಪ್ರಾದೇಶಿಕ ಪಕ್ಷಗಳೊಂದಿಗೆ ಯಾವುದೇ ಚುನಾವಣಾ ಒಡಂಬಡಿಕೆ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ.

ನಮ್ಮ ಪಕ್ಷವು ಬಲವಾಗಿರುವ ರಾಜ್ಯಗಳಲ್ಲಿ ನಮ್ಮ ಮತ ಗಳಿಕೆ ಇಳಿಕೆಯಾಗುತ್ತಿರುವ ಅಂಶವು ನಮ್ಮನ್ನು ಬಹಳವಾಗಿ ಬಾಧಿಸುತ್ತಿದೆ. ರಾಜ್ಯ ಸಮಿತಿಗಳು ನಡೆಸಿದ ಪ್ರಾಥಮಿಕ ಪರಾಮರ್ಶೆಯನ್ನು ಈ ಮೇಲಿನಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಆದರೆ, ಈ ಪರಾಮರ್ಶೆಗಳಲ್ಲಿ ನಮ್ಮ ಮೂಲ ವರ್ಗಗಳು – ಕಾರ್ಮಿಕ ವರ್ಗ, ರೈತಾಪಿ ಜನತೆ ಮತ್ತು ಕೃಷಿ ಕಾರ್ಮಿಕರು ಯಾವ ಕಾರಣವನ್ನು ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಮತ ಚಲಾಯಿಸಿದರು ಎಂಬುದರ ಬಗ್ಗೆ ಯಾರೂ ತಮ್ಮ ಅಂದಾಜನ್ನು ಕೊಟ್ಟಿಲ್ಲ. ಜನತೆ ನಮ್ಮಿಂದ ಅಗಲಿರುವುದು ಮತ್ತು ಪಾರಂಪರಿಕವಾಗಿ ನಮಗೆ ಮತ ಹಾಕುತ್ತಿದ್ದ ಜನ ವಿಭಾಗಗಳು ನಮ್ಮ ಕೈ ಬಿಟ್ಟಿರುವ ಅಂಶಗಳನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ನಾವು ಒಂದು ಆಳವಾದ ಪರಾಮರ್ಶೆ ಮಾಡಬೇಕಾಗುತ್ತದೆ. ನಮ್ಮ ಕೆಲವು ದೌರ್ಬಲ್ಯಗಳನ್ನು ಗುರುತಿಸುವುದು ಮಾತ್ರವಲ್ಲದೆ ಅವುಗಳನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ.

1) ಕಳೆದ ಕೆಲವು ವರ್ಷಗಳಲ್ಲಿ, ನಮ್ಮ ವರ್ಗ ಸಂಘಟನೆಗಳು ಮತ್ತು ಸಾಮೂಹಿಕ ಸಂಘಟನೆಗಳು ಜನ ಸಾಮಾನ್ಯರ ಸಮಸ್ಯೆಗಳ ಮೇಲೆ ಚಳುವಳಿ ನಡೆಸಿವೆ; ಹೋರಾಟ ನಡೆಸಿವೆ. ದೇಶದಲ್ಲಿ ಅಲ್ಲಲ್ಲಿ ಚದುರಿದ್ದ ಅವು ಒಂದೇ ತೆರನಾಗಿರಲಿಲ್ಲ ಮತ್ತು ಪಟ್ಟು ಹಿಡಿದ ಹೋರಾಟಗಳಾಗಿರಲಿಲ್ಲ. ಕಾರ್ಮಿಕ ವರ್ಗವು ಎರಡು ದಿನಗಳ ಒಂದು ಜಂಟಿ ಮುಷ್ಕರ ಆಚರಿಸಿತು. ಅದರಲ್ಲಿ ದೇಶದ ಆರು ಕೋಟಿ ದುಡಿಮೆಗಾರರು ಭಾಗವಹಿಸಿದರು. ಕೃಷಿ ಸಂಕಷ್ಟಗಳಿಗೆ ಸಂಬಂಧಿಸಿದಂತೆ ರೈತ ಸಂಘಟನೆಯು ಮಹಾರಾಷ್ಟ್ರದಲ್ಲಿ ಒಂದು 'ಕಿಸಾನ್ ಲಾಂಗ್ ಮಾರ್ಚ್' ಅಯೋಜಿಸಿತ್ತು ಮತ್ತು ರಾಜಸ್ಥಾನದ ರೈತರ ಹೊರಾಟವು ದಿಲ್ಲಿಯಲ್ಲಿ ಒಂದು ಕಾರ್ಮಿಕರ–ರೈತರ–ಕೃಷಿಕೂಲಿಗಾರರ ರ್‍ಯಾಲಿಯಲ್ಲಿ ಮುಕ್ತಾಯಗೊಂಡಿತು.

ನಮ್ಮ ಪಕ್ಷವು ಬಲವಾಗಿರುವ ರಾಜ್ಯಗಳಲ್ಲಿ ದೊಡ್ಡ ದೊಡ್ಡ ಜನಪ್ರಿಯ ಹೋರಾಟಗಳಿಗೆ ಜನರನ್ನು ಸಜ್ಜುಗೊಳಿಸಿದ ಘಟನೆಗಳನ್ನು ಈ ಅವಧಿಯಲ್ಲಿ ಕಂಡಿದ್ದೇವೆ. 56 ಲಕ್ಷ ಮಹಿಳೆಯರು ಒಂದು ಐತಿಹಾಸಿಕ ಗೋಡೆ ನಿರ್ಮಿಸಿದ್ದಕ್ಕೆ ಕೇರಳ ಸಾಕ್ಷಿಯಾಗಿದೆ. ಪಶ್ಚಿಮ ಬಂಗಾಳದಲ್ಲಿ ಎಡ ರಂಗವು ಒಂದು ಅಭೂತಪೂರ್ವ ರ್‍ಯಾಲಿ ನಡೆಸಿದೆ. ಈ ರ್‍ಯಾಲಿಗೆ ತಯಾರಿಯಾಗಿ ರಾಜ್ಯದ ಉದ್ದಗಲಕ್ಕೂ ಒಂದು ಸರಣಿಯ ಜನಸಾಮೂಹದ ಚಟುವಟಿಕೆಗಳು ನಡೆದಿವೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಜನ ಭಾಗವಹಿಸಿದ್ದಾರೆ. ತ್ರಿಪುರಾದಲ್ಲಿ ಅತ್ಯಂತ ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ಪಕ್ಷವು ಕೆಲವು ರಾಜಕೀಯ ಕಾರ್ಯಕ್ರಮಗಳನ್ನು ನಡೆಸಿದೆ.

ಈ ಎಲ್ಲ ಜನಪ್ರಿಯ ಕಾರ್ಯಕ್ರಮಗಳಿಗೆ ಮತ್ತು ಹೋರಾಟಗಳಿಗೆ ಅಣಿನೆರೆಸಲಾದ ಎಲ್ಲ ಜನ ವಿಭಾಗಗಳ ಬೆಂಬಲವು ಸಿಪಿಐ(ಎಂ)/ಎಡ ಪಕ್ಷಗಳ ಪರವಾದ ಮತಗಳಾಗಿ ಪರಿವರ್ತನೆಯಾಗಲಿಲ್ಲ. ನಾವು ಸಂಘಟಿಸುವ ಹೋರಾಟಗಳಲ್ಲಿ ಭಾಗವಹಿಸುವ ಜನತೆಯಲ್ಲಿ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ನಾವು ವಿಫಲರಾಗಿದ್ದೇವೆ. ನಮ್ಮಲ್ಲಿ ತಳವೂರಿರುವ ಈ ವಿಫಲತೆಯಿಂದ ನಾವು ತುರ್ತಾಗಿ ಹೊರಬರಬೇಕಿದೆ. ಈ ವಿಫಲತೆಯಿಂದ ಹೊರಬರಲು ಅಸಮರ್ಥರಾದರೆ, ನಾವು ಸಂಘಟಿಸುವ ಹೋರಾಟಗಳಲ್ಲಿ ಭಾಗವಹಿಸುವ ಬೃಹತ್ ಸಂಖ್ಯೆಯ ಜನತೆ ಮತ್ತು ಚುನಾವಣೆಗಳಲ್ಲಿ ನಮಗೆ ಸಿಗುವ ಮತಗಳ ಸಂಖ್ಯೆಯ ನಡುವೆ ಇರುವ ಕಂದಕ ವಿಶಾಲವಾಗುತ್ತಾ ಹೋಗುತ್ತದೆ.

2) ಯುವಜನರ ನಡುವೆ ಪಕ್ಷದ ಬಗ್ಗೆ ಒಲವು ಸೀಮಿತವಾಗಿಯೇ ಮುಂದುವರಿಯುತ್ತಿದೆ. ಈ ಅಂಶವನ್ನು ಅನುಕ್ರಮವಾಗಿ ಜರುಗಿದ ನಮ್ಮ ಪಕ್ಷದ ಮಹಾಧಿವೇಶನಗಳಲ್ಲಿ ಗುರುತಿಸಿದ್ದೇವೆ ಮತ್ತು ಈ ಪರಿಸ್ಥಿತಿಯನ್ನು ಎದುರಿಸಲು ಮತ್ತು ಅದರಿಂದ ಹೊರಬರುವ ಕ್ರಮಗಳ ಕುರಿತು ಈಗಾಗಲೇ ತೀರ್ಮಾನಿಸಿದ್ದೇವೆ. ಒಂದೋ, ನಾವು ಅವುಗಳನ್ನು ಕಾರ್ಯಗತಗೊಳಿಸಿಲ್ಲ ಅಥವಾ ಆ ಪ್ರಯತ್ನದಲ್ಲಿ ನಾವು ಜಯ ಗಳಿಸಿಲ್ಲ ಎಂಬುದಂತೂ ಸ್ಪಷ್ಟವಿದೆ. ನವ–ಉದಾರವಾದವು, ಸ್ವತಃ, ರಾಜಕೀಯವಾಗಿ ಯುವಕರು ಜಾಗೃತಗೊಳ್ಳಲಾರದಂತಹ/ಮೈ ಮರೆಯುವಂತಹ ಪರಿಸ್ಥಿತಿಯತ್ತ ಕೊಂಡೊಯ್ಯುತ್ತದೆ. ಶಿಕ್ಷಣದ ಖಾಸಗೀಕರಣವು, ಖಾಸಗಿ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ರಾಜಕೀಯ ಚಟುವಟಿಕೆಗಳಲ್ಲಿ ತೊಡಗದಂತೆ ನಿಷೇಧಿಸಲು ದಾರಿಮಾಡಿಕೊಟ್ಟಿದೆ. ಇನ್ನು ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ವಿದ್ಯಾರ್ಥಿ ಯೂನಿಯನ್‌ಗಳಿಗೆ ಚುನಾವಣೆ ಮಾಡಿಕೊಳ್ಳುವ ವಿದ್ಯಾರ್ಥಿಗಳ ಪ್ರಜಾತಾಂತ್ರಿಕ ಹಕ್ಕುಗಳನ್ನು ದೇಶಾದ್ಯಂತ ತೀವ್ರವಾಗಿ ಹತ್ತಿಕ್ಕಲಾಗಿದೆ. ಅಸಾಧಾರಣವಾಗಿ ಮತ್ತು ಅಸಂಖ್ಯಾತವಾಗಿ ಬೆಳೆದಿರುವ ಟ್ಯುಟೋರಿಯಲ್ ಕಾಲೇಜುಗಳು ರಾಜಕೀಯ ಚಟುವಟಿಕೆಗಳ ಮೇಲೆ ನಿಷೇದ ಹೇರಿರುವುದರಿಂದಾಗಿ, ಕೋಟ್ಯಂತರ ಎಳೆಯ ಮಕ್ಕಳು ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳದಂತೆ ನೋಡಿಕೊಳ್ಳಲಾಗಿದೆ. ನಿರುದ್ಯೋಗದ ಮಟ್ಟವು ದಾಖಲೆಯ ಪ್ರಮಾಣದಲ್ಲಿದ್ದರೂ ಸಹ, ಅದರ ವಿರುದ್ಧವಾಗಿ ಸಮರಶೀಲ ಹೋರಾಟ ನಡೆಸುವಂತೆ ಯುವಕರನ್ನು ಸೆಳೆಯುವುದು ನಮಗೆ ಸಾಧ್ಯವಾಗಿಲ್ಲ.

ಇಂತಹ ಪರಿಸ್ಥಿತಿಯಲ್ಲಿ, ಯುವಕರನ್ನು ತಲುಪಲು ನಮಗಿರುವ ಒಂದು ಹೆದ್ದಾರಿ ಎಂದರೆ, ಅದು ಸಾಮಾಜಿಕ ಮಾಧ್ಯಮಗಳು ಮತ್ತು ಆಧುನಿಕ ತಂತ್ರಜ್ಞಾನದ ಸಂಪರ್ಕ ಸಾಧನಗಳು. ಬಿಜೆಪಿಯು ತನ್ನ ಸಂದೇಶವನ್ನು ಹರಡಲು ಮತ್ತು ಯುವಕರ ನಡುವೆ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಈ ಸಂಪರ್ಕ ಸಾಧನಗಳನ್ನು ಬಹಳ ಯಶಸ್ವಿಯಾಗಿ ಬಳಸಿಕೊಂಡಿತು. ಈ ಬಗ್ಗೆ, ನಮ್ಮ ಪಕ್ಷವು, ರಾಷ್ಟ್ರ ಮತ್ತು ರಾಜ್ಯ ಎರಡೂ ಮಟ್ಟದಲ್ಲಿ, ಅಗತ್ಯ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕು.

3) ನಗರ ಪ್ರದೇಶಗಳಲ್ಲಿ, ಪಟ್ಟಣ ವಾಸಿ ಬಡ ಜನತೆ ಮತ್ತು ಮಧ್ಯಮ ವರ್ಗಗಳಿಗೆ ನಮ್ಮ ಮೇಲಿನ ನಂಬಿಕೆ ಕಡಿಮೆಯಾಗುತ್ತಿದೆ. ಈ ಪರಿಸ್ಥಿತಿಯನ್ನು ಸರಿಪಡಿಸಲು ನಾವು ಕೆಲವು ತೀರ್ಮಾನಗಳನ್ನು ಹಿಂದೆಯೇ ತೆಗೆದುಕೊಂಡಿದ್ದೆವು. ಅದರಿಂದ ಏನೂ ಪ್ರಯೋಜನವಾಗಿಲ್ಲ.

4) ಅನೇಕ ಕ್ಷೇತ್ರಗಳಲ್ಲಿ, ನಮಗೆ ಬಂದಿರುವ ಮತಗಳ ಒಟ್ಟು ಸಂಖ್ಯೆಯು ನಮ್ಮ ವರ್ಗ ಮತ್ತು ಸಮೂಹ ಸಂಘಟನೆಗಳ ಒಟ್ಟು ಸದಸ್ಯ ಬಲಕ್ಕಿಂತಲೂ ಕಡಿಮೆ ಇದೆ. ಸದಸ್ಯತ್ವವು ಎರಡು ಕಡೆಗಳಲ್ಲೂ ಗಣನೆಯಾಗಿದೆ ಎಂದುಕೊಂಡರೂ ಸಹ, ಮತಗಳ ಈ ಅಂತರವು, ನಮ್ಮ ಸಮೂಹ ಸಂಘಟನೆಗಳ ಸದಸ್ಯರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸುವ ಪ್ರಕ್ರಿಯೆ ತೀರಾ ಬಲಹೀನವಾಗಿದೆ ಎಂಬುದನ್ನು ತಿಳಿಸುತ್ತದೆ.

### ಕಲಿಯಬೇಕಾದ ಪಾಠಗಳು

ಪಕ್ಷದ ಇತ್ತೀಚಿನ ಮಹಾಧಿವೇಶನಗಳಲ್ಲಿ ಸತತವಾಗಿ ಗಮನಿಸಿದಂತೆ, ಪಕ್ಷದ ಸ್ವತಂತ್ರ ಸಾಮೂಹಿಕ ನೆಲೆ ಇಳಿಮುಖವಾಗುತ್ತಿದ್ದು, ಅದು ಈಗ ಇನ್ನಷ್ಟು ಆಳವಾಗಿದೆ. ಚುನಾವಣಾ ಕಾರ್ಯಸಾಧನೆಯ ವಿಶ್ಲೇಷಣೆಯಿಂದ ಈ ನೆಮ್ಮದಿಗೆಡಿಸುವ ತೀರ್ಮಾನಕ್ಕೆ ಬರಲೇಬೇಕಾಗಿದೆ. ಪಕ್ಷ ತನ್ನ ರಾಜಕೀಯ ಪ್ರಭಾವವನ್ನು ವಿಸ್ತರಿಸಲು, ಸಂಘಟನಾ ಕೆಲಸ ಮತ್ತು ಬಲವನ್ನು ಹೆಚ್ಚಿಸಲು ಹಾಗೂ ರಾಜಕೀಯ ಮಧ್ಯಪ್ರವೇಶದ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ವಿಫಲವಾಗಿದೆ ಎಂದು ಈ ಕೆಟ್ಟ ಚುನಾವಣಾ ಫಲಿತಾಂಶಗಳು ಸೂಚಿಸುತ್ತಿವೆ. ಪೊಲಿಟ್‌ಬ್ಯುರೊ ಮತ್ತು ಕೇಂದ್ರ ಸಮಿತಿ ಈ ವೈಫಲ್ಯದ ಜವಾಬ್ದಾರಿಯನ್ನು ಹೊರಬೇಕು.

1. ಡಿಸೆಂಬರ್ 2015ರಲ್ಲಿ ಕೊಲ್ಕತ್ತಾದಲ್ಲಿ ನಡೆದ ಸಂಘಟನಾ ಪ್ಲೀನಂ ಒಂದು ನಿರ್ಣಯವನ್ನು

ಪುಟ 14 ಕ್ಕೆ

> "ಈ ಚುನಾವಣೆಗಳು ದೇಶದಲ್ಲಿ ಬಲಪಂಥೀಯ ರಾಜಕೀಯದ ದಾಳಿಯನ್ನು ಕ್ರೋಢಿಕರಿಸಿವೆ. ಬಲಪಂಥೀಯ ಕ್ರೋಢೀಕರಣಕ್ಕೆ ರಾಜಕೀಯ ಎಡಪಂಥ ಮಾತ್ರ ಪರಿಣಾಮಕಾರಿ ಪ್ರತಿರೋಧ ಒಡ್ಡಲು ಸಾಧ್ಯ. ಬಲಪಂಥೀಯ ಆಕ್ರಮಣವನ್ನು ಹಿಮ್ಮೆಟ್ಟಿಸಲು ಸಿಪಿಐ(ಎಂ) ಮತ್ತು ಎಡಪಂಥಕ್ಕೆ ಮಾತ್ರ ಅಗತ್ಯವಾದ ಸುಸಂಗತ ಸೈದ್ಧಾಂತಿಕ, ರಾಜಕೀಯ ಮತ್ತು ಸಂಘಟನಾ ಶಕ್ತಿ ಇರುವುದು..
>
> ಸಿಪಿಐ(ಎಂ) ಮತ್ತು ಎಡಪಂಥಕ್ಕೆ ನಿರಾಶೆಯಾಗಿಲ್ಲ, ಸೋಲಿನ ಹತಾಶೆಯೂ ಇಲ್ಲ. ಸಿಪಿಐ(ಎಂ) ಇಮ್ಮಡಿಗೊಳಿಸಿದ ಚೈತನ್ಯ ಮತ್ತು ದೃಢತೆಯೊಂದಿಗೆ, ತನ್ನ ನ್ಯೂನತೆಗಳನ್ನು ಹೋಗಲಾಡಿಸಲು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳುವುದು, ಹಾಗೂ ತನ್ನನ್ನು ಮತ್ತು ಎಡಪಂಥವನ್ನು ಬಲಪಡಿಸುವುದು. ಮೂಲಭೂತ ರಾಜಕೀಯ/ಸಾಮಾಜಿಕ ಬದಲಾವಣೆಗಳ ಮೂಲಕ ಶೋಷಣಾ–ರಹಿತ ಸಮಾಜದ ಸ್ಥಾಪನೆಯ ಗುರಿಯನ್ನು ಸಾಧಿಸಲು ಕಮ್ಯುನಿಸ್ಟರಾಗಿ ನಾವು ಬದ್ಧರಾಗಿದ್ದೇವೆ. ನಾವು ಜನತೆಯ ಬಳಿ ಮತ್ತೆ ಹೋಗುತ್ತೇವೆ, ಅವರಿಂದ ಕಲಿಯುತ್ತೇವೆ ಮತ್ತು ಅವರ ಜತೆ ಜೀವಂತ ಸಂಬಂಧಗಳನ್ನು ಹೊಂದುತ್ತೇವೆ. ಅವರ ಕಾಳಜಿಗಳಿಗಾಗಿ ಹೋರಾಡುತ್ತೇವೆ."

# ‘ಒಂದು ದೇಶ ಒಂದು ಚುನಾವಣೆ’, ‘....ಸಬ್ ಕಾ ವಿಶ್ವಾಸ್’, ‘ನವಭಾರತ’,‘ಮಹತ್ವಾಕಾಂಕ್ಷೆಯ ಜಿಲ್ಲೆಗಳು’ ಇತ್ಯಾದಿ

**ಜೂನ್ 19ರಂದು ನಡೆದ ಸಂಸತ್ತಿನಲ್ಲಿ ಪ್ರತಿನಿಧಿಸಲ್ಪಟ್ಟಿರುವ ಎಲ್ಲ ರಾಜಕೀಯ ಪಕ್ಷಗಳ ಮುಖ್ಯಸ್ಥರ ಸಭೆಯಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಸಲ್ಲಿಸಿದ ಟಿಪ್ಪಣಿಯ ಪೂರ್ಣ ಪಾಠ:**

ಈ ಸಭೆಗೆ ಬಂದು ನಮ್ಮ ಕಣ್ಣೋಟಗಳನ್ನು ಪ್ರಸ್ತುತಪಡಿಸಲು ಆಹ್ವಾನ ನೀಡಿರುವುದಕ್ಕಾಗಿ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಪರವಾಗಿ ನನ್ನ ಧನ್ಯವಾದಗಳನ್ನು ವ್ಯಕ್ತಪಡಿಸುತ್ತೇನೆ. ಪಟ್ಟಿ ಮಾಡಿರುವ ಕಾರ್ಯಸೂಚಿಯಲ್ಲಿ ಐದು ಪ್ರಶ್ನೆಗಳಿವೆ:

1. ಸಂಸತ್ತಿನ ಉತ್ಪಾದಕತೆಯನ್ನು ಉತ್ತಮಪಡಿಸಲು ಮಾರ್ಗೋಪಾಯಗಳು;
2. ಒಂದು ದೇಶ ಒಂದು ಚುನಾವಣೆ;
3. ಸ್ವಾತಂತ್ರ್ಯದ 75ನೇ ವರ್ಷದಲ್ಲಿ ಒಂದು ನವಭಾರತವನ್ನು ಕಟ್ಟುವುದು;
4. ಮಹಾತ್ಮ ಗಾಂಧಿಯವರ 150ನೇ ವಾರ್ಷಿಕ ಜನ್ಮದಿನಾಚರಣೆಯ ಕಾರ್ಯಕ್ರಮಗಳು ಮತ್ತು ಬದ್ಧತೆಗಳು; ಹಾಗೂ
5. ಮಹತ್ವಾಕಾಂಕ್ಷೆಯ ಜಿಲ್ಲೆಗಳ ಅಭಿವೃದ್ಧಿ.

ಸರಕಾರದ ತಕ್ಷಣದ ಗಮನ ಅಗತ್ಯವಾಗಿರುವ ಬೇರೆ ಯಾವುದೇ ಮಹತ್ವದ ಪ್ರಶ್ನೆಯನ್ನು ಮುಂದಿಡಲು ಕೂಡ ನಮಗೆ ಹೇಳಲಾಗಿದೆ.

ಕಾರ್ಯಸೂಚಿಯಲ್ಲಿ ಪಟ್ಟಿ ಮಾಡಿರುವ ಪ್ರತಿಯೊಂದು ವಿಷಯದ ಬಗ್ಗೆಯೂ ನಮ್ಮ ಅಭಿಪ್ರಾಯವನ್ನೂ ಕೂಡ ನಿರ್ದಿಷ್ಟವಾಗಿ ಇಲ್ಲಿ ವಿವರಿಸಲಾಗಿದೆ.

## 1.ಒಂದು ದೇಶ ಒಂದು ಚುನಾವಣೆ

ಸಂಸತ್ತಿಗೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವಲ್ಲಿ ಇರುವ ತಾಂತ್ರಿಕ ಪ್ರಶ್ನೆಗಳಷ್ಟೇ ಅಲ್ಲದೆ, ಇದಕ್ಕೆ ನಮ್ಮ ವಿರೋಧ, ಇದು ಮೂಲಭೂತವಾಗಿ ಒಕ್ಕೂಟ–ವಿರೋಧಿ. ಪ್ರಜಾಪ್ರಭುತ್ವ–ವಿರೋಧಿ ಮತ್ತು ಸಂವಿಧಾನದಲ್ಲಿ ಆದೇಶಿಸಿರುವ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಬುಡಕ್ಕೇ ಪ್ರಹಾರ ಮಾಡುವಂತದ್ದು ಎಂಬ ಸಂಗತಿಯನ್ನು ಆಧರಿಸಿದೆ.

ನಾವು ಸಂವಿಧಾನವನ್ನು ಅಂಗೀಕರಿಸಿದ ಮೇಲೆ ಚುನಾವಣೆಗಳು ಏಕಕಾಲದಲ್ಲೇ ನಡೆದವು ಎಂಬುದನ್ನು ಆರಂಭದಲ್ಲೇ ಗಮನಿಸಬೇಕಾದ ಅಗತ್ಯವಿದೆ. ಆದರೆ ಕೇಂದ್ರ ಸರಕಾರ 356ನೇ ಕಲಮನ್ನು ತನಗೆ ಬೇಕಾದಂತೆ ದುರುಪಯೋಗಪಡಿಸಿ ಕೊಂಡದ್ದರಿಂದಾಗಿ ರಾಜ್ಯ ವಿಧಾನಸಭೆಗಳಿಗೆ ಚುನಾವಣೆಗಳು ಸಾರ್ವತ್ರಿಕ ಚುನಾವಣೆಗಳಿಂದ ಬೇರ್ಪಟ್ಟವು. ಈ ಪ್ರಕ್ರಿಯೆ 1959ರಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಮಂತ್ರಿಮಂಡಲವನ್ನು ವಜಾ ಮಾಡುವುದರೊಂದಿಗೆ ಆರಂಭವಾಯಿತು.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಒಟ್ಟಿಗೇ ಚುನಾವಣೆಗಳನ್ನು ನಡೆಸಬೇಕಾದರೆ ಶಾಸನ ಸಭೆಗೆ ಸರಕಾರದ ಜವಾಬುದಾರಿಕೆ ಇರಬೇಕು ಎಂಬ ಸಂವಿಧಾನಿಕ ಯೋಜನೆಯಲ್ಲಿ ಅಕ್ರಮವಾಗಿ ಕೈಯಾಡಿಸಬೇಕಾಗುತ್ತದೆ. ಮಂತ್ರಿ ಮಂಡಲದ ಸಾಮೂಹಿಕ ಜವಾಬುದಾರಿಕೆ ಲೋಕಸಭೆಗೆ ಇರುತ್ತದೆ ಎಂದು ಕಲಮು 75(3) ಹೇಳುತ್ತದೆ. ಅದೇ ರೀತಿಯಲ್ಲಿ ರಾಜ್ಯಗಳ ಮಂತ್ರಿ ಮಂಡಲಗಳು ವಿಧಾನಸಭೆಗಳಿಗೆ ಸಾಮೂಹಿಕ ಜವಾಬುದಾರಿಕೆ ಹೊಂದಿವೆ ಎಂದು ಕಲಮು 164(1) ಹೇಳುತ್ತದೆ.

ಸಂವಿಧಾನದ ಅಡಿಯಲ್ಲಿ ಒಂದು ಸರಕಾರ ಅವಿಶ್ವಾಸ ಗೊತ್ತುವಳಿಯಲ್ಲಿ ಮತಗಳಿಸಲಾರದೆ, ಅಥವ ಒಂದು ಹಣ ಮಸೂದೆಯಲ್ಲಿ ಸೋತು ಶಾಸಕಾಂಗದ ವಿಶ್ವಾಸವನ್ನು ಕಳಕೊಂಡರೆ, ಅದು ರಾಜೀನಾಮೆ ಕೊಡಲೇಬೇಕು. ಯಾವುದೇ ಪರ್ಯಾಯ ಸರಕಾರದ ರಚನೆ ಸಾಧ್ಯವಿಲ್ಲವಾದರೆ ಸದನವನ್ನು ವಿಸರ್ಜಿಸಲಾಗುತ್ತದೆ ಮತ್ತು ಮಧ್ಯಂತರ ಚುನಾವಣೆಯನ್ನು ನಡೆಲಾಗುತ್ತದೆ.

ಸಂವಿಧಾನದಲ್ಲಿ ಲೋಕಸಭೆಗೆ ಅಥವ ರಾಜ್ಯ ವಿಧಾನಸಭೆಗಳಿಗೆ ನಿಗದಿತ ಕಾರ್ಯಾವಧಿ ಇಲ್ಲ. ಕಲಮು 83(2) ಮತ್ತು ಕಲಮು 172(1) ಲೋಕಸಭೆ ಮತ್ತು ವಿಧಾನಸಭೆಯ ಅವಧಿ ಅವನ್ನು “ಮೊದಲೇ ವಿಸರ್ಜಿಸದಿದ್ದರೆ” ಐದು ವರ್ಷಗಳು ಎಂದು ಸಂವಿಧಾನದಲ್ಲಿ ಪ್ರತಿಷ್ಠಾಪಿಸಿವೆ.

ಲೋಕಸಭೆ ಅಥವ ವಿಧಾನಸಭೆಯ ಅವಧಿಯನ್ನು ದೀರ್ಘಗೊಳಿಸುವ ಯಾವುದೇ ಪ್ರಯತ್ನ ಸಂವಿಧಾನಬಾಹಿರವಷ್ಟೇ ಅಲ್ಲ, ಪ್ರಜಾಪ್ರಭುತ್ವ–ವಿರೋಧಿಯೂ ಆಗಿದೆ. ಜನತೆಯ ಇಚ್ಛೆಯದ್ದೇ, ಅವರ ಚುನಾಯಿತ ಪ್ರತಿನಿಧಿಗಳ ಮೂಲಕ ಕೈಮೇಲಾಗಬೇಕಾಗಿದೆ.

ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಲಿಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ತರಲು ಹಲವಾರು ಸೂಚನೆಗಳನ್ನು ಕೊಡಲಾಗಿದೆ. ನೀತಿ ಆಯೋಗ ಒಂದು ಚರ್ಚಾ ಪ್ರಬಂಧದಲ್ಲಿ, ಲೋಕಸಭೆಯ ವಿಸರ್ಜನೆಯನ್ನು ತಪ್ಪಿಸಲು ಆಗದಿದ್ದರೆ, ಮತ್ತು ಅದರ ಉಳಿದಿರುವ ಅವಧಿ ಬಹಳ ದೀರ್ಘವೇನೂ ಆಗಿಲ್ಲದಿದ್ದರೆ, ರಾಷ್ಟ್ರಪತಿಗಳು, ಮುಂದಿನ ಸದನವನ್ನು ರಚಿಸುವ ವರೆಗೆ, ತಾವು ನೇಮಿಸುವ ಒಂದು ಮಂತ್ರಿಮಂಡಲದ ನೆರವು ಮತ್ತು ಸಲಹೆಯಂತೆ ದೇಶದ ಡಳಿತವನ್ನು ಮುಂದೊಯ್ಯಲು ಅವಕಾಶ ಕಲ್ಪಿಸಬೇಕು ಎಂಬ ಸೂಚನೆಯನ್ನು ಮುಂದಿಡಲಾಗಿದೆ. ಈ ಆಕ್ರೋಶಕಾರಿ ಪ್ರಸ್ತಾವ ರಾಷ್ಟ್ರಪತಿಗಳನ್ನು ಕಾರ್ಯಾಂಗದ ಮುಖ್ಯಸ್ಥರನ್ನಾಗಿ ಮಾಡುತ್ತದೆ. ಅಂದರೆ ಅಧ್ಯಕ್ಷೀಯ ವ್ಯವಸ್ಥೆಯನ್ನು ಹಿಂಬಾಗಿಲಿನಿಂದ ತಂದಂತಾಗುತ್ತದೆ.

ಇನ್ನೊಂದು ಸೂಚನೆಯ ಪ್ರಕಾರ, ಸದನದ ವಿಸರ್ಜನೆಯ ವೇಳೆಗೆ, ಬಾಕಿ ಉಳಿದಿರುವ ಅವಧಿ ದೀರ್ಘವಾಗಿದ್ದರೆ, ಹೊಸ ಚುನಾವಣೆಗಳನ್ನು ನಡೆಸಬೇಕು, ಮತ್ತು ಆಗ ಚುನಾಯಿಸಿದ ಸದನದ ಅವಧಿ ಆ ಬಾಕಿ ಉಳಿದಿರುವ ಅವಧಿಗೆ ಮಾತ್ರವೇ ಇರುತ್ತದೆ. ಉದಾ: ಸದನವನ್ನು ಅದರ ಅವಧಿ ಆರಂಭವಾದ ಎರಡು ವರ್ಷಗಳಲ್ಲಿ ವಿಸರ್ಜಿಸಿದರೆ, ನಂತರದ ಚುನಾವಣೆಗಳು ಉಳಿದಿರುವ ಮೂರು ವರ್ಷಗಳ ಅವಧಿಗೆ ಮಾತ್ರ ಇರುತ್ತವೆ. ಹೀಗೆ, ವಾಸ್ತವವಾಗಿ ಲೋಕಸಭೆಯ ಚುನಾವಣೆಗಳು ಬೇಗ–ಬೇಗನೇ ನಡೆಯುವಂತಾಗುತ್ತದೆ. ಇದು ಯಾವ ಉದ್ದೇಶಕ್ಕಾಗಿ ಏಕಕಾಲದ ಚುನಾವಣೆಗಳು ನಡೆಯಬೇಕೆಂದು ಪ್ರತಿಪಾದಿಸಲಾಗುತ್ತಿದೆಯೋ, ಆ ಉದ್ದೇಶವನ್ನೇ ಹುಸಿಗೊಳಿಸುತ್ತದೆ.

ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ಹೊರಿಸುವ ಪ್ರಯತ್ನಗಳಿಗೆ ಬಲಿಯಾಗುವ ಮತ್ತೊಂದು ವಿಷಯವೆಂದರೆ ಒಕ್ಕೂಟ ತತ್ವ. ಕೆಲವು ವಿಧಾನಸಭೆಗಳ ಕಾರ್ಯಕಾಲವನ್ನು ಹಂತ–ಹಂತವಾಗಿ ವಿಸ್ತರಿಸಬೇಕು, ಅಥವ ಇನ್ನು ಕೆಲವು ವಿಧಾನ ಸಭೆಗಳದ್ದನ್ನು ಮೊಟಕು ಮಾಡಬೇಕು ಎಂಬುದು ಸಂಸದೀಯ ಸ್ಥಾಯೀ ಸಮಿತಿಯ 79ನೇ ವರದಿ ಮತ್ತು ನೀತಿ ಆಯೋಗದ ಪ್ರಬಂಧ ಮುಂದಿಟ್ಟಿರುವ ಪ್ರಸ್ತಾವಗಳಲ್ಲಿ ಒಂದು. ಕಾರ್ಯಕಾಲವನ್ನು ಮೊಟಕು ಮಾಡುವುದು ಅಥವ ವಿಸ್ತರಿಸುವುದು ಇವೆರಡೂ ರಾಜ್ಯಗಳ ಹಕ್ಕುಗಳ ಮೇಲಿನ ಪ್ರಹಾರವಾಗುತ್ತವೆ, ಮತ್ತು ತಮ್ಮ ಶಾಸಕರನ್ನು ಚುನಾಯಿಸುವ ನಾಗರಿಕರ ಹಕ್ಕನ್ನು ನಿರ್ಬಂಧಿಸುತ್ತವೆ.

ರಾಜ್ಯ ವಿಧಾನಸಭೆಗಳಿಗೆ ಸಂಬಂಧಪಟ್ಟಂತೆ, ಒಂದು ವಿಧಾನಸಭೆಯ ಅವಧಿಯ ಬಹುಪಾಲು ಮುಗಿದಿರುವಾಗ ವಿಸರ್ಜನೆ ನಡೆದರೆ, ಉಳಿದ ಅವಧಿಗೆ ರಾಜ್ಯಪಾಲರು ರಾಜ್ಯದ ಆಡಳಿತ ನಡೆಸಬಹುದು ಎಂಬುದು ಮತ್ತೊಂದು ಪ್ರಸ್ತಾವ. ಇದರ ಅರ್ಥ ಕೂಡ ಕೇಂದ್ರದ ಆಳ್ವಿಕೆ ಎಂದೇ ಆಗುತ್ತದೆ.

ಶಾಸಕಾಂಗದ ಜವಾಬುದಾರಿಕೆಯನ್ನು ನಿರ್ಬಂಧಿಸಲು ಮತ್ತು ಮತ್ತು ಸದನದ ಕಾರ್ಯಕಾಲವನ್ನು ನಿಗದಿತಗೊಳಿಸಲು ಹಲವಾರು ಪ್ರಸ್ತಾವಗಳು ಬಂದಿವೆ. ಭಾರತದ ಕಾನೂನು ಆಯೋಗದ ಕರಡು ಕಾರ್ಯಪ್ರಬಂಧವೂ ಸೇರಿದಂತೆ ಮುಂದಿಟ್ಟಿರುವ ಒಂದು ಪ್ರಸ್ತಾವ–ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿದಾಗ, ಅದರೊಂದಿಗೇ, ಸದನದ ಹೊಸ ಮುಖ್ಯಸ್ಥರನ್ನು ಆರಿಸುವ ಒಂದು ಗೊತ್ತುವಳಿಯೂ ಇರಬೇಕು. ಅಂದರೆ ಒಂದು ಸರಕಾರವನ್ನು ಮತದಾನದ ಮೂಲಕ ಇಳಿಸುವ ಶಾಸಕರ ಹಕ್ಕಿಗೆ ನಿರ್ಬಂಧ ಹಾಕಬೇಕು, ಅವರು ಹೊಸ ಸರಕಾರವೊಂದನ್ನು ಚುನಾಯಿಸಬೇಕು ಎಂಬ ಶರತ್ತಿಗೆ ಒಳಪಡಬೇಕು ಎಂದಾಗುತ್ತದೆ.

ಯಾವುದೇ ಸರಕಾರವನ್ನು ಮತದಾನದ ಮೂಲಕ ಇಳಿಸುವ ಶಾಸಕರ ಮತ್ತು ಲೋಕಸಭಾ ಸದಸ್ಯರ ಹಕ್ಕನ್ನು ನಿರ್ಬಂಧಿಸಲೂ ಸಾಧ್ಯವಿಲ್ಲ, ಇನ್ನೊಂದೆಡೆಯಲ್ಲಿ ಸದನವನ್ನು ವಿಸರ್ಜಿಸಿ, ಬೇಗನೇ ಹೊಸ ಚುನಾವಣೆಗಳನ್ನು ನಡೆಸಬೇಕೆಂದು ಶಿಫಾರಸು ಮಾಡುವ ಒಂದು ಆಳುವ ಪಕ್ಷದ ಹಕ್ಕನ್ನು ಮೊಟಕುಗೊಳಿಸುವುದು ಕೂಡ ಸಾಧ್ಯವಿಲ್ಲ.

ಏಕಕಾಲದಲ್ಲಿ ಚುನಾವಣೆಗಳ ಹೆಸರಿನಲ್ಲಿ ಈ ಎಲ್ಲ ಪ್ರಸ್ತಾವಗಳು ರಾಜ್ಯಪಾಲರ ಮತ್ತು ಕೇಂದ್ರದ ಹಸ್ತಕ್ಷೇಪದ ಪಾತ್ರವನ್ನು ಹೆಚ್ಚಿಸುತ್ತವೆ.

ಭಾರತ ಹಲವಾರು ವೈವಿಧ್ಯತೆಗಳನ್ನು ಹೊಂದಿರುವ ಒಂದು ವಿಶಾಲ ದೇಶ, ಇಲ್ಲಿ ಒಂದು ಒಕ್ಕೂಟ ವ್ಯವಸ್ಥೆಯಿಂದ ಮಾತ್ರವೇ ರಾಜಕೀಯ ಪ್ರಜಾಪ್ರಭುತ್ವವನ್ನು ಕಾಯ್ದುಕೊಳ್ಳಲು ಸಾಧ್ಯ. ರಾಜ್ಯಗಳಲ್ಲಿ ವಿಭಿನ್ನ ಸಮಯಗಳಲ್ಲಿ ಚುನಾವಣೆಗಳು ನಡೆಯುವುದು ಒಕ್ಕೂಟ ವ್ಯವಸ್ಥೆಯ ಒಂದು ಆಯಾಮ.

ಆದ್ದರಿಂದ, ಏಕಕಾಲದಲ್ಲಿ ಚುನಾವಣೆಗಳು ನಡೆಯುವಂತೆ ಮಾಡುವುದು ಪ್ರಸಕ್ತ ಸಂಸದೀಯ ವ್ಯವಸ್ಥೆಯ ಸಂವಿಧಾನಿಕ ಯೋಜನೆಯನ್ನು ತುಳಿದು ಹಾಕುವ ಮೂಲಕ ಮಾತ್ರವೇ ಸಾಧ್ಯವಾದ್ದರಿಂದ, ನಾವು ಇಂತಹ ಯಾವುದೇ ಕೃತಕ ಪ್ರಯತ್ನವನ್ನು ಸಂಪೂರ್ಣವಾಗಿ ವಿರೋಧಿಸುತ್ತೇವೆ.

## ಚುನಾವಣಾ ಆಯೋಗದ ಪಾತ್ರ ಮತ್ತು ಚುನಾವಣಾ ಸುಧಾರಣೆಗಳು

ಭಾರತೀಯ ಸಂವಿಧಾನವು ಚುನಾವಣಾ ಆಯೋಗಕ್ಕೆ ಮಾತ್ರವೇ ಒಂದು ಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ನಡೆಸುವ ಹೊಣೆಯನ್ನು ವಹಿಸಿ ಕೊಟ್ಟಿದೆ. 17ನೇ ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿ ಚುನಾವಣಾ ಆಯೋಗದ ಪಾತ್ರದ ಮೇಲೆ ಒಂದು ಕರಾಳ ಛಾಯೆ ಆವರಿಸಿದೆ. ಚುನಾವಣಾ ಆಯೋಗದ ತಟಸ್ಥತೆ ಮತ್ತು ನಿಷ್ಪಕ್ಷಪಾತತೆಯನ್ನು ವ್ಯಾಪಕವಾಗಿ ಪ್ರಶ್ನಿಸುವಂತಾಗಿದೆ.

ಈ ಅನುಭವದಿಂದಾಗಿ, ಅಧಿಕಾರದಲ್ಲಿ ಇರುವ ಸರಕಾರ ಚುನಾವಣಾ ಆಯುಕ್ತರುಗಳನ್ನು ನೇಮಿಸುವ ಪ್ರಸಕ್ತ ರೂಢಿಯನ್ನು ಬದಲಿಸಿ, ಈ ನೇಮಕಗಳನ್ನು ಭಾರತದ ರಾಷ್ಟ್ರಪತಿಗಳ ಮಂಜೂರಾತಿಯ ಅಡಿಯಲ್ಲಿ ಒಂದು ಅಧಿಕಾರಿಕ ಮಂಡಲಿ ಮಾಡಬೇಕು ಎಂಬುದು

ಪುಟ 9 ಕ್ಕೆ




**ಚುನಾವಣೆಗಳಲ್ಲಿ ಹಣಬಲದ ಅಗಾಧ ಬೆಳವಣಿಗೆ ಕಂಡು ಬಂದಿದೆ. ಮತದಾರ ಒಂದು ತರ್ಕಬದ್ಧ ಅಭಿಪ್ರಾಯವನ್ನು ರೂಪಿಸಿಕೊಳ್ಳುವುದು ಒಂದು ಮಾಹಿತಿಪೂರ್ಣ ಪ್ರಜಾಪ್ರಭುತ್ವದ ಬೆನ್ನೆಲುಬು. ಹಣಬಲದ ಪ್ರಭಾವ ಇದನ್ನು ವಿರೂಪಗೊಳಿಸುತ್ತದೆ. ಇಂತಹ ಹಣಬಲದ ಉಪಯೋಗವನ್ನು ನಿಲ್ಲಿಸಲು ಕಾನೂನುಗಳನ್ನು ರೂಪಿಸಬೇಕಾಗಿದೆ. ಇದು ಚುನಾವಣಾ ಬಾಂಡ್ ಯೋಜನೆಯನ್ನು ನಿಷೇಧಿಸುವುದರೊಂದಿಗೆ ಆರಂಭವಾಗಬೇಕು....**

**ಆಳವಾದ ಚುನಾವಣಾ ಸುಧಾರಣೆಗಳನ್ನು ಸೂಚಿಸಲು ಒಂದು ಸಂಸದೀಯ ವ್ಯವಸ್ಥೆಯನ್ನು ಕೂಡಲೇ ರಚಿಸಬೇಕು..ನಮ್ಮ ಪ್ರಜಾಪ್ರಭುತ್ವದ ಶಕ್ತಿ ಮತ್ತು**

ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ನ್ಯೂಸ್‌ಸ್ಟಿಂಗ್

ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ



# ಒಂದು ದೇಶ ಒಂದು ಚುನಾವಣೆ', '....ಸಬ್ ಕಾ ವಿಶ್ವಾಸ್', 'ನವಭಾರತ','ಮಹತ್ವಾಕಾಂಕ್ಷೆಯ ಜಿಲ್ಲೆಗಳು' ಇತ್ಯಾದಿ

ಪುಟ 9 ರಿಂದ

ಸಿಪಿಐ(ಎಂ)ನ ದೃಢವಾದ ಅಭಿಪ್ರಾಯವಾಗಿದೆ. ಸಂಸತ್ತು ಲೋಕಪಾಲರ ನೇಮಕಕ್ಕೆ ಇದೇ ವಿಧಾನವನ್ನು ಅಂಗೀಕರಿಸಿದೆ.

ದೇಶದಲ್ಲಿ ಪ್ರಜಾಪ್ರಭುತ್ವವನ್ನು ಬಲಪಡಿಸಲು ಆಮೂಲಾಗ್ರ ಚುನಾವಣಾ ಸುಧಾರಣೆಗಳು ಅಗತ್ಯವಾಗಿವೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಡುತ್ತದೆ.

**ಎಲೆಕ್ಟ್ರಾನಿಕ್ ಮತದಾನ ಯಂತ್ರ(ಇವಿಎಂ)ಗಳು:** ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುತ್ತ ಇವಿಎಂಗಳ ಬಳಕೆಯೊಂದಿಗೆ ವ್ಯಾಪಕವಾದ ಅಸಂಗತತೆಗಳು ಎದ್ದು ಬಂದಿವೆ. ಇವಿಎಂಗಳು ಲೆಕ್ಕ ಹಾಕುವ ಮತಗಳಲ್ಲಿ ಕನಿಷ್ಟ 50 ಶೇಕಡಾವನ್ನು ವಿವಿಪ್ಯಾಟ್‍ನೊಂದಿಗೆ ತಾಳೆಹಾಕುವಂತೆ ಮಾಡಲು ಒಂದು ಸಂಸದೀಯ ಶಾಸನವನ್ನು ತರಬೇಕು. ಅಲ್ಲದೆ, ತಂತ್ರಜ್ಞಾನವು ಅದನ್ನು ಅಂಗೀಕರಿಸುವ ಮಾನವ ಸಾಮರ್ಥ್ಯಗಳಿಗಿಂತ ವೇಗವಾಗಿ ಬೆಳೆಯುತ್ತಿರುವುದರಿಂದ ಮೂಡಿ ಬಂದಿರುವ ಎಲ್ಲ ತಾಂತ್ರಿಕ ಆಕ್ಷೇಪಗಳನ್ನು ಬಗೆಹರಿಸಬೇಕು. ಆದ್ದರಿಂದ ಇವಿಎಂಗಳ ವಿಶ್ವಾಸಾರ್ಹತೆಯ ಮತ್ತು ವಿವಿಪ್ಯಾಟ್‍ಗಳ ಪರಿಶೀಲನಾರ್ಹತೆಯ ಮರುಪರೀಕ್ಷಣೆ ನಡೆಸುವ ಅಗತ್ಯವಿದೆ.

**ಹಣಬಲ:** ಚುನಾವಣೆಗಳಲ್ಲಿ ಹಣಬಲದ ಅಗಾಧ ಬೆಳವಣಿಗೆ ಕಂಡು ಬಂದಿದೆ. ಮತದಾರ ಒಂದು ತರ್ಕಬದ್ಧ ಅಭಿಪ್ರಾಯವನ್ನು ರೂಪಿಸಿಕೊಳ್ಳುವುದು ಒಂದು ಮಾಹಿತಿಪೂರ್ಣ ಪ್ರಜಾಪ್ರಭುತ್ವದ ಬೆನ್ನೆಲುಬು. ಹಣಬಲದ ಪ್ರಭಾವ ಇದನ್ನು ವಿರೂಪಗೊಳಿಸುತ್ತದೆ. ಇಂತಹ ಹಣಬಲದ ಉಪಯೋಗವನ್ನು ನಿಲ್ಲಿಸಲು ಕಾನೂನುಗಳನ್ನು ರೂಪಿಸಬೇಕಾಗಿದೆ. ಇದು ಚುನಾವಣಾ ಬಾಂಡ್ ಯೋಜನೆಯನ್ನು ನಿಷೇಧಿಸುವುದರೊಂದಿಗೆ ಆರಂಭವಾಗಬೇಕು. ಇದನ್ನು ಸಂಸತ್ತಿನಲ್ಲಿ ಆಗ ಇದ್ದ ವ್ಯಾಪಕ ವಿರೋಧವನ್ನು ನಿರ್ಲಕ್ಷಿಸಿ ಹಣಕಾಸು ಮಸೂದೆಯೊಳಗೆ ತೂರಿಸಿ ತರಲಾಗಿತ್ತು. ಹಣಕಾಸು ಮಸೂದೆಯು ಒಂದು 'ಹಣಮಸೂದೆ'ಯಾದ್ದರಿಂದ ಅದನ್ನು ರಾಜ್ಯಸಭೆಯ ಪರಿಶೀಲನೆಯಿಂದ ತಪ್ಪಿಸಲಾಯಿತು.

ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ನಿಧಿ ನೀಡಿಕೆಯನ್ನು ನಿಷೇಧಿಸಬೇಕು ಮತ್ತು ನಾವು ಪ್ರಭುತ್ವದಿಂದ ಹಣನೀಡಿಕೆಯ ಒಂದು ವ್ಯವಸ್ಥೆಯತ್ತ ಸಾಗಬೇಕಾಗಿದೆ.

**ಭಾಗಶಃ ಆನುಪಾತಿಕ ಪ್ರಾತಿನಿಧ್ಯ:** ನಾವು ನಮ್ಮ ಸಂವಿಧಾನವನ್ನು ಅಂಗೀಕರಿಸಿದ ಮೇಲೆ ಕೇಂದ್ರದಲ್ಲಿ ಬಂದ ಯಾವ ಸರಕಾರವೂ ಚಲಾಯಿಸಲ್ಪಟ್ಟ ಮತಗಳ 50 ಶೇಕಡಾಕ್ಕಿಂತ ಹೆಚ್ಚಿನ ಬೆಂಬಲವನ್ನು ಪಡೆದಿಲ್ಲ. ಬಹಳಷ್ಟು ದೇಶಗಳು ತಮ್ಮ ಸರಕಾರಗಳನ್ನು ಚಲಾಯಿಸಲ್ಪಟ್ಟ ಮತಗಳು ಮಾತ್ರವಲ್ಲ, ಒಟ್ಟು ಮತದಾರರಲ್ಲಿ 50 ಶೇಕಡಾಕ್ಕಿಂತ ಹೆಚ್ಚು ಮತಗಳಿಕೆಯ ಆಧಾರದಲ್ಲಿ ಆರಿಸುತ್ತವೆ. ಪ್ರಜಾಪ್ರಭುತ್ವ ಅಂದರೆ ಬಹುಮತದ ಆಳ್ವಿಕೆ ಎಂದು ಅದರ ನಿರೂಪಣೆಯಲ್ಲೇ ಇದೆ. ಇಂತಹ ಒಂದು ಪ್ರಜಾಪ್ರಭುತ್ವವನ್ನು ಸರಿಯಾಗಿ ಸ್ಥಾಪಿಸುವಂತೆ ಖಾತ್ರಿಪಡಿಸಲು ದೇಶ ಒಂದು ಭಾಗಶಃ ಆನುಪಾತಿಕ ಪ್ರಾತಿನಿಧ್ಯ ವ್ಯವಸ್ಥೆಯ ಬಗ್ಗೆ ಗಂಭೀರ ಪರಿಶೀಲನೆ ನಡೆಸಬೇಕಾಗಿದೆ.

ಇನ್ನೂ ಹಲವಾರು ಪ್ರಶ್ನೆಗಳನ್ನು ನಿಭಾಯಿಸಬೇಕಾಗಿದೆ. ಆಳವಾದ ಚುನಾವಣಾ ಸುಧಾರಣೆಗಳನ್ನು ಸೂಚಿಸಲು ಒಂದು ಸಂಸದೀಯ ವ್ಯವಸ್ಥೆಯನ್ನು ಕೂಡಲೇ ರಚಿಸಬೇಕು ಎಂದು ಸಿಪಿಐ(ಎಂ) ಸರಕಾರವನ್ನು ಆಗ್ರಹಿಸುತ್ತದೆ.

ನಮ್ಮ ಪ್ರಜಾಪ್ರಭುತ್ವದ ಶಕ್ತಿ ಮತ್ತು ಸಮಗ್ರತೆಯನ್ನು ಮರುಸ್ಥಾಪಿಸಲು ಇಂತಹ ಸುಧಾರಣೆಗಳು ಅಗತ್ಯ ಎಂಬುದು ಸಿಪಿಐ(ಎಂ) ಪರಿಶೀಲನೆ ಮಾಡಿರುವ ಅಭಿಪ್ರಾಯವಾಗಿದೆ.

## 2. ತುರ್ತಾಗಿ ಬಗೆಹರಿಸಬೇಕಾಗಿರುವ ಆರ್ಥಿಕ ಪ್ರಶ್ನೆಗಳು

### 1. ಗಾಬರಿ ಹುಟ್ಟಿಸುವ ಬರ ಪರಿಸ್ಥಿತಿ

ಬರದ ಮುನ್ಸೂಚನೆಯನ್ನು ಸತತವಾಗಿ ಪರಿಶೀಲಿಸುವ ವೇದಿಕೆಯಾದ ಡಿ ಇ ಡಬ್ಲ್ಯು ಎಸ್ (ಬರ ಮುಂಚಿತ ಎಚ್ಚರಿಕೆ ವ್ಯವಸ್ಥೆ) ಪ್ರಕಾರ ಮೇ 30,2019ರ ವೇಳೆಗೆ ದೇಶದ 43.3ಶೇಕಡಾಕ್ಕಿಂತಲೂ ಹೆಚ್ಚು ಭಾಗ ಬರದಿಂದ ನರಳುತ್ತಿದೆ. ಮಳೆ ಮಾರುತ(ಮಾನ್ಸೂನ್) ವಿಫಲವಾಗಿರುವುದು ಇದಕ್ಕೆ ಮುಖ್ಯ ಕಾರಣ. ಈಶಾನ್ಯ ಮಾರುತದಲ್ಲಿ 2018 ರಲ್ಲಿ 44% ಕೊರತೆ ಇತ್ತು. ಇದರ ಮೇಲೆ ಈ ವರ್ಷ ಮಾರುತ–ಪೂರ್ವ (ಮಾರ್ಚ್ 1 ರಿಂದ ಮೇ 31ರ ವರೆಗೆ) ಮಳೆ ಕಳೆದ 65 ವರ್ಷಗಳಲ್ಲೇ ಅತಿ ಕಡಿಮೆ ಎನ್ನಲಾಗಿದೆ.

ಕೇಂದ್ರೀಯ ಜಲ ಆಯೋಗದ ಪ್ರಕಾರ ಭಾರತದ 91 ಪ್ರಧಾನ ಜಲಾಶಯಗಳಲ್ಲಿ ನೀರಿನ ಮಟ್ಟ ಮೇ 30, 2019ರ ವೇಳೆಗೆ ಅವುಗಳ ಸಂಗ್ರಹ ಸಾಮರ್ಥ್ಯದ 20 ಶೇಕಡಕ್ಕೆ ಕುಸಿದಿದೆ. ಇದು ಕಳೆದ ದಶಕದ ಸರಾಸರಿಗಿಂತ ಕಡಿಮೆಯಾಗಿದೆ. ಇನ್ನೂ ಕೆಟ್ಟ ಸಂಗತಿಯೆಂದರೆ ನಮ್ಮ ಮಳೆಯ 80ಶೇಕಡಾವನ್ನು ಒದಗಿಸುವ ನೈರುತ್ಯ ಮಾರುತ ವಿಳಂಬಗೊಂಡಿದೆ ಮತ್ತು ಈ ವರ್ಷ ಎಂದಿಗಿಂತ ಕಡಿಮೆಯಿರಲಿದೆ.

ಕೇಂದ್ರ ಸರಕಾರ, ರಾಜ್ಯ ಸರಕಾರಗಳೊಂದಿಗೆ ಸಮಾಲೋಚನೆ ನಡೆಸಿ, ನಿರ್ದಿಷ್ಟವಾಗಿ ಈ ಬರ ಪರಿಸ್ಥಿತಿಯನ್ನು, ಮತ್ತು ಒಟ್ಟಾರೆಯಾಗಿ ಆಳಗೊಳ್ಳುತ್ತಿರುವ ಕೃಷಿ ಸಂಕಟವನ್ನು ನಿಭಾಯಿಸಲು ಯುದ್ಧೋಪಾದಿಯಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

### 2. ಹೆಚ್ಚುತ್ತಿರುವ ನಿರುದ್ಯೋಗ

ಚುನಾವಣಾ ಪ್ರಚಾರದ ವೇಳೆಯಲ್ಲಿ ಅಡಗಿಸಿಟ್ಟಿದ್ದ ಅಧಿಕೃತ ಉದ್ಯೋಗ ಮಾಹಿತಿಯನ್ನು ಈಗ ಬಿಡುಗಡೆ ಮಾಡಲಾಗಿದ್ದು, ಅದು ಕಳೆದ ಐದು ದಶಕಗಳಲ್ಲೇ ಅತಿ ಹೆಚ್ಚು ನಿರುದ್ಯೋಗ ಮಟ್ಟವನ್ನು ತೋರಿಸಿದೆ.

ಉದ್ಯೋಗಾವಕಾಶಗಳ ನಿರ್ಮಾಣಕ್ಕೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಆ ಸಮಯದಲ್ಲಿ ಎಲ್ಲ ದಾಖಲಾತಿ ಪಡೆದಿರುವ ನಿರುದ್ಯೋಗಿಗಳಿಗೆ ಒಂದು ನಿರುದ್ಯೋಗ ಭತ್ತೆಯನ್ನು ಕೊಡಬೇಕು. ಇದು ಬದುಕುಳಿಯುವ ಅಗತ್ಯಗಳ ಮಟ್ಟಕ್ಕಿಂತ ಹೆಚ್ಚಿರಬೇಕು.

### 3. ಖಾಸಗೀಕರಣ

ಸರಕಾರ ಒಂದು ವ್ಯಾಪಕ ಪ್ರಮಾಣದ ಖಾಸಗೀಕರಣ ಯೋಜನೆಯೊಂದಿಗೆ ಸಾಗಲಿದೆ ಎಂದು ವರದಿಗಳು ಸೂಚಿಸುತ್ತಿವೆ. ಇದು ನಿರುದ್ಯೋಗ ಪರಿಸ್ಥಿತಿಯನ್ನು ಇನ್ನಷ್ಟು ಕ್ಲಿಷ್ಟಗೊಳಿಸಲಿದೆ. ಇದಕ್ಕಿಂತ ಮುಖ್ಯವಾಗಿ, ಇದು ದೈನಂದಿನ ಖರ್ಚುಗಳನ್ನು ನಿಭಾಯಿಸಲು ಕುಟುಂಬದ ಬೆಲೆಬಾಳುವ ವಸ್ತುಗಳನ್ನು ಮಾರಿ ತಿನ್ನುವ ಮಾದರಿಯದ್ದು. ಯಾವುದೇ ಮಹತ್ವದ ಮತ್ತು ಇಂದು ಲಾಭದಲ್ಲಿರುವ ಸಾರ್ವಜನಿಕ ವಲಯದ ಕಂಪನಿಗಳನ್ನು ಖಾಸಗೀಕರಿಸಬಾರದು. ನಷ್ಟದಲ್ಲಿರುವ ಸಾರ್ವಜನಿಕ ವಲಯದ ಘಟಕಗಳನ್ನು ಲಾಭದಾಯಕಗೊಳಿಸಲು ಪ್ರಯತ್ನಗಳನ್ನು ಮಾಡಬೇಕು.

ನಮ್ಮ ದೇಶವನ್ನು ಮತ್ತು ಜನತೆಯನ್ನು ಒಂದುಗೂಡಿಸಿರುವ ಎಳೆಯಾದ ರೈಲ್ವೆಯ ದೊಡ್ಡ ಪ್ರಮಾಣದ ಖಾಸಗೀಕರಣದ ರಭಸಕ್ಕೆ ಈಗ ಇಳಿಯುತ್ತಿರುವುದನ್ನು ನಾವು ವಿರೋಧಿಸುತ್ತೇವೆ.

### 4. ಕಾರ್ಮಿಕ ಕಾನೂನುಗಳು

ಕಾರ್ಮಿಕ ಕಾನೂನುಗಳಲ್ಲಿ ತೀವ್ರ ಬದಲಾವಣೆಗಳನ್ನು ಮಾಡಲಾಗುತ್ತದೆ ಎಂದು ವರದಿಗಳು ಸೂಚಿಸುತ್ತಿವೆ. ಇದು ಕಾರ್ಮಿಕ ವರ್ಗದ ಅಭದ್ರತೆಯ ಮಟ್ಟಗಳನ್ನು ಹೆಚ್ಚಿಸುತ್ತದೆಯಷ್ಟೇ. ಭಾರತೀಯ ಕಾರ್ಮಿಕ ವರ್ಗ ತನ್ನ ಹಕ್ಕುಗಳನ್ನು ಹೋರಾಟಗಳ ಮೂಲಕ ಗಳಿಸಿತ್ತು, ಇವನ್ನು ಭಾರತ ಸ್ವತಂತ್ರಗೊಳ್ಳುವ ಮೊದಲೇ ಕಾನೂನುಬದ್ಧಗೊಳಿಸಿಕೊಂಡಿತ್ತು. ನಂತರ ಈ ಹಕ್ಕುಗಳನ್ನು ನಮ್ಮ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲಾಯಿತು. ಇವನ್ನು ದುರ್ಬಲಗೊಳಿಸುವ ಯಾವುದೇ ದಾಳಿಯನ್ನು ಒಪ್ಪಲು ಸಾಧ್ಯವಿಲ್ಲ.

### 5. ಆರ್ಥಿಕ ಸ್ಥಗಿತತೆ/ಅವನತಿ

ಆರ್ಥಿಕ ಸ್ಥಗಿತತೆ, ಹಲವು ಕ್ಷೇತ್ರಗಳಲ್ಲಿ ಅವನತಿ ಈಗಾಗಲೇ ಜನಗಳ ಮೇಲೆ ಹೇರಿರುವ ಭಾರೀ ಹೊರೆಗಳನ್ನು ಇನ್ನಷ್ಟು ಹೆಚ್ಚಿಸುತ್ತಿದೆ. ಆರ್ಥಿಕ ಪುನಶ್ಚೇತನಗೊಳ್ಳಬೇಕಾದರೆ ಆಂತರಿಕ ಬೇಡಿಕೆ ಬೆಳೆಯಬೇಕು. ಇದು ನಮ್ಮ ಬಹುವಾಗಿ ಅಗತ್ಯವಿರುವ ಆರ್ಥಿಕ ಮತ್ತು ಸಾಮಾಜಿಕ ಮೂಲರಚನೆಗಳನ್ನು ಕಟ್ಟಲು ಹೆಚ್ಚಿನ ಸಾರ್ವಜನಿಕ ಹೂಡಿಕೆಗಳ ಮೂಲಕ ಮಾತ್ರವೇ ಸಾಧ್ಯ. ಸರಕಾರ ದಿಕ್ಕಿನಲ್ಲಿ ತುರ್ತಾಗಿ ಯೋಜನೆಗಳನ್ನು ರೂಪಿಸಬೇಕು.

### 6. ದತ್ತಾಂಶಗಳ ವಿಶ್ವಾಸಾರ್ಹತೆ

ಅಧಿಕೃತ ದತ್ತಾಂಶಗಳ ವಿಶ್ವಾಸಾರ್ಹತೆಯ ಮುಂದೆ ದೊಡ್ಡ ಪ್ರಶ್ನೆಚಿಹ್ನೆ ಬಿದ್ದಿದೆ. ಇದನ್ನು ಭಾರತದ ಅಂತರ್‍ರಾಷ್ಟ್ರೀಯ ಪ್ರತಿಷ್ಠೆಗಾಗಿಯೂ ಮತ್ತು ಅಗತ್ಯ ಧೋರಣಾ ಕ್ರಮಗಳನ್ನು ಕೈಗೊಳ್ಳಲು ನೆಲಮಟ್ಟದ ವಾಸ್ತವತೆಗಳನ್ನು ವಿಶ್ಲೇಷಿಸಲೂ ಕೂಡ ತುರ್ತಾಗಿ ಸರಿಪಡಿಸಬೇಕಾಗಿದೆ.

ಸರಕಾರ ಕೂಡಲೇ ದತ್ತಾಂಶಗಳ ಪ್ರಮಿತಿಗಳು, ಪರಿಮಾಣಗಳನ್ನು ಪುನರ್‍ರೂಪಿಸಲು ಒಂದು ಸಮಿತಿ/ಆಯೋಗವನ್ನು ನೇಮಿಸಬೇಕಾಗಿದೆ ಮತ್ತು ಅಧಿಕೃತವಾಗಿ ಸಿಗುವ ಅಂಕಿ–ಅಂಶಗಳಲ್ಲಿ ವಿಶ್ವಾಸಾರ್ಹತೆಯನ್ನು, ನಂಬಿಕೆಯನ್ನು ಮತ್ತೆ ನೆಲೆಗೊಳಿಸಬೇಕಾಗಿದೆ.

## 3. 'ಸಬ್ ಕಾ ವಿಶ್ವಾಸ್'

ಪ್ರಧಾನ ಮಂತ್ರಿಗಳ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್' ಎಂಬ ಚುನಾವಣೋತ್ತರ ಪ್ರತಿಪಾದನೆಯನ್ನು ಸರಕಾರ ಗಂಭೀರವಾಗಿ ಅನುಸರಿಸುತ್ತದೆ ಎಂದು ಸಿಪಿಐ(ಎಂ) ಆಶಿಸುತ್ತದೆ.

ಆದರೆ ಕಳೆದ ಐದು ವರ್ಷಗಳ ಅನುಭವ ಇದನ್ನು ಅನುಸರಿಸಲಾಗುವುದು ಎಂಬ ವಿಶ್ವಾಸವನ್ನು ಜನರಿಗೆ ಕೊಡುತ್ತಿಲ್ಲ. 'ಗೋರಕ್ಷಣೆ', 'ನೈತಿಕ ಪೋಲೀಸ್‍ಗಿರಿ' ಮುಂತಾದ ಹೆಸರುಗಳಲ್ಲಿ ಖಾಸಗಿ ಸೇನೆಗಳ ಬೆಳವಣಿಗೆಯ ಫಲಿತಾಂಶವಾಗಿ ನಮ್ಮ ಸಮಾಜದ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳಲ್ಲಿ ಅತ್ಯಂತ ದುರಂತಮಯ ಸಾವುಗಳು ಸಂಭವಿಸಿವೆ.

ಜನಜಂಗುಳಿ ಬಡಿದು ಸಾಯಿಸುವ ಘಟನೆಗಳ ವರದಿಗಳಿಂದ ಹೌಹಾರಿದ ಸುಪ್ರಿಂ ಕೋರ್ಟ್

ಪುಟ 11 ಕ್ಕೆ



'ಒಂದು ದೇಶ ಒಂದು ಚುನಾವಣೆ'
ಇನ್ನೊಂದು ನೋಟ್ ಬಂದಿಯೊಂದಿಗೆ ಆರಂಭಿಸಬೇಕಿತ್ತೇ?
ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

**ಉದ್ಯೋಗಾವಕಾಶಗಳ ನಿರ್ಮಾಣಕ್ಕೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಆ ಸಮಯದಲ್ಲಿ ಎಲ್ಲ ದಾಖಲಾತಿ ಪಡೆದಿರುವ ನಿರುದ್ಯೋಗಿಗಳಿಗೆ ಒಂದು ನಿರುದ್ಯೋಗ ಭತ್ತೆಯನ್ನು ಕೊಡಬೇಕು. ಇದು ಬದುಕುಳಿಯುವ ಅಗತ್ಯಗಳ ಮಟ್ಟಕ್ಕಿಂತ ಹೆಚ್ಚಿರಬೇಕು.**

*

**ಕಾರ್ಮಿಕ ಕಾನೂನುಗಳಲ್ಲಿ ತೀವ್ರ ಬದಲಾವಣೆಗಳನ್ನು ಮಾಡಲಾಗುತ್ತದೆ ಎಂದು ವರದಿಗಳು ಸೂಚಿಸುತ್ತಿವೆ. ಇದು ಕಾರ್ಮಿಕ ವರ್ಗದ ಅಭದ್ರತೆಯ ಮಟ್ಟಗಳನ್ನು ಹೆಚ್ಚಿಸುತ್ತದೆಯಷ್ಟೇ. ಭಾರತೀಯ ಕಾರ್ಮಿಕ ವರ್ಗ ತನ್ನ ಹಕ್ಕುಗಳನ್ನು ಹೋರಾಟಗಳ ಮೂಲಕ ಗಳಿಸಿತ್ತು, ಇವನ್ನು ಭಾರತ ಸ್ವತಂತ್ರಗೊಳ್ಳುವ ಮೊದಲೇ ಕಾನೂನುಬದ್ಧಗೊಳಿಸಿಕೊಂಡಿತ್ತು. ನಂತರ ಈ ಹಕ್ಕುಗಳನ್ನು ನಮ್ಮ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲಾಯಿತು. ಇವನ್ನು ದುರ್ಬಲಗೊಳಿಸುವ ಯಾವುದೇ ದಾಳಿಯನ್ನು ಒಪ್ಪಲು ಸಾಧ್ಯವಿಲ್ಲ.**



ತಪ್ಪು! ಯಾವುದು? ಝಾರ್ಖಂಡ್‍ನ 'ಅವಮಾನ'!
ಕೃಪೆ: ದಿ ಹಿಂದು

# ಒಂದು ದೇಶ ಒಂದು ಚುನಾವಣೆ', '....ಸಬ್ ಕಾ ವಿಶ್ವಾಸ್', 'ನವಭಾರತ','ಮಹತ್ವಾಕಾಂಕ್ಷೆಯ ಜಿಲ್ಲೆಗಳು' ಇತ್ಯಾದಿ

ಪುಟ 10 ರಿಂದ

ಇದರ ವಿರುದ್ಧ ಒಂದು ವಿಶೇಷ ಕಾನೂನನ್ನು ಅಂಗೀಕರಿಸುವಂತೆ ಸರಕಾರಕ್ಕೆ ಸಲಹೆ ನೀಡಿತು. ಆದರೆ ಇದು ಆಗಿಲ್ಲ. ಇಂತಹ ಒಂದು ಕಾನೂನು ಸಾಧ್ಯವಾದಷ್ಟು ಬೇಗನೇ ಜಾರಿಗೆ ಬರುವಂತೆ ಈ ಸರಕಾರ ಖಾತ್ರಿಪಡಿಸಬೇಕಾಗಿದೆ. ದ್ವೇಷ, ಅಸಹಿಷ್ಣುತೆ, ಭಯೋತ್ಪಾದನೆ ಮತ್ತು ಭೀತಿಯನ್ನು ಪರಿಣಾಮಕಾರಿಯಾಗಿ ತಡೆಯಬೇಕಾಗಿದೆ.

ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು, ನಮ್ಮ ಅಪರಿಮಿತ ಶ್ರೀಮಂತ ವೈವಿಧ್ಯತೆಯಲ್ಲಿ ಹಾಸುಹೊಕ್ಕಾಗಿರುವ ಸಾಮಾನ್ಯತೆಯ ಬಂಧಗಳನ್ನು ಬಲಪಡಿಸುವ ಮೂಲಕವಷ್ಟೇ ಬಲಪಡಿಸಲು ಸಾಧ್ಯ, ವೈವಿಧ್ಯತೆಯ ಮೇಲೆ ಧಾರ್ಮಿಕ, ಭಾಷಿಕ ಮುಂತಾದ ಏಕರೂಪತೆಯನ್ನು ಹೇರುವ ಪ್ರಯತ್ನದಿಂದಲ್ಲ ಎಂದು ನಾವು ಒತ್ತಿ ಹೇಳಬಯಸುತ್ತೇವೆ. ಸರಕಾರ ಈ ತಿಳುವಳಿಕೆಗೆ ಬದ್ಧವಾಗಿರುತ್ತದೆ ಎಂದು ಸಿಪಿಐ(ಎಂ) ಆಶಿಸುತ್ತದೆ.

ಇದು ಈ ಸಭೆಯ ಕಾರ್ಯಸೂಚಿಯಲ್ಲಿ ಪಟ್ಟಿ ಮಾಡಿರುವ ನಮ್ಮ ಸ್ವಾತಂತ್ರ್ಯದ 75ನೇ ವರ್ಷದಲ್ಲಿ ಒಂದು ನವಭಾರತವನ್ನು ಕಟ್ಟಲು ಅತ್ಯಗತ್ಯವಾಗಿದೆ.

### ಸಾಮಾಜಿಕ ಉದ್ಧಾರ

ಈ ಸರಕಾರ ದೇಶದ ಮುಂದೆ ದೀರ್ಘ ಕಾಲದಿಂದ ನೆನೆಗುದಿಯಲ್ಲಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಶಾಸನವಾಗಿ ಮಾಡಬೇಕು.

ಸರಕಾರ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು, ಇತರ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತಹ ಕಾನೂನುಗಳನ್ನು ಮತ್ತು ಅಂಶಗಳನ್ನು ಬಲಪಡಿಸಲು ಪ್ರಯತ್ನಿಸಬೇಕು, ಅವನ್ನು ಮತ್ತಷ್ಟು ದುರ್ಬಲಗೊಳಿಸಲು ಹೋಗಬಾರದು.

ಉದ್ದಿಮೆಗಳು, ಶಿಕ್ಷಣ ಮತ್ತು ಆರೋಗ್ಯದ ದೊಡ್ಡ ಪ್ರಮಾಣದ ಖಾಸಗೀಕರಣದೊಂದಿಗೆ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು, ಇತರ ಹಿಂದುಳಿದ ವರ್ಗಗಳು ಮತ್ತು ಅಂಗವಿಕಲತೆಯಿರುವವರಿಗೆ ಮೀಸಲಾತಿಯನ್ನು ಖಾಸಗೀ ವಲಯಕ್ಕೆ ವಿಸ್ತರಿಸುವುದು ಅನಿವಾರ್ಯವಾಗಿದೆ.

## 4. ಸಂಸತ್ತಿನ ಉತ್ಪಾದಕತೆಯನ್ನು ಉತ್ತಮಪಡಿಸಲು ಮಾರ್ಗೋಪಾಯಗಳು

ಜನತೆಯ ಸಾರ್ವಭೌಮತೆ ಕೇಂದ್ರ ವಿಷಯ ಎಂದು ಭಾರತೀಯ ಸಂವಿಧಾನ ನಿರೂಪಿಸಿದೆ. "ನಾವು, ಭಾರತದ ಜನತೆ" ಮತ್ತು "ಈ ಸಂವಿಧಾನವನ್ನು ಈ ಮೂಲಕ ಅಂಗೀಕರಿಸುತ್ತೇವೆ, ಶಾಸನವಾಗಿಸುತ್ತೇವೆ ಮತ್ತು ನಮಗೆ ನೀಡಿಕೊಳ್ಳುತ್ತೇವೆ" ಎಂಬ ಪದಗಳಿಂದ ಸಂವಿಧಾನದ ಪೀಠಿಕೆ ಇದನ್ನು ಅತ್ಯಂತ ಅರ್ಥಪೂರ್ಣವಾಗಿ ನಿರೂಪಿಸಿದೆ. ಜನತೆ ತಮ್ಮ ಚುನಾಯಿತ ಪ್ರತಿನಿಧಿಗಳ ಮೂಲಕ ತಮ್ಮ ಸಾರ್ವಭೌಮತೆಯನ್ನು ಚಲಾಯಿಸುತ್ತಾರೆ, ಈ ಪ್ರತಿನಿಧಿಗಳು ಜನತೆಗೆ ಉತ್ತರದಾಯಿಯಾಗಿರುತ್ತಾರೆ, ಮತ್ತು ಈ ಶಾಸಕಾಂಗಕ್ಕೆ, ಚುನಾವಣೆಗಳ ಪರಿಣಾಮವಾಗಿ ಅಧಿಕಾರ ವಹಿಸಿಕೊಳ್ಳುವ ಕಾರ್ಯಾಂಗ ಅಥವ ಸರಕಾರ ಉತ್ತರದಾಯಿಯಾಗಿರುತ್ತದೆ.

ಆದ್ದರಿಂದ ಸಂಸತ್ತು ಸಂವಿಧಾನಿಕ ಕಾರ್ಯಯೋಜನೆಯಲ್ಲಿ ಪ್ರಮುಖ ಕೊಂಡಿಯಾಗಿದೆ. ಸಂಸತ್ತಿನ ಉತ್ಪಾದಕತೆಯನ್ನು ಉತ್ತಮಪಡಿಸುವಲ್ಲಿ ಆಧಾರಭೂತ ಅಂಶವೆಂದರೆ ಅದು ಹೆಚ್ಚು ಬಾರಿ ಸಭೆ ಸೇರಬೇಕು. ಭಾರತೀಯ ಸಂವಿಧಾನ ಒಂದು ಕ್ಯಾಲೆಂಡರ್ ವರ್ಷದಲ್ಲಿ ಕನಿಷ್ಟ ನೂರು ದಿನವಾದರೂ ಸೇರಬೇಕು ಎಂಬ ತನ್ನ ದೀರ್ಘಕಾಲದ ಪ್ರಸ್ತಾವಕ್ಕೆ ಸಿಪಿಐ(ಎಂ) ಈಗಲೂ ಬದ್ಧವಾಗಿದೆ.

ಹೊಸ ವರ್ಷದ ಆರಂಭದ ಮೊದಲು ಸಂಸತ್ತಿನ ಅಧಿವೇಶನಗಳ ಸಮಯ ಪಟ್ಟಿಯನ್ನು ಪ್ರಕಟಿಸಬೇಕು. ಇದು ಸದಸ್ಯರು ಸಂಸದೀಯ ಕಲಾಪಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾಜರಿರುವುದನ್ನು ಮತ್ತು ಭಾಗವಹಿಸುವುದನ್ನು ಖಾತ್ರಿಗೊಳಿಸುತ್ತದೆ. ಇದು ಪ್ರಧಾನ ಮಂತ್ರಿಗಳು ಮತ್ತು ಇತರ ಮಂತ್ರಿಗಳ ವಿದೇಶ ಪ್ರವಾಸಗಳು, ಜತೆಗೆ, ವಿದೇಶಿ ಗಣ್ಯರ ಭೇಟಿಗಳು ಸಂಸದೀಯ ಕಲಾಪಗಳನ್ನು ಕದಡದಂತೆ ಖಾತ್ರಿಗೊಳಿಸುತ್ತದೆ. ಏಕೆಂದರೆ, ಇವನ್ನು ಪ್ರಕಟಿತ ಸಂಸದೀಯ ಸಮಯಪಟ್ಟಿಯ ಪ್ರಕಾರ ನಿರ್ಧರಿಸಬಹುದು.

ಸಂಸತ್ತು ಕಟ್ಟುನಿಟ್ಟಾಗಿ ಅದರ ನಿಯಮಗಳ ಪ್ರಕಾರ ಕಾರ್ಯನಿರ್ವಹಿಸುವಂತೆ ಮತ್ತು ಸದನಗಳ ಅಧ್ಯಕ್ಷತೆ ವಹಿಸುವವರು ನಿಯಮ ಪುಸ್ತಕವನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಮತ್ತು ವೈಯಕ್ತಿಕ ಪರಿಗಣನೆಗಳ ಕೈಮೇಲಾಗದಂತೆ ಸರಕಾರ ನೋಡಿಕೊಳ್ಳಬೇಕು.

ಈಗಿರುವ ರೂಢಿಯ ಪ್ರಕಾರ ಯಾವ ಮಸೂದೆ ಒಂದು "ಹಣ ಮಸೂದೆ" ಯಾಗುತ್ತದೆ ಎಂದು ತೋಚಿದಂತೆ ನಿರೂಪಿಸುವ ಅವಕಾಶ ಸಂವಿಧಾನದ ಕಲಮು 110(3)ರ ಪ್ರಕಾರ ಲೋಕಸಭಾಧ್ಯಕ್ಷರಿಗಿದೆ. ಕಲಮು 110(1) ಮತ್ತು 110(2) ಒಂದು "ಹಣ ಮಸೂದೆ" ಯೆಂದು ಯಾವ ವಿಷಯಗಳನ್ನು ಪರಿಗಣಿಸಬಹುದು ಅಥವ ಪರಿಗಣಿಸಬಾರದು ಎಂಬುದನ್ನು ವಿವರವಾಗಿ ನಿರೂಪಿಸುತ್ತವೆ. 110(1) ಮತ್ತು 11(2) ನ್ನು ಉಪೇಕ್ಷಿಸಿ 110(3) ನ್ನು ಮಾತ್ರ ತೋಚಿದಂತೆ ಉದ್ಧರಿಸುವುದನ್ನು, ಅಗತ್ಯವಾದರೆ, ಒಂದು ಸಂವಿಧಾನ ತಿದ್ದುಪಡಿಯ ಮೂಲಕ ನಿಲ್ಲಿಸಬೇಕು. ಸಂಸತ್ತಿನ ಎರಡೂ ಸದನಗಳು ಸಾರ್ವಜನಿಕ ಮಹತ್ವದ ವಿಷಯಗಳು ಮತ್ತು ಶಾಸನಗಳನ್ನು ನಿರ್ಧರಿಸುವಲ್ಲಿ ತಮ್ಮ ಸಮಾನ ಪಾತ್ರವನ್ನು ಮತ್ತು ಜವಾಬ್ದಾರಿಯನ್ನು ಹೊಂದಿವೆ.

**ಸಂಸದೀಯ ಸಮಿತಿಗಳ ಕಾರ್ಯನಿರ್ವಹಣೆ:** ಸಂಸತ್ತಿನ ಅಧಿವೇಶನಗಳಲ್ಲಿ ಭಾಗವಹಿಸುವುದಕ್ಕಿಂತ ಹೆಚ್ಚಾಗಿ ಸಂಸದೀಯ ಸಮಿತಿಗಳಲ್ಲಿ ಗಮನಾರ್ಹ ಕೆಲಸ ನಡೆಯುತ್ತದೆ. ಇವುಗಳಲ್ಲಿ ಸದಸ್ಯರು ಪ್ರಸ್ತಾವಿತ ಶಾಸನಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ನೋಡುತ್ತಾರೆ. ಸೂಚನೆಗಳನ್ನು/ ಶಿಫಾರಸುಗಳನ್ನು ಅಂತಿಮಗೊಳಿಸುವ ಮೊದಲು ಆ ವಿಷಯವು ತಟ್ಟುವ ಎಲ್ಲರ ನೋಟಗಳನ್ನು, ಅಭಿಪ್ರಾಯಗಳನ್ನು ಆಲಿಸಬೇಕು. ಇತ್ತೀಚಿನ ದಿನಗಳಲ್ಲಿ, ಇಂತಹ ಸಮಿತಿಗಳ ಕಾರ್ಯನಿರ್ವಹಣೆ ದುರ್ಬಲಗೊಂಡಿದೆ. ಇದನ್ನು ಅದಷ್ಟು ಬೇಗನೇ ಸರಿಪಡಿಸಬೇಕು.

## 5. ಭಯೋತ್ಪಾದನೆಯೊಂದಿಗೆ ಸೆಣಸುವುದು

ಪುಲ್ವಾಮ/ ಬಾಲಕೋಟ್ ನಂತರ ಭಯೋತ್ಪಾದನಾ ದಾಳಿಗಳು ಮುಂದುವರೆದಿರುವುದು ಅತ್ಯಂತ ಆತಂಕದ ವಿಷಯ. ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲೇ ಕನಿಷ್ಟ ನಾಲ್ಕು ಘಟನೆಗಳು ವರದಿಯಾಗಿವೆ, ಇವುಗಳಲ್ಲಿ 10ಕ್ಕೂ ಹೆಚ್ಚು ಸಾವುಗಳು ಸಂಭವಿಸಿವೆ ಮತ್ತು ಸುಮಾರು ನೂರು ಮಂದಿ ಗಾಯಗೊಂಡಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಜನತೆಯ ಪರಕೀಯ ಭಾವವನ್ನು ಗಂಭೀರವಾಗಿ ಎದುರಿಸಬೇಕಾಗಿದೆ. ಜಮ್ಮು ಮತ್ತು ಕಾಶ್ಮೀರ ವಿಧಾನ ಸಭೆಗೆ ಆದಷ್ಟು ಬೇಗನೇ ಚುನಾವಣೆಗಳು ನಡೆಯಬೇಕು. ಇದು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಜನತೆಯ ವಿಶ್ವಾಸವನ್ನು ಮತ್ತೆ ನೆಲೆಗೊಳಿಸಲು ಒಂದು ಮಹತ್ವದ ದಾರಿಯಾಗುತ್ತದೆ. ಸಂಸದೀಯ ಚುನಾವಣೆಗಳನ್ನು ನಡೆಸಲು ಪರಿಸ್ಥಿತಿ ಸೂಕ್ತವಾಗಿದ್ದಿದ್ದರೆ ವಿಧಾನಸಭಾ ಚುನಾವಣೆಗಳನ್ನು ನಡೆಸದಿರಲು ಕಾರಣಗಳು ನಮಗೇನೂ ಕಾಣಿಸುವುದಿಲ್ಲ.

## 6. ಮಹಾತ್ಮ ಗಾಂಧಿಯವರ 150ನೇ ಜನ್ಮವಾರ್ಷಿಕಾಚರಣೆ

ಹಿಂದಿನ ಸರಕಾರ ಈ ಆಚರಣೆಗೆ ಕಾರ್ಯಕ್ರಮಗಳನ್ನು ರೂಪಿಸಲು ಒಂದು ಸಮಿತಿಯನ್ನು ರಚಿಸಿತ್ತು. ಇದೊಂದು ಪ್ರಮುಖ ಸಮಾರಂಭ, ಇದನ್ನು ಸರಿಯಾಗಿ ಆಚರಿಸಬೇಕು ಎಂದು ನಾವು ಪರಿಗಣಿಸುತ್ತೇವೆ. ನಾನು ಹಿಂದಿನ ಸಮಿತಿಯ ಒಬ್ಬ ಸದಸ್ಯನಾಗಿದ್ದೆ. ಈ ವಿಷಯದಲ್ಲಿ ನಮ್ಮ ಸೂಚನೆಗಳನ್ನು /ಅಭಿಪ್ರಾಯಗಳನ್ನು ಕೊಡುವ ಮೂಲಕ ಸಿಪಿಐ(ಎಂ) ಸರಕಾರದೊಂದಿಗೆ ಸಹಕರಿಸುತ್ತದೆ.

## 7. ಮಹತ್ವಾಕಾಂಕ್ಷೆಯ ಜಿಲ್ಲೆಗಳ ಅಭಿವೃದ್ಧಿ

ನೀತಿ ಆಯೋಗ 115 ಮಹತ್ವಾಕಾಂಕ್ಷೆಯ ಜಿಲ್ಲೆಗಳನ್ನು ಗುರುತಿಸಿದೆ. ಇವುಗಳಲ್ಲಿ ಈ ಹಿಂದಿನ ಪದಕೋಷದಲ್ಲಿ "ಹಿಂದುಳಿದ" ಜಿಲ್ಲೆಗಳು ಎಂಬ ವಿಧದಲ್ಲಿ ಸೇರಿಸಿದ ಜಿಲ್ಲೆಗಳು ಸೇರಿವೆ. ಐದು ಮುಖ್ಯ ವಿಷಯಗಳನ್ನು ಆರಿಸಲಾಗಿದೆ. ಅವೆಂದರೆ, ಆರೋಗ್ಯ ಮತ್ತು ಪೌಷ್ಟಿಕತೆ, ಶಿಕ್ಷಣ, ಕೃಷಿ ಮತ್ತು ಜಲಸಂಪನ್ಮೂಲಗಳು, ಹಣಕಾಸು ಒಳಗೊಳ್ಳುವಿಕೆ ಮತ್ತು ಕೌಶಲ್ಯ ಅಭಿವೃದ್ಧಿ ಹಾಗೂ ಆಧಾರಭೂತ ಮೂಲರಚನೆ. ಕೇಂದ್ರ ಮತ್ತು ರಾಜ್ಯಸರಕಾರದ ಯೋಜನೆಗಳ ಯೋಜಿತ ಮೇಳೈಕೆಯನ್ನು ಚುನಾಯಿತ ರಾಜ್ಯ ಸರಕಾರಗಳೊಂದಿಗೆ ಸಮಾಲೋಚನೆಯ ಮೂಲಕ ಮಾಡಬೇಕು. ಅದೇ ರೀತಿಯಲ್ಲಿ, ಈ ಐದು ವಿಷಯಗಳಿಗೆ ನೀಡಿರುವ ಒತ್ತಿನ ಪ್ರಮಾಣವದ ಬಗ್ಗೆ ರಾಜ್ಯ ಸರಕಾರಗಳೊಂದಿಗೆ ಚರ್ಚಿಸಿ ಒಂದು ಒಮ್ಮತಕ್ಕೆ ಬರಬೇಕು.

ಒಂದು ಜಿಲ್ಲೆಯ ಅಥವ ಒಂದು ಆಡಳಿತ ಘಟಕದ ಮಹತ್ವಾಕಾಂಕ್ಷೆಗಳನ್ನು ಸ್ಥಳೀಯ ಮಟ್ಟದಲ್ಲೇ ಅವಕ್ಕೆ ಅಧಿಕಾರಗಳನ್ನು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಮೂಲಕ ವಿಕೇಂದ್ರೀಕರಿಸುವ ಮೂಲಕವೇ ಚೆನ್ನಾಗಿ ಈಡೇರಿಸಲು ಸಾಧ್ಯ.

ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಸರಕಾರಗಳನ್ನು ಬದಿಗೊತ್ತಿ ಕೇಂದ್ರ ಸರಕಾರವೇ ನೇರವಾಗಿ ಜಿಲ್ಲಾಮಟ್ಟದ ಅಭಿವೃದ್ಧಿಯ ಮೇಲ್ವಿಚಾರಣೆ ನಡೆಸುವುದನ್ನು ಒಪ್ಪಲು ಸಾಧ್ಯವಿಲ್ಲ.

ನೀತಿ ಆಯೋಗ ವಿಧಿಸಿರುವ ಒತ್ತಿನ ಪರಿಮಾಣಗಳ ಬಗ್ಗೆ ಹೇಳುವುದಾದರೆ, ಕೃಷಿ ಮತ್ತು ಜಲಸಂಪನ್ಮೂಲಗಳಿಗೆ ಅಗತ್ಯಕ್ಕಿಂತ ಕಡಿಮೆ ಒತ್ತು ನೀಡಲಾಗಿದೆ ಎಂದು ನಮಗನಿಸುತ್ತದೆ. ಕೌಶಲ ಅಭಿವೃದ್ಧಿ ಮತ್ತು ಮೂಲರಚನೆಗೆ ಸಂಬಂಧಪಟ್ಟಂತೆಯೂ ಇದು ನಿಜ. ಈ ಕ್ಷೇತ್ರಗಳು ಆ ಜಿಲ್ಲೆಗಳಲ್ಲಿ ಜನರಿಗೆ ಒಂದು ಒಪ್ಪುವ ಜೀವನಾಧಾರ ಸ್ಥಾನಮಾನವನ್ನು ಒದಗಿಸುವ ಆರೋಗ್ಯಕರ ಆರ್ಥಿಕ ಅಭಿವೃದ್ಧಿಯನ್ನು ಖಾತ್ರಿಪಡಿಸುವಲ್ಲಿ ಬಹಳ ಮಹತ್ವದವುಗಳು. ಹಾಗೆ ಮಾಡಲಾಗದಿದ್ದರೆ, ನಗರಪ್ರದೇಶಗಳಿಗೆ ಲಂಗುಲಗಾಮಿಲ್ಲದ ವಲಸೆಯನ್ನು ಸೀಮಿತಗೊಳಿಸುವ ಸಾಮರ್ಥ್ಯ ಇರುವುದಿಲ್ಲ, ಇದು ನಗರಪ್ರದೇಶಗಳಲ್ಲಿ ಬಡವರ ಪ್ರಮಾಣವನ್ನು ಹೆಚ್ಚಿಸುತ್ತದೆ.

ನೀತಿ ಆಯೋಗ ಸೂಚಿಸಿರುವ ಮುನ್ನಡೆಯ ದಾರಿಯೆಂದರೆ ಈ ಜಿಲ್ಲೆಗಳಲ್ಲಿ ಸರ್ವೆಗಳನ್ನು ನಡೆಸುವುದನ್ನು ಚುನಾಯಿತ ಸರಕಾರಗಳನ್ನು ಬದಿಗೊತ್ತಿ ಟಾಟಾ ಟ್ರಸ್ಟ್ ಗಳಿಗೆ ಹಾಗೂ ಬಿಲ್ ಮತ್ತು ಮೆಲಿಂದಾ ಗೇಟ್ಸ್ ಫೌಂಡೇಷನ್‌ಗೆ ಒಪ್ಪಿಸುವುದು. ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಮಹತ್ವಾಕಾಂಕ್ಷೆಯ ಜಿಲ್ಲೆಗಳ ಅಭಿವೃದ್ಧಿಯ ಸಮಸ್ತ ಪರಿಕಲ್ಪನೆ ಮತ್ತು ಜಾರಿಯಲ್ಲಿ ಈ ಜಿಲ್ಲೆಗಳಿರುವ ರಾಜ್ಯಗಳ ಚುನಾಯಿತ ಸರಕಾರಗಳ ಪಾತ್ರವೇನಿರುತ್ತದೆ, ಮತ್ತು ಅವುಗಳ ತೊಡಗುವಿಕೆ ಹೇಗಿರುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆಯಿಲ್ಲ.

**ಈ ಸರಕಾರ ದೇಶದ ಮುಂದೆ ದೀರ್ಘ ಕಾಲದಿಂದ ನೆನೆಗುದಿಯಲ್ಲಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಶಾಸನವಾಗಿ ಮಾಡಬೇಕು.**

*

**ಸರಕಾರ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು, ಇತರ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತಹ ಕಾನೂನುಗಳನ್ನು ಮತ್ತು ಅಂಶಗಳನ್ನು ಬಲಪಡಿಸಲು ಪ್ರಯತ್ನಿಸಬೇಕು, ಅವನ್ನು ಮತ್ತಷ್ಟು ದುರ್ಬಲಗೊಳಿಸಲು ಹೋಗಬಾರದು.**

ಜಮ್ಮು ಮತ್ತು ಕಾಶ್ಮೀರದಲ್ಲಿ 5ದಿನಗಳಲ್ಲಿ 10 ಸಾವುಗಳು
-ಯುದ್ಧ ಕೂಗುಗಳು ಮುಂದುವರೆಯುತ್ತಿವೆ
ಜೈಶ್ರೀರಾಮ್, ವಂದೇ ಮಾತರಂ, ಅಲ್ಲಾಹು ಅಕ್ಬರ್




ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಇಕನಾಮಿಕ್ ಟೈಮ್ಸ್

**ಒಂದು ಜಿಲ್ಲೆಯ ಅಥವ ಒಂದು ಆಡಳಿತ ಘಟಕದ ಮಹತ್ವಾಕಾಂಕ್ಷೆಗಳನ್ನು ಸ್ಥಳೀಯ ಮಟ್ಟದಲ್ಲೇ ಅವಕ್ಕೆ ಅಧಿಕಾರಗಳನ್ನು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಮೂಲಕ ವಿಕೇಂದ್ರೀಕರಿಸುವ ಮೂಲಕವೇ ಚೆನ್ನಾಗಿ ಈಡೇರಿಸಲು ಸಾಧ್ಯ.**

**ನೀತಿ ಆಯೋಗ ಸೂಚಿಸಿರುವ ಮುನ್ನಡೆಯ ದಾರಿಯೆಂದರೆ ಈ ಜಿಲ್ಲೆಗಳಲ್ಲಿ ಸರ್ವೆಗಳನ್ನು ನಡೆಸುವುದನ್ನು ಚುನಾಯಿತ ಸರಕಾರಗಳನ್ನು ಬದಿಗೊತ್ತಿ ಟಾಟಾ ಟ್ರಸ್ಟ್ ಗಳಿಗೆ ಹಾಗೂ ಬಿಲ್ ಮತ್ತು ಮೆಲಿಂದಾ ಗೇಟ್ಸ್ ಫೌಂಡೇಷನ್‌ಗೆ ಒಪ್ಪಿಸುವುದು. ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.**

# ‘ಬಂಡವಾಳ’ ಬಿಡುಗಡೆಗೆ ಅಗಸ್ಟ್ 2 ರಂದು ಬನ್ನಿ




‘ಬಂಡವಾಳ ಸಂಪುಟ–1’ ಸುಮಾರು 2 ವರ್ಷಗಳ ಕೆಲಸದ ನಂತರ ಪ್ರಿಂಟಿಗೆ ಹೋಗಿದೆ. ಇದರ ಹಿಂದೆ ನಾಡಿನ ಇಪ್ಪತ್ತು ಹಿರಿಯ ಪರಿಣತ ಲೇಖಕರ ಪರಿಶ್ರಮವಿದೆ. ಬಂಡವಾಳ ಸಂಪುಟ–1ನ್ನು ದೊಡ್ಡ (ಕ್ರೌನ್ 1/4) ಸೈಜಿನಲ್ಲಿ ಪ್ರಕಟಿಸಲಾಗುತ್ತಿದೆ.

‘ಬಂಡವಾಳ’ದ ಕನ್ನಡ ಅನುವಾದದ ಬಿಡುಗಡೆ ಕರ್ನಾಟಕದ ಇತಿಹಾಸದಲ್ಲಿ ಒಂದು ಚಾರಿತ್ರಿಕ ಘಟನೆಯಾದ್ದರಿಂದ ಅದಕ್ಕೆ ತಕ್ಕುದಾದ ರೀತಿಯಲ್ಲಿ ಬಿಡುಗಡೆ ಸಮಾರಂಭವನ್ನು ನಡೆಸಲಾಗುತ್ತಿದೆ. ಇದು ‘ಬಂಡವಾಳ ಸಂಪುಟ–1’ ‘ಮಾರ್ಕ್ಸ್200–ಕ್ಯಾಪಿಟಲ್150’ ಸರಣಿಯ ಕೊನೆಯ ಪ್ರಕಟಣೆಯಾದ್ದರಿಂದ ಆ ಯೋಜನೆಯ ಸಮಾರೋಪವೂ ಹೌದು. **‘ಬಂಡವಾಳ–ಸಂಪುಟ 1’ ನ್ನು ಅಗಸ್ಟ್ 2 ರಂದು ಬೆಂಗಳೂರಿನಲ್ಲಿ ಇಡೀ ದಿನ ನಡೆಯುವ ಸಮಾರಂಭವೊಂದರಲ್ಲಿ ಬಿಡುಗಡೆ ಮಾಡಲಾಗುತ್ತದೆ.**

ಬಂಡವಾಳ ಸಂಪುಟ–1ರ ಬಿಡುಗಡೆ ರಾಜಕೀಯವಾಗಿಯೂ, ಸಾಮಾಜಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಒಂದು ಪ್ರಮುಖ ಘಟನೆ. ಇದರಲ್ಲಿ ಮೂರು ಪ್ರಮುಖ ಜನವಿಭಾಗಗಳನ್ನು ಭಾಗವಹಿಸುವಂತೆ ಮಾಡಬೇಕು. ಮಾರ್ಕ್ಸ್ ತಾನು ‘ಬಂಡವಾಳ’ವನ್ನು ಬರೆದಿದ್ದು ಅರ್ಥಶಾಸ್ತ್ರಜ್ಞರ ನಡುವೆ ಚರ್ಚೆಗೆ ಮಾತ್ರವಲ್ಲ, ಮುಖ್ಯವಾಗಿ ಕಾರ್ಮಿಕರನ್ನು ಉದ್ದೇಶಿಸಿ ಬರೆದದ್ದು ಎಂದು ಹೇಳುತ್ತಾರೆ. ಹಾಗಾಗಿ ಇದೊಂದು ಕಾರ್ಮಿಕರ ಸಮಾರಂಭವಾಗಬೇಕು. ಆದ್ದರಿಂದ ಕಾರ್ಮಿಕರು, ಕಾರ್ಮಿಕ ಸಂಘಗಳ ಕಾರ್ಯಕರ್ತರು ಮತ್ತು ನಾಯಕರು (ಅದರಲ್ಲೂ ಬೆಂಗಳೂರಿನ ಹಾಗು ಹತ್ತಿರದ ಜಿಲ್ಲೆಯವರು ಹೆಚ್ಚಿನ ಸಂಖ್ಯೆಯಲ್ಲಿ) ಭಾಗವಹಿಸುವಂತೆ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇದಲ್ಲದೆ, ಪ್ರಮುಖ ವಿ.ವಿ.ಗಳ, ಕಾಲೇಜುಗಳಲ್ಲಿ ಹಾಗೂ ಸಂಶೋಧನಾ ಸಂಸ್ಥೆಗಳಲ್ಲಿರುವ, ಅದರಲ್ಲೂ ಪ್ರಧಾನವಾಗಿ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಕಾಮರ್ಸ್ ವಿಭಾಗಗಳ ಮತ್ತು ಇತರ ಆಸಕ್ತ ವಿದ್ಯಾರ್ಥಿಗಳು, ಸಂಶೋಧಕರು, ಅಧ್ಯಾಪಕರು ಭಾಗವಹಿಸುವಂತೆ ವಿಶೇಷ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಎಡ, ಪ್ರಗತಿಪರ, ರ್‍ಯಾಡಿಕಲ್ ಬುದ್ಧಿಜೀವಿಗಳು, ಲೇಖಕರು, ಕಲಾವಿದರು : ಎಡ ಪಕ್ಷಗಳ, ದಲಿತ ಮತ್ತಿತರ ಸಾಮಾಜಿಕ ಚಳುವಳಿಗಳ ನಾಯಕರು, ಕಾರ್ಯಕರ್ತರು ಸಹ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ.

ಸಮಾರಂಭದಲ್ಲಿ ಮೂರು ಗೋಷ್ಠಿಗಳಿರುತ್ತವೆ. **“ಬಂಡವಾಳದ 150 ವರ್ಷ ಮತ್ತು ಸಮಕಾಲೀನ ಸಮಸ್ಯೆಗಳು”** ಎಂಬ ವಿಚಾರ ಸಂಕಿರಣದ ಗೋಷ್ಠಿ ಇರುತ್ತದೆ. ಇದರಲ್ಲಿ **ಪ್ರೊ. ಪ್ರಭಾತ್ ಪಟ್ನಾಯಕ್ ದಿಕ್ಸೂಚಿ ಭಾಷಣ** ಮಾಡಲಿದ್ದಾರೆ. ನಾಡಿನ ಪ್ರಮುಖ ಲೇಖಕರು ಚಿಂತಕರು ವಿಚಾರ ಸಂಕಿರಣದಲ್ಲಿ ಭಾಗವಹಿಸಲಿದ್ದಾರೆ. ‘ಬಂಡವಾಳ ಸಂಪುಟ–1’ ಮಹತ್ವ ಸಾರುವ, ಪರಿಚಯ ಮಾಡುವ ಒಂದು ಗೋಷ್ಠಿ ಇರುತ್ತದೆ. ಮುಖ್ಯ ಬಿಡುಗಡೆಯ ಗೋಷ್ಠಿಯಲ್ಲಿ ಸಾಹಿತ್ಯ ಸಾಂಸ್ಕೃತಿಕ ವಲಯದ ಪ್ರಮುಖರೊಬ್ಬರು ಪುಸ್ತಕ ಬಿಡುಗಡೆ ಮಾಡಿ ಪ್ರಧಾನ ಭಾಷಣ ಮಾಡಲಿದ್ದಾರೆ. ಹಾಗೂ ನಾಡಿನ ಪ್ರಮುಖರು ಭಾಗವಹಿಸಲಿದ್ದಾರೆ.




**‘ಮಾರ್ಕ್ಸ್200–ಕ್ಯಾಪಿಟಲ್150’ಯೋಜನೆ ಪರವಾಗಿ ಕ್ರಿಯಾ ಮಾಧ್ಯಮ ಮತ್ತು ನವಕರ್ನಾಟಕ**

**ನೀವೂ ಬನ್ನಿ ! ನಿಮ್ಮ ಸ್ನೇಹಿತರನ್ನು ಕರೆ ತನ್ನಿ !!**

# ‘ಬಂಡವಾಳ’ ಕಬ್ಬಿಣದ ಕಡಲೆಯೇ? ಒಣ ಸೈದ್ಧಾಂತಿಕ ಪ್ರತಿಪಾದನೆಯೇ?

**ವಸಂತರಾಜ ಎನ್.ಕೆ.**

‘ಬಂಡವಾಳ’ದ ಮತ್ತು ಅದರ ಅಧ್ಯಯನದ ಮಹತ್ವದ ಕುರಿತು ಅರಿವಿರುವವರಲ್ಲೂ ಅದೊಂದು ಕಬ್ಬಿಣದ ಕಡಲೆ, ತಜ್ಞರು ಮತ್ತು ಅರ್ಥಶಾಸ್ತ್ರಜ್ಞರು ಮಾತ್ರ ಅದನ್ನು ಓದಲು ಸಾಧ್ಯ ಎಂಬ ಸಾಮಾನ್ಯ ಭಾವನೆ ಇದೆ. ಇದು ಬಹುಪಾಲು ನಿಜವಲ್ಲ ಎನ್ನಬಹುದು. ಹೊಸ ಪರಿಕಲ್ಪನೆಗಳನ್ನು ಸೈದ್ಧಾಂತಿಕ ಪ್ರವರ್ಗಗಳನ್ನು ಮೊದಲ ಬಾರಿ ನಿರೂಪಿಸುವುದರಿಂದ ಮೊದಲ 3 ಅಧ್ಯಾಯಗಳಲ್ಲಿ ಕೆಲವು ಕ್ಲಿಷ್ಟವಾದ ಭಾಗಗಳು ಇವೆ ಎಂಬುದು ನಿಜ. ಆದರೆ ಒಟ್ಟಾರೆಯಾಗಿ ಹೇಳುವುದಾದರೆ ‘ಬಂಡವಾಳ’ ಓದಲಸಾಧ್ಯವಾದ ಪುಸ್ತಕವೇನಲ್ಲ. ಈ ಪುಸ್ತಕ ಬೂರ್ಜ್ವಾ ಅರ್ಥಶಾಸ್ತ್ರದ ಸಿದ್ಧಾಂತಗಳ ಕಟು ವಿಮರ್ಶೆ–ಟೀಕೆಯನ್ನು ಒಳಗೊಂಡಿದೆ, ನಿಜ. ಆದರೆ ಅದನ್ನು ಬರೆದದ್ದು ತಜ್ಞರು ಮತ್ತು ಅರ್ಥಶಾಸ್ತ್ರಜ್ಞರ ಜತೆ ವಾಗ್ವಾದಕ್ಕೆ ಮಾತ್ರವಲ್ಲ. ಮಾರ್ಕ್ಸ್ ಇದನ್ನು ಕಾರ್ಮಿಕರು ಮತ್ತು ಕಾರ್ಮಿಕ ಚಳುವಳಿಯ ನೇತಾರರು ಓದಬೇಕೆಂದು ಬರೆದಿದ್ದು. ಅವರು ಓದಿ ಅರ್ಥಮಾಡಿಕೊಂಡು ಬದಲಾವಣೆಯ ಹರಿಕಾರರಾಗಬೇಕು ಎಂಬುದು ಅವರ ಬಯಕೆಯಾಗಿತ್ತು. ಇದು ಬಹಳ ಮಟ್ಟಿಗೆ ಪಶ್ಚಿಮ ಯುರೋಪಿನಲ್ಲೂ, ರಶ್ಯಾದಲ್ಲೂ ಸಾಕಾರಗೊಂಡಿತ್ತು. ಇದನ್ನು ಎಂಗೆಲ್ಸ್ ‘ಬಂಡವಾಳ’ದ ಇಂಗ್ಲೀಷ್ ಆವೃತ್ತಿಯ ಮುನ್ನುಡಿಯಲ್ಲಿ ಹೇಳುತ್ತಾರೆ. ಈಗಾಗಲೇ ನಿರೂಪಿಸಿದ ಹಾಗೆ, ‘ಬಂಡವಾಳ’ದ ಪರಸ್ಪರ ಹೆಣೆದುಕೊಂಡ ಹಲವು ಕಥನಗಳೇ ಏಕತಾನತೆಯನ್ನು ಒಡೆದು ವೈವಿಧ್ಯಮಯ ವಿಷಯಗಳನ್ನು ವಿವಿಧ ಶೈಲಿಯಲ್ಲಿ ಪ್ರಸ್ತುತಪಡಿಸಿ ಆಸಕ್ತಿಕಾರಕವಾಗಿಸುತ್ತದೆ. ಅರ್ಥಶಾಸ್ತ್ರಜ್ಞ, ತತ್ವಶಾಸ್ತ್ರಜ್ಞ, ಕವಿ ಹೃದಯಿ, ಚರಿತ್ರಕಾರ, ಚಳುವಳಿಕಾರ, ವಿಡಂಬನಕಾರ – ಮುಂತಾದ ಮಾರ್ಕ್ಸ್ ಅವರ ಹಲವು ‘ಅವತಾರ’ಗಳು, ‘ಬಂಡವಾಳ’ದ ಹಲವು ಕಥನಗಳಲ್ಲಿ ಬರುವ ಹಲವು ವಿಷಯಗಳು, ಅದಕ್ಕೆ ತಕ್ಕ ಶೈಲಿಗಳನ್ನು ಕಾಣಬಹುದು.

ಅವರ ನಿರೂಪಣೆ ಒಣ ಅಕಾಡೆಮಿಕ್ ರೀತಿಯದ್ದಲ್ಲ. ಹೆಚ್ಚಿನ ಭಾಗಗಳಲ್ಲಿ ಪಠ್ಯ ಲವಲವಿಕೆಯಿಂದ ಕೂಡಿದ್ದು ಓದಿಸಿಕೊಂಡು ಹೋಗುತ್ತದೆ. ಯಾವುದೇ ವಿಷಯದ ಬಗ್ಗೆ ಹೇಳುವಾಗ, ಇಲ್ಲಿರುವ ಹಲವು ಸಿದ್ಧಾಂತಗಳನ್ನು ಬೆಳೆಸಿ ಪ್ರತಿಪಾದಿಸುವಾಗ ಕೂಡ, ಹಲವು ಕಡೆ ಮಾರ್ಕ್ಸ್ ಅದ್ಭುತ ಕಾವ್ಯಾತ್ಮಕ ಭಾಷೆ ಬಳಸುತ್ತಾರೆ. ಅತ್ಯಂತ ಅನಿರೀಕ್ಷಿತ ಭಾಗಗಳಲ್ಲಿ ಶೇಕ್ಸ್‌ಪಿಯರ್, ಗಯಟೆ ಮುಂತಾದ ಮಹಾನ್ ಬರಹಗಾರರ ಕೃತಿಗಳ ಉದ್ಧರಣೆಗಳು, ಪಾತ್ರಗಳು, ಸಂವಾದಗಳು ಬಂದು ಪಠ್ಯಕ್ಕೆ ಜೀವ ತುಂಬುತ್ತವೆ. ಅದೇ ರೀತಿ ಬೈಬಲಿನ, ಗ್ರೀಕ್ ಪುರಾಣದ ಕತೆಗಳು, ಪಾತ್ರಗಳು, ಮಾತುಗಳು ನಿರೂಪಣೆಗೆ ಮೆರುಗು ನೀಡುತ್ತವೆ. ಅಪರೂಪದ ಚಾರಿತ್ರಿಕ ಘಟನೆಗಳ, ದಾಖಲೆಗಳ ಉಲ್ಲೇಖಗಳಿಂದ, ಅವುಗಳಿಂದ ಹೊಮ್ಮುವ ‘ಆಹಾ’ ಎನ್ನಿಸುವ ಹೊಳಹುಗಳಿಂದ ಪಠ್ಯ ಶ್ರೀಮಂತವಾಗುತ್ತದೆ. ಬಂಡವಾಳಶಾಹಿ ಮಾತ್ರವಲ್ಲ ಬಂಡವಾಳಶಾಹಿ–ಪೂರ್ವ ವ್ಯವಸ್ಥೆಗಳಲ್ಲೂ ದುಡಿಯುವ ಜನರ ದಾರುಣ ಸ್ಥಿತಿ ಬಗ್ಗೆ ಅವರ ಮರುಕ, ಕರುಳು ಮಿಡಿತ, ದಬ್ಬಾಳಿಕೆ ಬಗೆಗಿನ ಸಾತ್ವಿಕ ರೋಷ, ಹೋರಾಟಗಾರನ ಆಕ್ರೋಶ ಸಶಕ್ತವಾಗಿ ಮೂಡಿಬಂದು ನಿರೂಪಣೆ ಭಾವನಾತ್ಮಕವಾಗಿಯೂ ಮತ್ತು ಸ್ಫೂರ್ತಿದಾಯಕವಾಗಿಯೂ ಇದೆ. ಸೈದ್ಧಾಂತಿಕ ಪ್ರತಿಪಾದನೆಗಳಲ್ಲೂ ಸೇರಿದಂತೆ, ಪಠ್ಯದುದ್ದಕ್ಕೂ ಕಾಣಸಿಗುವ ಅವರ ಹಾಸ್ಯ ಪ್ರವೃತ್ತಿ, ಕಟು ವ್ಯಂಗ್ಯಗಳಂತೂ, ಅವರ ನಿರೂಪಣೆಯ ವಿಶೇಷತೆಯೇ ಎನ್ನಬೇಕು. ‘ಸೀನಿಯರನ ಕೊನೆಯ ಗಂಟೆ’ (ಬಂಡವಳಿಗನ ಲಾಭವು ಕೊನೆಯ ಗಂಟೆಯಲ್ಲಿ ಮಾತ್ರ ಹುಟ್ಟುವುದರಿಂದ ಕೆಲಸದ ಗಂಟೆಗಳನ್ನು ಕಡಿಮೆ ಮಾಡಬಾರದು ಎಂಬ ಪ್ರೊ. ಸೀನಿಯರನ ‘ಸಿದ್ಧಾಂತ’ವನ್ನು ಚಿಂದಿ ಉಡಾಯಿಸುವುದಲ್ಲದೆ, ಉದ್ದಕ್ಕೂ ಲೇವಡಿ ಮಾಡುವ ಅಧ್ಯಾಯ 9–ವಿಭಾಗ 3) ಮತ್ತು ‘ವರ್ಜನೆ ಸಿದ್ಧಾಂತ’ (ಬಂಡವಾಳದ ಶೇಖರಣೆಯು ಬಂಡವಳಿಗ ತನ್ನ ವೈಭವೋಪೇತ ಬಳಕೆಯನ್ನು ‘ತ್ಯಾಗ’ ‘ವರ್ಜನೆ’ ಮಾಡುವುದರಿಂದ ಆಗುತ್ತದೆ ಎಂಬ ಕೆಲವು ಬೂರ್ಜ್ವಾ ಅರ್ಥಶಾಸ್ತ್ರಜ್ಞರ ‘ಸಿದ್ಧಾಂತ’ದ ಮೇಲೆ ಗದಾಪ್ರಹಾರದ ಜತೆಗೆ ಕಟು ವ್ಯಂಗ್ಯ ಮಾಡುವ ಅಧ್ಯಾಯ 24–ವಿಭಾಗ 3) ಇದಕ್ಕೆ ಅತ್ಯುತ್ತಮ ಉದಾಹರಣೆಗಳು. ಹಲವು ಗಂಭೀರ ದಾಖಲೆಗಳ, ಬರಹಗಳ, ವರದಿಗಳ ಉದ್ಧರಣೆಗಳನ್ನು ಕೊಡುವಾಗ ಅದಕ್ಕೆ ನಡುನಡುವೆ ಅವರು ಹಾಕುವ ‘ಒಗ್ಗರಣೆ’, ನೀಡುವ ‘ರನ್ನಿಂಗ್ ಕಮೆಂಟರಿ’ಗಳೂ ನಗೆ ಉಕ್ಕಿಸುತ್ತವೆ.

‘ಬಂಡವಾಳ’ದ ನಿರೂಪಣೆಯಲ್ಲಿ ಮಾಡಲಾಗಿರುವ ಭಾಗ, ಅಧ್ಯಾಯ, ವಿಭಾಗ ಹಾಗೂ ವಿಷಯಗಳ ಅನುಕ್ರಮಕ್ಕೆ ಅದರದ್ದೇ ಆದ ತರ್ಕವಿದೆ. ಆ ಅನುಕ್ರಮದಲ್ಲಿ ಓದಿದಾಗ ‘ಬಂಡವಾಳ’ದ ಬಹು–ಆಯಾಮಗಳ ಶ್ರೀಮಂತ ವಿಶ್ಲೇಷಣೆಯನ್ನು ಸಮಗ್ರವಾಗಿ ಆಳವಾಗಿ ಅರಿವಾಗಿಸಿಕೊಳ್ಳಬಹುದು. ಆದರೆ ಒಬ್ಬ ಓದುಗ ಅದೇ ಅನುಕ್ರಮದಲ್ಲಿಯೇ ಓದಬೇಕೆಂದೇನಿಲ್ಲ. ಹಿಂದೆ ಹೇಳಿದ ಹಲವು ‘ಕಥನ’ಗಳಲ್ಲಿ ಆಸಕ್ತಿ ಇದ್ದ ಒಂದನ್ನು ಆಯ್ಕೆ ಮಾಡಿ ಸಂಬಂಧಿತ ಅಧ್ಯಾಯಗಳನ್ನು ಸಹ ಓದಬಹುದು. ಬಂಡವಾಳಶಾಹಿಯ ಉಗಮ ಮತ್ತು ಒಟ್ಟಾರೆಯಾಗಿ ಅದರ ಚರಿತ್ರೆಯಲ್ಲಿ ಆಸಕ್ತರು ಭಾಗ–8 ನ್ನು (ಬಂಡವಾಳದ ಆದಿಮ ಶೇಖರಣೆ – ಅಧ್ಯಾಯ 26–33) ನೇರವಾಗಿ ಮೊದಲು ಓದಬಹುದು. ರೈತ ಚಳುವಳಿಯ ಮತ್ತು ಕೃಷಿಯಲ್ಲಿ ಬಂಡವಾಳಶಾಹಿ ಪ್ರವೇಶದ ಪರಿಣಾಮಗಳಲ್ಲಿ ಆಸಕ್ತರು ಸಹ ಈ ಭಾಗವನ್ನು ನೇರವಾಗಿ ಓದಬಹುದು. ಕಾರ್ಮಿಕರು, ಕಾರ್ಮಿಕ ವರ್ಗದ ಹಾಗೂ ಎಡ–ಕಮ್ಯುನಿಸ್ಟ್ ಕಾರ್ಯಕರ್ತರು, ಬಂಡವಾಳಶಾಹಿ ಶೋಷಣೆಯ ಮೂಲವಾದ ಪರಮ ಮತ್ತು ಸಾಪೇಕ್ಷ ಮಿಗುತಾಯಗಳ ಸಾರವನ್ನು ಭಾಗ 2, 3, 4 ಗಳನ್ನು ಓದುವುದರಿಂದ ತಿಳಿದುಕೊಳ್ಳಬಹುದು. ಅಧ್ಯಾಯ 10 ಎಲ್ಲ ಕಾರ್ಮಿಕರು, ಕಾರ್ಮಿಕ ವರ್ಗದ ಕಾರ್ಯಕರ್ತರು ಓದಲೇಬೇಕಾದ್ದು. ಅಧ್ಯಾಯ 12, 13, 14 ವಿಜ್ಞಾನಿಗಳಿಗೆ, ಇಂಜಿನಿಯರುಗಳಿಗೆ, ತಾಂತ್ರಿಕ ಕೌಶಲ್ಯವಿರುವ ಕಾರ್ಮಿಕರಿಗೆ ವಿಶೇಷ ಆಸಕ್ತಿಯ ಓದು ಆಗಬಹುದು. ಸಾಮಾಜಿಕ ವಿಜ್ಞಾನಗಳ ಅದರಲ್ಲೂ ಅರ್ಥಶಾಸ್ತ್ರ, ರಾಜಕೀಯ ಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರದ ವಿದ್ಯಾರ್ಥಿಗಳು, ಸಂಶೋಧಕರು, ಅಧ್ಯಾಪಕರು ಇಡಿಯಾಗಿ ಓದಲೇಬೇಕಾದ ಪುಸ್ತಕವಿದು.

# ಜಿಡಿಪಿ ಬೆಳವಣಿಗೆಯ ದರದಲ್ಲಿ ಉತ್ಪ್ರೇಕ್ಷೆ ಮತ್ತು ಆರ್ಥಿಕ ಉದಾರೀಕರಣದ ನಿಜ ಬಣ್ಣ




**ಭಾರತದ ಜಿಡಿಪಿ ಅಂಕಿಅಂಶಗಳನ್ನು ಉತ್ಪ್ರೇಕ್ಷಿಸಿ ತೋರಿಸಲಾಗಿದೆ ಎಂದು ಹಲವಾರು ಹೆಸರಾಂತ ಆರ್ಥಿಕ ತಜ್ಞರು ಹೇಳಿದ್ದಾರೆ. ಇಲ್ಲಿ ಸುಬ್ರಮಣಿಯಂ ಪ್ರಬಂಧದಲ್ಲಿ ಎದ್ದು ಕಾಣುವ ಅಂಶವೆಂದರೆ ನಿನ್ನೆಯ ವರೆಗೂ ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರರಾಗಿದ್ದ ಒಬ್ಬ ವ್ಯಕ್ತಿಯೇ ಇದನ್ನು ಹೇಳುತ್ತಿದ್ದಾರೆ. ಇದು ಅವರ ತರ್ಕಕ್ಕೆ ಹೆಚ್ಚಿನ ತೂಕ ನೀಡುತ್ತದೆ.**

**ವಾಸ್ತವವಾಗಿ ಜಿಡಿಪಿ ಬೆಳವಣಿಗೆ ದರವೇ, ಅರ್ಥಿಕ ಉದಾರೀಕರಣದ ಅವಧಿಗೆ ಮೊದಲಿದ್ದ ಪ್ರಮಾಣಕ್ಕಿಂತಲೂ ಕಡಿಮೆಯಾಗಿದೆಯೆಂದಾದರೆ, ಆರ್ಥಿಕ ಉದಾರೀಕರಣದ ಅವಧಿ ಎಂದರೆ, ಹಿಂದಿನ ಅವಧಿಗೆ ಹೋಲಿಸಿದರೆ ಬೆಳವಣಿಗೆ ದಢೂ ಏರದ, ಆದರೆ ಅತ್ಯಂತ ಮೇಲ್ತುದಿಯಲ್ಲಿರುವ ಕೇಲವೇ ಮಂದಿ ರಾಷ್ಟ್ರೀಯ ಆದಾಯದ ಹೆಚ್ಚೆಚ್ಚು ಪಾಲನ್ನು, ಹಿಂದಿಗಿಂತ ವೇಗವಾಗಿ ತಮ್ಮದಾಗಿಸಿಕೊಂಡ ಅವಧಿಯಾಗಿ ಕಾಣುತ್ತದೆ.**

**ಪ್ರೊ. ಪ್ರಭಾತ್ ಪಟ್ನಾಯಕ್.** ಅನು: ಮುರಳಿ

ದೇಶದ 'ಒಟ್ಟು ಆಂತರಿಕ ಉತ್ಪನ್ನ' (ಜಿಡಿಪಿ) ಎನ್ನುವ ಪರಿಕಲ್ಪನೆಯು ಬೇರು ಇರುವುದು ಒಂದು ಜ್ಞಾನಕ್ಕೆ ಸಂಬಂಧಪಟ್ಟ ನಿಲುವಿನಲ್ಲಿ. ಈ ನಿಲುವು ಸಹಜವಾಗಿಯೇ ಸಮಾಜದಲ್ಲಿ ಇರುವ 'ಮಿಗುತಾಯ'ವನ್ನು ಗುರುತಿಸಲಾರದುಒಂದು ಸರಳ ಉದಾಹರಣೆಯಿಂದ ಇದನ್ನು ಅರಿತುಕೊಳ್ಳಬಹುದು. ನೂರು ಮಂದಿ ರೈತರು ನೂರು ಕ್ವಿಂಟಾಲ್ ಆಹಾರ ಧಾನ್ಯ ಬೆಳೆಯುವ ಒಂದು ಕೃಷಿ ಆರ್ಥಿಕತೆ ಇದೆ ಎಂದು ಇಟ್ಟುಕೊಳ್ಳೋಣ; ಈ ಪೈಕಿ 50 ಕ್ವಿಂಟಾಲನ್ನು ಒಬ್ಬ ಅಧಿಪತಿ ತೆರಿಗೆ ರೂಪದಲ್ಲಿ ತನ್ನ ಕುಟುಂಬ ಮತ್ತು ಹಿಂಬಾಲಕರ ಬಳಕೆಗಾಗಿ ತೆಗೆದುಕೊಳ್ಳುತ್ತಾನೆ ಎಂದು ಭಾವಿಸೋಣ. ಈ 50 ಕ್ವಿಂಟಾಲ್ ಒಟ್ಟು ನೂರು ಕ್ವಿಂಟಾಲ್‌ನ ಉತ್ಪನ್ನದಲ್ಲಿ "ಮಿಗುತಾಯ"ವಾಗಿದೆ ಎಂದು ಸುಲಭವಾಗಿಯೇ ಗ್ರಹಿಸಬಹುದು. ಆದರೆ ಜಿಡಿಪಿ ಪರಿಕಲ್ಪನೆ ಇದನ್ನು ಪರಿಗಣಿಸುವುದಿಲ್ಲ. ಇದರ ಬದಲಿಗೆ ಅದು ದೇಶದ ಜಿಡಿಪಿ 150 ಎಂದು ಲೆಕ್ಕ ಹಾಕುತ್ತದೆ, ಇದರಲ್ಲಿ 100 ಆಹಾರ ಮತ್ತು 50 ಅಧಿಪತಿ ಮತ್ತು ಆತನ ಹಿಂಬಾಲಕರು ಸಲ್ಲಿಸಿದ "ಸೇವೆಗಳು" ಎನ್ನುತ್ತದೆ. ಆ ಅಧಿಪತಿ ರೈತರ ಶೋಷಣೆಯನ್ನು ಹೆಚ್ಚಿಸಿ ತೆರಿಗೆಗಳನ್ನು 50 ರ ಜಾಗದಲ್ಲಿ 60 ಕ್ಕೆ ಏರಿಸಿದರೆ, ಈ ಹೆಚ್ಚಿದ ಶೋಷಣೆ ಮೂಲ 150ರಿಂದ 160ಕ್ಕೇರಿದ ಜಿಡಿಪಿ ಹೆಚ್ಚಳವಾಗಿ ಕಾಣುತ್ತದೆ. ಹೆಚ್ಚಿದ ಉತ್ಪಾದಕರ ಶೋಷಣೆ 150ರಿಂದ 160ಕ್ಕೆ ಏರಿದ ಶೇ.6 2/3 ದರದ ಆರ್ಥಿಕ ಬೆಳವಣಿಗೆಯಾಗಿ ಕಾಣುತ್ತದೆ.

ಹೀಗಾಗಿಯೇ ಮಾರ್ಕ್ಸ್‌ವಾದಿಗಳು ಎಂದೂ ಸಹ ಜಿಡಿಪಿ ಅಂದಾಜುಗಳನ್ನು ಮತ್ತು ಅದರ ಆಧಾರದಲ್ಲಿ ಬೆಳವಣಿಗೆ ದರದ ಲೆಕ್ಕಾಚಾರ ಮಾಡುವುದನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಆದರೆ ಇತ್ತೀಚೆಗೆ ಕೇಂದ್ರ ಸರ್ಕಾರದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಅರವಿಂದ್ ಸುಬ್ರಮಣಿಯನ್ ದೇಶದ ಜಿಡಿಪಿಯನ್ನು ಉತ್ಪ್ರೇಕ್ಷಿಸಲಾಗಿದೆ ಎಂದು ಹೇಳಿರುವುದು ಗಂಭೀರವಾಗಿ ಪರಿಗಣಿಸಲು ಅರ್ಹವಾದದ್ದು. ಏಕೆಂದರೆ ಅವರ ಹೇಳಿಕೆ ಕೇವಲ 'ಸೇವಾ ವಲಯ'ಕ್ಕೆ(ಸಾಮಾನ್ಯವಾಗಿ ತೊಂದರೆ ಇರುವುದೇ ಇಲ್ಲಿ) ಮಾತ್ರ ಸಂಬಂಧಿಸಿರದೆ, ಬಹುಮಟ್ಟಿಗೆ ಆರ್ಥಿಕತೆಯ ಭೌತಿಕ ಸರಕು ಉತ್ಪಾದನೆ ಕ್ಷೇತಕ್ಕೆ, ಅಂದರೆ ತಯಾರಿಕಾ ವಲಯಕ್ಕೆ ಸಂಬಂಧಿಸಿದೆ.

ಇತ್ತೀಚೆಗೆ ಅಳವಡಿಸಿಕೊಂಡಿರುವ ಜಿಡಿಪಿ ಲೆಕ್ಕಾಚಾರ ಪದ್ಧತಿ ಆರ್ಥಿಕ ಬೆಳವಣಿಗೆ ದರವನ್ನು ಗಮನಾರ್ಹ ಪ್ರಮಾಣದಲ್ಲಿ ಉತ್ಪ್ರೇಕ್ಷಿಸಿ ತೋರಿಸುತ್ತಿದೆ ಎಂಬುದು ಅರವಿಂದ್ ಸುಬ್ರಮಣಿಯನ್ ವಾದ. 2011–2016ರ ನಡುವಿನ ಜಿಡಿಪಿ ಬೆಳವಣಿಗೆ ಏರಿಕೆ ಸಾಮಾನ್ಯವಾಗಿ ಅದರೊಂದಿಗೆ ಹೆಚ್ಚಬೇಕಾಗಿದ್ದ ಇತರ ಹಲವಾರು ಸೂಚ್ಯಂಕಗಳಿಗೆ ಅನುಗುಣವಾಗಿರದೆ ಬಹಳ ದೂರ ಸರಿದಿದೆ ಎಂದು ಅವರು ತೋರಿಸಿ ಕೊಡುತ್ತಾರೆ. ಇದರ ಆಧಾರದಲ್ಲಿ, ಉತ್ಪ್ರೇಕ್ಷಿತ ಅಂದಾಜಿನ ಮಟ್ಟ ಸುಮಾರು ಶೇ.2.5ರಷ್ಟು ಎಂದು ಅವರು ಅಂದಾಜು ಮಾಡುತ್ತಾರೆ. ಈಗ ಅಧಿಕೃತವಾಗಿ ಹೇಳಿಕೊಳ್ಳುತ್ತಿರುವ ಶೇ.7ರಷ್ಟು ಬೆಳವಣಿಗೆ ದರದ ಬದಲು, ಸರಿಯಾದ ಬೆಳವಣಿಗೆ ದರ ಶೇ.4.5ರಷ್ಟು, ನಿಜ ಹೇಳಬೇಕೆಂದರೆ ಶೇ.3.5 ಮತ್ತು 5.5ರ ನಡುವೆ ಇದೆ, ಅಂದರೆ ಸರಾಸರಿ 4.5ರಷ್ಟು. .

ಬೆಳವಣಿಗೆ ದರದ ಉತ್ಪ್ರೇಕ್ಷೆಯ ಮಟ್ಟವನ್ನು ಅಂದಾಜು ಮಾಡುವ ಅವರ ಅಂಕಿ–ಅಂಶಗಳ ಲೆಕ್ಕಾಚಾರದಿಂದ ಇಂತಹ ಉತ್ಪ್ರೇಕ್ಷಿತ ಅಂದಾಜು ಏಕೆ ಸಂಭವಿಸಿತು ಎಂದು ಕಂಡು ಹಿಡಿಯಲು ಸಾಧ್ಯವಿಲ್ಲ. ಆದರೆ ಅವರು ಇದು ಏಕೆ ಸಂಭವಿಸಿರಬಹುದು ಎಂದು ಹಲವಾರು ಕಾರಣಗಳನ್ನು ನೀಡಿದ್ದಾರೆ. ಜಿಡಿಪಿಯನ್ನು ಲೆಕ್ಕಾಚಾರ ಮಾಡುವ ಹೊಸ ಪದ್ಧತಿ ಕೈಗಾರಿಕೋದ್ಯಮಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಮುಂತಾದ ಉತ್ಪಾದನೆಯ ಗಾತ್ರದ ಲೆಕ್ಕಾಚಾರಗಳನ್ನು ಅವಲಂಬಿಸುವುದನ್ನು ಕೈಬಿಟ್ಟು ಅದರ ಮೌಲ್ಯದ ಲೆಕ್ಕಾಚಾರಕ್ಕೆ ಕಂಪನಿ ಸಚಿವಾಲಯದಲ್ಲಿ ಲಭ್ಯವಿರುವ ಕಂಪನಿಗಳ ಅಂಕಿ–ಅಂಶಗಳನ್ನು ಅವಲಂಬಿಸಿದೆ. ಉತ್ಪನ್ನವೊಂದಕ್ಕೆ ಮಾಡುವ ಹೂಡಿಕೆ ಮತ್ತು ಅದರಿಂದ ಸಿಗುವ ಉತ್ಪಾದಕತೆ ಬದಲಾಗದೇ ಇದ್ದಾಗ ಈ ಎರಡು ಪ್ರಕಾರದ ಅಂಕಿ–ಅಂಶಗಳ ನಡುವೆ ಯಾವುದೇ ವ್ಯತ್ಯಾಸ ಇರುವುದಿಲ್ಲ. ಒಂದು ವೇಳೆ ಪ್ರತಿ ಉತ್ಪನ್ನಕ್ಕೆ ಮಾಡುವ ಹೂಡಿಕೆಗಿಂತಲೂ ಉತ್ತಮ ನಿರ್ವಹಣೆಯಿಂದ ಉತ್ಪಾದಕತೆ ಹೆಚ್ಚಾದಾಗ ವ್ಯತ್ಯಾಸ ಕಾಣಬರುತ್ತದೆ. ಈ ಅರ್ಥದಲ್ಲಿ, ಸಾಮಾನ್ಯವಾಗಿ 'ಉತ್ಪಾದಕ ದಕ್ಷತೆ' ಸ್ವಲ್ಪ ಉತ್ತಮಗೊಳ್ಳುತ್ತದೆ. ಆದರೆ ಇತ್ತೀಚೆಗೆ ಭಾರತೀಯ ಜಿಡಿಪಿ ಮಾಹಿತಿಗಳು ತೋರಿಸುತ್ತಿರುವಷ್ಟೇನೂ ಅಲ್ಲ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಕುಸಿಯುತ್ತಿದ್ದ ಸನ್ನಿವೇಶದಲ್ಲಿ ಕಂಪನಿ–ಹಣಕಾಸು ಆಧರಿತ ಅಂದಾಜಿನತ್ತ ಹೊರಳಿರುವುದು ಸಹ ಜಿಡಿಪಿ ಬೆಳವಣಿಗೆ ದರವನ್ನು ಉತ್ಪ್ರೇಕ್ಷಿಸಬಹುದು. ಉತ್ಪಾದನೆಗೆ ತೊಡಗಿಸಿದವುಗಳು(ಇನ್‌ಪುಟ್)ಮತ್ತು ಉತ್ಪನ್ನ(ಔಟ್‌ಪುಟ್)ಗಳ ಮೌಲ್ಯವನ್ನು ಅವುಗಳ ಪ್ರತ್ಯೇಕ ಬೆಲೆ ಸೂಚ್ಯಂಕಗಳಿಗೆ ಹೊಂದಿಸಿಕೊಳ್ಳದೆ, ಎರಡನ್ನೂ ಒಂದೇ ಸೂಚ್ಯಂಕಕ್ಕೆ ಹೊಂದಿಸುವುದರಿಂದ ಹೀಗಾಗುತ್ತದೆ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ.

ಉದಾಹರಣೆಗೆ ರೂ.50 ರಷ್ಟು ಹೂಡಿಕೆ ಮಾಡಿ ರೂ.100 ಉತ್ಪನ್ನವನ್ನು ಪಡೆಯುತ್ತೇವೆ. ಇಲ್ಲಿ ಜಿಡಿಪಿ ಲೆಕ್ಕಾಚಾರವನ್ನು ಪ್ರವೇಶಿಸುವ ಮೌಲ್ಯವರ್ಧನೆ ರೂ.50. ಇನ್‌ಪುಟ್ ಬೆಲೆ ಅರ್ಧದಷ್ಟಾಯಿತು ಎಂದಿಟ್ಟುಕೊಳ್ಳೋಣ, ಅಂದರೆ ರೂ.25. ಒಂದು ವೇಳೆ ಇನ್‌ಪುಟ್ ಮತ್ತು ಔಟ್‌ಪುಟ್ ಎರಡನ್ನೂ ಪ್ರತ್ಯೇಕವಾಗಿ ಆಯಾಯ ಬೆಲೆ ಸೂಚ್ಯಂಕಗಳಿಗೆ ಹೊಂದಿಸಿದರೆ ಆಗ 'ವಾಸ್ತವ ಮೌಲ್ಯ' ವರ್ಧನೆಯಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಆದರೆ ಎರಡನ್ನೂ ವ್ಯತ್ಯಾಸಗೊಂಡಿರದ ಉತ್ಪನ್ನದ ಬೆಲೆ ಸೂಚ್ಯಂಕಕ್ಕೆ ಹೊಂದಿಸಿದರೆ ಆಗ ಮೂಲ ಬೆಲೆಗೆ ಸೇರಿಸಿದ ನಿಜವಾದ ಮೌಲ್ಯ ರೂ.75 ಎಂದು ಕಾಣಿಸುತ್ತದೆ.. ಇಲ್ಲಿ ಬೆಳವಣಿಗೆ ರೂ.50ರಿಂದ 75ಕ್ಕೆ ಏರಿಕೆಯಾದಂತೆ ಕಾಣುತ್ತದೆ. ಆದರೆ ಈ ಉತ್ಪಾದನಾ ಕ್ಷೇತ್ರದ ಚಟುವಟಿಕೆಯಲ್ಲಿ ಯಾವುದೇ ಏರಿಕೆ ಇರುವುದಿಲ್ಲ.

ವಾಸ್ತವ ಏನೆಂದರೆ ಭಾರತದ ಜಿಡಿಪಿ ಅಂಕಿಅಂಶಗಳನ್ನು ಉತ್ಪ್ರೇಕ್ಷಿಸಿ ತೋರಿಸಲಾಗಿದೆ ಎಂದು ಹಲವಾರು ಹೆಸರಾಂತ ಆರ್ಥಿಕ ತಜ್ಞರು ಹೇಳಿದ್ದಾರೆ. ಇಲ್ಲಿ ಸುಬ್ರಮಣಿಯಂ ಪ್ರಬಂಧದಲ್ಲಿ ಎದ್ದು ಕಾಣುವ ಅಂಶವೆಂದರೆ ನಿನ್ನೆಯ ವರೆಗೂ ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರರಾಗಿದ್ದ ಒಬ್ಬ ವ್ಯಕ್ತಿಯೇ ಇದನ್ನು ಹೇಳುತ್ತಿದ್ದಾರೆ. ಇದು ಅವರ ತರ್ಕಕ್ಕೆ ಹೆಚ್ಚಿನ ತೂಕ ನೀಡುತ್ತದೆ. ಅವರ ಈ ಪ್ರಬಂಧವನ್ನು ಅಧಿಕೃತ ವಕ್ತಾರರು ಟೀಕೆ ಮಾಡಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಇಷ್ಟೆ ಅಲ್ಲ ಸುಬ್ರಮಣಿಯನ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಇಂತಹ ಪ್ರಬಂಧವನ್ನು ಬರೆದಿರುವ ಉದ್ದೇಶವೇನು ಎಂದೂ ಪ್ರಶ್ನಿಸಲಾಗಿದೆ. ಆದರೆ ಇದರಿಂದ ಅವರ ವಾದದ ತಿರುಳು ಹಾಗೆಯೇ ಉಳಿಯುತ್ತದೆ.


ಒಂದು ವೇಳೆ ಒಟ್ಟಾರೆ ಬೆಳವಣಿಗೆ ದರ ಸರ್ಕಾರ ಹೇಳುತ್ತಿರುವುದಕ್ಕಿಂತಲೂ ಕಡಿಮೆ ಇದ್ದರೆ, ವಲಯವಾರು ಬೆಳವಣಿಗೆ ದರವೂ ಕಡಿಮೆ ಇರುತ್ತದೆ. ಒಂದು ವೇಳೆ 2011–12 ಮತ್ತು 2016–17ರ ನಡುವಿನ ವಲಯವಾರು ಬೆಳವಣಿಗೆ ದರಗಳನ್ನು ಇದೇ ಪ್ರಮಾಣದಲ್ಲಿ ಕಡಿಮೆಗೊಳಿಸಿದರೆ ಒಟ್ಟಾರೆ ಬೆಳವಣಿಗೆ ದರ ಶೇ.7ರಿಂದ 4.5ಕ್ಕೆ ಇಳಿಯಲಿದೆ. ಆಗ ಸೇವಾ ವಲಯ ಹೊರತಾದ ಕ್ಷೇತ್ರಗಳ ದರ ಶೇ.2.3ರ ಆಸುಪಾಸಿನಲ್ಲಿ ಇರಲಿದೆ. ಸೇವಾ ವಲಯದ ಬೆಳವಣಿಗೆಯೂ ಶೇ.6ರ ಸುತ್ತಮುತ್ತ ಇರಲಿದೆ. ಈ ಬೆಳವಣಿಗೆ ದರ ಉದಾರೀಕರಣದ ಹಿಂದಿನ ಸರಕಾರೀ 'ನಿಯಂತ್ರಣ'ದ ಕಾಲಘಟ್ಟದಲ್ಲಿ ಕಂಡುದಕ್ಕಿಂತಲೂ ಕಡಿಮೆಯಾಗುತ್ತದೆ.

1991ರಲ್ಲಿ ಉದಾರೀಕರಣ ನೀತಿಗಳು ಜಾರಿಗೆ ಬಂದ ನಂತರದ ಒಂದು ದಶಕ ಕಾಲ ವಸ್ತು ಉತ್ಪಾದನೆ ವಲಯಗಳಲ್ಲಿ (ಅದಕ್ಕಿಂತಲೂ ಮೊದಲಿನ ಅವಧಿಗೆ ಹೋಲಿಸಿದರೆ) ಯಾವುದೇ ಬೆಳವಣಿಗೆ ಕಂಡಿಲ್ಲ ಎಂಬುದು ಗೊತ್ತಿರುವ ಸಂಗತಿ. ಆಗ ಬೆಳವಣಿಗೆ ಕಂಡಿದ್ದು ಸೇವಾ ವಲಯದಲ್ಲಿ ಮಾತ್ರ. ತಯಾರಿಕಾ ವಲಯದಲ್ಲಿ ಏನಾದರೂ ಪ್ರಗತಿ ಕಂಡಿದ್ದರೆ, ಅದು 'ಸುಧಾರಣೆ'ಗಳ ಮೊದಲ ದಶಕದ ನಂತರ. ಆದರೆ ಈಗ 2011–12ರ ನಂತರ ಸೇವಾ ವಲಯವೂ ಸೇರಿದಂತೆ ಒಟ್ಟಾರೆ ಬೆಳವಣಿಗೆ ದರ ಸುಮಾರು ಶೇ.4.5ರಷ್ಟು ಮಾತ್ರ. ಇದು ಉದಾರೀಕರಣದ ಮೊದಲಿನ ಅವಧಿಯಲ್ಲಿ ಇದ್ದಷ್ಟೆ. ಅಂದರೆ ಇದರ ಅರ್ಥ ಭೌತಿಕ ಉತ್ಪಾದನಾ ವಲಯದ ಬೆಳವಣಿಗೆ ಉದಾರೀಕರಣದ ಅವಧಿಯ ಮೊದಲಿಗಿಂತಲೂ ಕಡಿಮೆ ಇದೆ ಎಂದಾಗುತ್ತದೆ.

ಆದ್ದರಿಂದ, ಹೆಚ್ಚೆಂದರೆ, ಈ ಶತಮಾನದ ಮೊದಲ ದಶಕದ ಒಂದು ಸಣ್ಣ ಅವಧಿಯನ್ನು ಹೊರತು ಪಡಿಸಿದರೆ ಭೌತಿಕ ಉತ್ಪಾದನಾ ವಲಯದ ಬೆಳವಣಿಗೆ ದರ ಸರ್ಕಾರಿ ನಿಯಂತ್ರಣದ ಅವಧಿಯಲ್ಲಿ ಇದ್ದುದ್ದಕ್ಕಿಂತ ಹೆಚ್ಚೇನೂ ಇರಲಿಲ್ಲ, ಕೆಲವೊಮ್ಮೆ ಕಡಿಮೆಯೇ ಇತ್ತು ಎಂದಾಗುತ್ತದೆ. ನಿಜವಾಗಿ ಲೆಕ್ಕಕ್ಕೆ ಬರುವುದು ಇದೇ ವಲಯವೇ ಹೊರತು ಸೇವಾವಲಯ ಅಲ್ಲವಾದ್ದರಿಂದ, ಮತ್ತು ಸೇವಾವಲಯವನ್ನು ಜಿಡಿಪಿಯಲ್ಲಿ ಸೇರಿಸುವುದು ಪರಿಕಲ್ಪನೆಯು ಅಪಾಯದಿಂದ ತುಂಬಿದೆಯಾದ್ದರಿಂದ, ಹೆಚ್ಚೆಂದರೆ ಕೆಲವು ವರ್ಷಗಳನ್ನು ಬಿಟ್ಟು ಒಟ್ಟಾರೆಯಾಗಿ ಭಾರತದ ಆರ್ಥಿಕ ವ್ಯವಸ್ಥೆ ಉದಾರೀಕರಣದ ಅವಧಿಯಲ್ಲಿ, ಅದಕ್ಕೆ ಮೊದಲಿನ ಅವಧಿಯನ್ನು ಹೋಲಿಸಿದರೆ ಉತ್ತಮವಾಗಿಯೇನೂ ಇಲ್ಲ ಎಂದಾಗುತ್ತದೆ.

ಇದೇ ಸಂದರ್ಭದಲ್ಲಿ, ಭೌತಿಕ ಸರಕು ಉತ್ಪಾದನಾ ವಲಯಗಳಲ್ಲಿ ಉತ್ಪನ್ನದ ಹೆಚ್ಚಳಕ್ಕೆ ಹೋಲಿಸಿದರೆ ಉದ್ಯೋಗಾವಕಾಶಗಳ ಹೆಚ್ಚಳದ ಪ್ರಮಾಣ, ಅಥವ ಉದ್ಯೋಗಾವಕಾಶಗಳಲ್ಲಿ ಶೇಕಡಾವಾರು ಬದಲಾವಣೆಯನ್ನು ಈ ಉತ್ಪನ್ನದಲ್ಲಿನ ಶೇಕಡಾವಾರು ಬದಲಾವಣೆಯಿಂದ ಭಾಗಿಸಿದರೆ ಬರುವ ಮೊತ್ತ ಸರಕಾರೀ ನಿಯಂತ್ರಣದ ಅವಧಿಗೆ ಹೋಲಿಸಿದರೆ ಇಳಿಮುಖಗೊಂಡಿದೆ. ಆದ್ದರಿಂದ ನಿರುದ್ಯೋಗ ಭಾರತೀಯ ಆರ್ಥಿಕ ವ್ಯವಸ್ಥೆಯ ಎಲ್ಲದಕ್ಕಿಂತಲೂ ಮುಖ್ಯವಾದ ಸಮಸ್ಯೆಯಾಗಿ ಹೊಮ್ಮಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಈ ಎಲ್ಲ ಅವಧಿಯಲ್ಲೂ, ಆರ್ಥಿಕ ಉದಾರೀಕರಣದ ಶಂಖವನ್ನು ಊದುತ್ತಿದ್ದಾಗ, ಆರ್ಥಿಕದ ಬೆಳವಣಿಗೆ ದರ ಭಾರೀ ಪ್ರಮಾಣದಲ್ಲಿ ಏರಿಕೆ ಕಂಡಿದೆ ಎಂಬ ತರ್ಕವನ್ನು ಮುಂದಿಡಲಾಯಿತು. ಈ ಅವಧಿಯಲ್ಲಿ ಸೃಷ್ಟಿಯಾದ ಆದಾಯ ಮತ್ತು ಸಂಪತ್ತಿನ ನಡುವಿನ ಅಸಮಾನ ಬೆಳವಣಿಗೆಯನ್ನು ಅಭಿವೃದ್ಧಿ ಕಾಣಬೇಕೆಂದರೆ ಇಂತದನ್ನೆಲ್ಲ ಸಹಿಸಿಕೊಳ್ಳಬೇಕೆಂತಲೂ ಸಮರ್ಥಿಸಿಕೊಳ್ಳಲಾಯಿತು. ಆದರೆ ವಾಸ್ತವವಾಗಿ ಜಿಡಿಪಿ ಬೆಳವಣಿಗೆ ದರವೇ, ಅರ್ಥಿಕ ಉದಾರೀಕರಣದ ಅವಧಿಗೆ ಮೊದಲಿದ್ದ ಪ್ರಮಾಣಕ್ಕಿಂತಲೂ ಕಡಿಮೆಯಾಗಿದೆಯೆಂದಾದರೆ, ಈ ವಾದಸರಣಿಯೆಲ್ಲವೂ ಸಂಪೂರ್ಣವಾಗಿ ಕುಸಿದು ಬೀಳುತ್ತದೆ. ಆರ್ಥಿಕ ಉದಾರೀಕರಣದ ಅವಧಿ ಎಂದರೆ, ಹಿಂದಿನ ಅವಧಿಗೆ ಹೋಲಿಸಿದರೆ ಬೆಳವಣಿಗೆ ದರ ಮೇಲೇರಿದ್ದೇ ಅಪರೂಪವಾಗಿದ್ದ, ಆದರೆ ಜನಸಂಖ್ಯೆಯ ಒಂದು ಅತಿ ತೆಳ್ಳಗಿನ ಒಂದು ಅತ್ಯಂತ ಮೇಲಿನ ಸ್ತರ, ಹಿಂದಿನಂತಲ್ಲದೆ, ವೇಗವಾಗಿ ರಾಷ್ಟ್ರೀಯ ಆದಾಯದ ಹೆಚ್ಚೆಚ್ಚು ಪಾಲನ್ನು ತನ್ನದಾಗಿಸಿಕೊಂಡ ಅವಧಿಯಾಗಿ ಕಾಣುತ್ತದೆ.



**ಈ ಎಲ್ಲ ಅವಧಿಯಲ್ಲೂ, ಆರ್ಥಿಕ ಉದಾರೀಕರಣದ ಶಂಖವನ್ನು ಊದುತ್ತಿದ್ದಾಗ, ಆರ್ಥಿಕದ ಬೆಳವಣಿಗೆ ದರ ಭಾರೀ ಪ್ರಮಾಣದಲ್ಲಿ ಏರಿಕೆ ಕಂಡಿದೆ ಎಂಬ ತರ್ಕವನ್ನು ಮುಂದಿಡಲಾಯಿತು. ಈ ಅವಧಿಯಲ್ಲಿ ಸೃಷ್ಟಿಯಾದ ಆದಾಯ ಮತ್ತು ಸಂಪತ್ತಿನ ನಡುವಿನ ಅಸಮಾನ ಬೆಳವಣಿಗೆಯನ್ನು ಅಭಿವೃದ್ಧಿ ಕಾಣಬೇಕೆಂದರೆ ಇಂತದನ್ನೆಲ್ಲ ಸಹಿಸಿಕೊಳ್ಳಬೇಕೆಂತಲೂ ಸಮರ್ಥಿಸಿಕೊಳ್ಳಲಾಯಿತು. ಆದರೆ ವಾಸ್ತವವಾಗಿ ಜಿಡಿಪಿ ಬೆಳವಣಿಗೆ ದರವೇ, ಅರ್ಥಿಕ ಉದಾರೀಕರಣದ ಅವಧಿಗೆ ಮೊದಲಿದ್ದ ಪ್ರಮಾಣಕ್ಕಿಂತಲೂ ಕಡಿಮೆಯಾಗಿದೆಯೆಂದಾದರೆ, ಈ ವಾದಸರಣಿಯೆಲ್ಲವೂ ಸಂಪೂರ್ಣವಾಗಿ ಕುಸಿದು ಬೀಳುತ್ತದೆ.**

## ನಿರಾಶೆಯೂ ಇಲ್ಲ.. ಹತಾಶೆಯೂ ಇಲ್ಲ.... ಪುಟ 8 ರಿಂದ

ಅಂಗೀಕರಿಸಿತ್ತು. ಪಕ್ಷ ಜನಸಮೂಹದ ಧೋರಣೆ (ಮಾಸ್ ಲೈನ್)ಯನ್ನು ಅಂಗೀಕರಿಸಲು ಸಹಾಯವಾಗುವಂತೆ ನಮ್ಮ ಸಂಘಟನೆಯನ್ನು ಸಮರ್ಥಗೊಳಿಸುವ ಮತ್ತು ಬಲಪಡಿಸುವ ಕ್ರಮಗಳ ಕುರಿತು ಒಂದು ವರದಿಯನ್ನೂ ಅಂಗೀಕರಿಸಿತ್ತು. ಈ ಹಲವು ನಿರ್ಣಯಗಳು ಜಾರಿಯಾಗಿಲ್ಲ ಎಂಬುದು ಸ್ಪಷ್ಟ.

ಪ್ಲೀನಂನ ನಿರ್ಣಯಗಳ ಜಾರಿಯ ಸಮಗ್ರವಾದ ವಿಮರ್ಶೆಯನ್ನು ಮಾಡಬೇಕಾಗಿದೆ. ರಾಜ್ಯ ಪ್ಲೀನಂಗಳ ನಿರ್ಣಯದ ಜಾರಿಯ ಒಂದು ವರ್ಷದ ಅವಧಿಯ ವಿಮರ್ಶೆಯನ್ನು ರಾಜ್ಯ ಸಮಿತಿಗಳು ಮಾಡಬೇಕು ಎಂದು ಜೂನ್ 2018ರ ಕೇಂದ್ರ ಸಮಿತಿ ನಿರ್ಣಯಿಸಿತ್ತು. ಇದು 22ನೇ ಮಹಾಧಿವೇಶನದ ನಿರ್ಣಯಕ್ಕೆ ಅನುಗುಣವಾಗಿತ್ತು. ಇದನ್ನು ಆರು ತಿಂಗಳೊಳಗೆ ಅಂದರೆ ಅಕ್ಟೋಬರ್ 2018ರೊಳಗೆ ಮಾಡಬೇಕಾಗಿತ್ತು.

ಆದರೆ ಹೆಚ್ಚಿನ ರಾಜ್ಯ ಸಮಿತಿಗಳು ತಮ್ಮ ಪ್ಲೀನಂಗಳ ನಿರ್ಣಐಗಳ ಜಾರಿಯ ವಿಮರ್ಶೆ ಮಾಡಿಲ್ಲ. ಮುಂದಿನ ಮೂರು ತಿಂಗಳುಗಳಲ್ಲಿ ಅಂದರೆ ಅಗಸ್ಟ್ 2019ರೊಳಗೆ ಇದನ್ನು ಮಾಡಲೇಬೇಕು. ಸಂಘಟನಾ ಉಪಸಮಿತಿ ಈ ವರದಿಗಳನ್ನು ಅಧ್ಯಯನ ಮಾಡಿ ಮುಂದಿನ ಕಾರ್ಯಹಾದಿಯನ್ನು ತಯಾರಿಸಿ ಕೇಂದ್ರ ಸಮಿತಿಯ ಮುಂದಿಡಬೇಕು.

2. ಸಾಮೂಹಿಕ ಸಂಘಟನೆಗಳು ಸ್ವತಂತ್ರವಾಗಿ ಮತ್ತು ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡಬೇಕೆಂಬುದನ್ನು ಒತ್ತಿ ಹೇಳುವ ಹಲವು ನಿರ್ಣಯಗಳನ್ನು ಸತತವಾಗಿ ಮಾಡಿದ್ದರೂ, ಅದು ಜಾರಿಯಾಗಿಲ್ಲ. ಈ ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಮೇಲುಸ್ತುವಾರಿ ಮಾಡುತ್ತಿರುವ ಪಿಬಿ ಸದಸ್ಯರು, ಅಖಿಲ ಭಾರತ ಫ್ರಾಕ್ಷನ್ ಗಳ ಜತೆ ಸಮಾಲೋಚನೆ ನಡೆಸಿ ಕಾಲಮಿತಿಯಿರುವ ನಿರ್ದಿಷ್ಟ ಕ್ರಮಗಳನ್ನು ಸೂಚಿಸಿಬೇಕು. ಆಯಾ ಸಾಮೂಹಿಕ ಸಂಘಟನೆಗಳು ಮುಂದಿರುವ ಆದ್ಯತಾ ಅಜೆಂಡಾಗಳು ಮತ್ತು ಈ ನಿರ್ದಿಷ್ಟ ಜವಾಬ್ದಾರಿಗಳನ್ನು ನಿರ್ವಹಿಸಲು ಸಿಬ್ಬಂದಿ – ಇವೆರಡೂ ಅಂಶಗಳ ಕುರಿತು ನಿರ್ದಿಷ್ಟ ಕ್ರಮಗಳನ್ನು ಸೂಚಿಸಿಬೇಕು.
3. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ, ಸಾಮಾಜಿಕ ಮಾಧ್ಯಮ ಸೇರಿದಂತೆ, ಎಲ್ಲ ಲಭ್ಯವಿರುವ ತಂತ್ರಜ್ಞಾನದ ಸಲಕರಣೆಗಳನ್ನು ಮತ್ತು ಉಪಕರಣಗಳನ್ನು ಬಳಸಲು, ವ್ಯಾಪಕ ಪ್ರಯತ್ನಗಳನ್ನು ಮಾಡಬೇಕು. ಇದರಿಂದ ಪಕ್ಷದ ಎಲ್ಲಾ ಹಂತಗಳಲ್ಲಿ ಇಲೆಕ್ಟ್ರಾನಿಕ್ ಸಂಪರ್ಕದ ಜಾಲ ಕಟ್ಟಿ ಬಲಪಡಿಸಲು ಸಾಧ್ಯವಾಗಬೇಕು.
4. ಜನರ ಜ್ವಲಂತ ಸಮಸ್ಯೆಗಳ ಮೇಲೆ ಜನಪ್ರಿಯ ಹೋರಾಟಗಳನ್ನು, ಸ್ವತಂತ್ರವಾಗಿ ಅಥವಾ ಇತರ ಸಮಾನಮನಸ್ಕ ಪಕ್ಷಗಳು ಸಾಮಾಜಿಕ ಶಕ್ತಿಗಳೊಂದಿಗೆ ಆರಂಭಿಸಲು, ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಎರಡೂ ಹಂತಗಳಲ್ಲಿ ಯೋಜನೆಗಳನ್ನು ರೂಪಿಸಬೇಕು.
5. ನಗರ ಪ್ರದೇಶಗಳಲ್ಲಿ ಕೆಲಸದ ಬಗೆಗಿನ ಸಮಿತಿ, ನಗರದ ಬೆಳೆಯುತ್ತಿರುವ ಬಡವರು ಮತ್ತು ಮಧ್ಯಮ ವರ್ಗದ ಜನರನ್ನು ಅಣಿ ನೆರೆಸಲು, ಪಕ್ಷದ ಮಧ್ಯಪ್ರವೇಶದ ಅಜೆಂಡಾವನ್ನು ಸಿದ್ಧ ಪಡಿಸಬೇಕು.

**ಹೊಸ ಸವಾಲುಗಳು**

ಈ ಚುನಾವಣೆಗಳಲ್ಲಿ ಇಂತಹ ನಿರ್ಣಾಯಕ ವಿಜಯದೊಂದಿಗೆ ಸನ್ನಿಹಿತವಾಗಿರುವ ಹೊಸ ಸವಾಲುಗಳನ್ನು ಎದುರಿಸಲು ದೇಶ ಮತ್ತು ಜನತೆ ಅಣಿಯಾಗಬೇಕು.

ಅ. ಅಂತರ್ರಾಷ್ಟ್ರೀಯ ಬಂಡವಾಳ ಮತ್ತು ದೇಶೀಯ ಕಾರ್ಪೊರೇಟ್‌ಗಳ ಬೆಂಬಲದೊಂದಿಗೆ, ಹೊಸ ಬಿಜೆಪಿ ಸರಕಾರ ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ಮೂಲಕ ಶೋಷಣೆಯನ್ನು ತೀವ್ರಗೊಳಿಸಲಿವೆ. ದೊಡ್ಡ ಪ್ರಮಾಣದ ಖಾಸಗೀಕರಣ, ಕಾರ್ಮಿಕ ಕಾನೂನು ಸುಧಾರಣೆಗಳು, ರೈತರಿಂದ ಕೃಷಿ ಜಮೀನು ಸ್ವಾಧಿನಪಡಿಸಿಕೊಳ್ಳುವುದನ್ನು ಕಾನೂನುಬದ್ಧಗೊಳಿಸಲು ಭೂ–ಬ್ಯಾಂಕುಗಳು – ಇವುಗಳ ಸೂಚನೆಗಳು ಈಗಾಗಲೇ ಬಂದಿವೆ. ನಮ್ಮ ಬಹುಪಾಲು ದುಡಿಯುವ ಜನರ ಮೇಲೆ, ಆರ್ಥಿಕ ಆಘಾತಗಳು ಹೆಚ್ಚಲಿವೆ. ಈ ವಿಷಯಗಳ ಬಗ್ಗೆ ಹೋರಾಟಗಳನ್ನು ಪ್ರಾರಂಭಿಸಲು ಮತ್ತು ಅದರಲ್ಲಿ ಗರಿಷ್ಟ ಜನವಿಭಾಗಗಳನ್ನು ಅಣಿ ನೆರೆಸುವುದರಲ್ಲಿ ಪಕ್ಷ ಮುಂದಿರಬೇಕು.

ಆ. ಈ ಚುನಾವಣೆಗಳಲ್ಲಿ ಆಗಿರುವ ಹಿಂದುತ್ವ ಕೋಮುವಾದಿ ಧ್ರುವೀಕರಣದ ಕ್ರೋಢೀಕರಣದಿಂದಾಗಿ, ಕೋಮುವಾದಿ ಶಕ್ತಿಗಳ ಆಕ್ರಮಣ ಇನ್ನಷ್ಟು ತೀವ್ರವಾಗುವುದು ಖಚಿತ. ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸಲು, ಅವರ ಭದ್ರತೆಯ ಬಗೆಗಿನ ಕಾಳಜಿಗಳು ಮತ್ತು ಜೀವನೋಪಾಯಗಳನ್ನು ಉತ್ತಮ ಪಡಿಸುವುದರಲ್ಲಿ ಪಕ್ಷ ಅವರ 'ಛಾಂಪಿಯನ್' ಆಗಬೇಕು. ನಮ್ಮ ಸಂವಿಧಾನದಲ್ಲಿ ಸ್ಥಾಪಿತವಾಗಿರುವ ಜಾತ್ಯತೀತ ಪ್ರಜಾಪ್ರಭುತ್ವವನ್ನು ರಕ್ಷಿಸುವುದು ಮತ್ತು ಬಲಪಡಿಸುವುದು, ನಮ್ಮ ಪ್ರಚಾರಾಂದೋಲನಗಳ ಸತತ ಭಾಗವಾಗಿರಬೇಕು.

ಇ. ಸಾಂವಿಧಾನಿಕ ಪ್ರಾಧಿಕಾರಗಳ, ಅದರ ಸ್ವತಂತ್ರ ಸಂಸ್ಥೆಗಳ, ಅದರ ನಿಬಂಧನೆಯ ಸಾಂವಿಧಾನಿಕ ಕ್ರಮಗಳನ್ನು ಶಕ್ತಿಕುಂದಿಸುವ ಪ್ರಕ್ರಿಯೆ ಇನ್ನಷ್ಟು ತೀವ್ರವಾಗಲಿದೆ. ಈ ಸಂಸ್ಥೆಗಳ ವಶಪಡಿಸಿಕೊಳ್ಳುವಿಕೆಯನ್ನು ಬಲಪಡಿಸಲು, ಇದು ಆರೆಸ್ಸೆಸ್‌ಗೆ ಅತ್ಯವಶ್ಯಕ. ಇದು ಸೆಕ್ಯುಲರ್ ಪ್ರಜಾಸತ್ತಾತ್ಮಕ ಸಾಂವಿಧಾನಿಕ ಗಣರಾಜ್ಯವನ್ನು, ಅವರ 'ಹಿಂದುತ್ವ ರಾಷ್ಟ್ರ'ದ ಸೈದ್ಧಾಂತಿಕ ಪ್ರಾಜೆಕ್ಟು ಸಾಕಾರಗೊಳಿಸುವಂತೆ ಬದಲಾಯಿಸಲು ಅವರಿಗೆ ಅತ್ಯವಶ್ಯ. ಸಾಂವಿಧಾನಿಕ ಪ್ರಾಧಿಕಾರಗಳನ್ನು ರಕ್ಷಿಸುವ ಮತ್ತು ಬಲಪಡಿಸುವ ಹೋರಾಟಗಳು ನಮ್ಮ ಪ್ರಚಾರಾಂದೋಲನಗಳ ಶಾಶ್ವತ ಲಕ್ಷಣಗಳಾಗಬೇಕು.

ಈ. ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ದಾಳಿಗಳು ಸಹ ತೀವ್ರಗೊಳ್ಳಲಿವೆ. ಈ ಚುನಾವಣೆಗಳಲ್ಲಿ ಆರೆಸ್ಸಸ–ಬಿಜೆಪಿ ಪ್ರಚಾರ ನಡೆಸಿದ್ದರ ಮುಂದುವರಿಕೆಯಾಗಿ, ಭಾರತದಲ್ಲಿ 'ಭದ್ರತಾ ಪ್ರಭುತ್ವ' (ಸೆಕ್ಯುರಿಟಿ ಸ್ಟೇಟ್) ಸ್ಥಾಪಿಸುವ ಪ್ರಯತ್ನ ನಡೆಯಲಿದೆ. ಅದು ವ್ಯಕ್ತಿಗಳ ಹಕ್ಕುಗಳು ಮತ್ತು ಭಿನ್ನಾಭಿಪ್ರಾಯದ ಪ್ರಾಥಮಿಕ ಹಕ್ಕುಗಳ ಉಲ್ಲಂಘನೆಯಲ್ಲಿ ತೊಡಗಲಿದೆ. ಈ ನಿಟ್ಟಿನಲ್ಲಿ ಬಿಜೆಪಿ ನಾಯಕರು ಈಗಾಗಲೇ ಅನಿಷ್ಟಕಾರಕ ಸೂಚನೆಗಳನ್ನು ನೀಡುತ್ತಿದ್ದಾರೆ.

ನವ–ಉದಾರವಾದಿ ಸುಧಾರಣೆಗಳು ತೀವ್ರವಾದಂತೆ, ಕಾರ್ಮಿಕ ವರ್ಗದ ಮತ್ತು ಇತರ ದುಡಿಯುವ ಜನರ, ವಿಶೇಷವಾಗಿ ರೈತಾಪಿ ಮತ್ತು ಗ್ರಾಮೀಣ ಕಾರ್ಮಿಕರ, ಮೇಲೆ ಅವಿರತ ದಾಳಿಗಳು ನಡೆಯಲಿವೆ.

ಖಾಸಗಿ ಸೈನ್ಯಗಳ ಚಟುವಟಿಕೆಗಳು, ಒಂದಲ್ಲ ಒಂದು ನೆಪದೊಂದಿಗೆ ತೀವ್ರಗೊಂಡು, ಜನತೆಯ ಸಂವಿಧಾನಿಕ ಹಕ್ಕುಗಳನ್ನು ಕಿತ್ತುಕೊಳ್ಳಲಿವೆ. ಭಿನ್ನಾಭಿಪ್ರಾಯವನ್ನು ಅಂತಿಮವಾಗಿ ಬೇಟೆಯಲ್ಲಿ ಕೊನೆಗೊಳ್ಳುವ ಕಾನೂನುಬದ್ಧ ಕಿರುಕುಳದೊಂದಿಗೆ ದಮನಿಸುವ ಪ್ರಯತ್ನಗಳಾಗಲಿವೆ. ಈ ಸವಾಲಿಗೆ ಎದೆಕೊಟ್ಟು ಎದುರಿಸಲು, ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಕಾಪಿಡ ಬಯಸುವ ದೊಡ್ಡ ಜನವಿಭಾಗಗಳನ್ನು ಅಣಿ ನೆರೆಸುವಲ್ಲಿ ಪಕ್ಷ ಅಗ್ರಪಂಕ್ತಿಯಲ್ಲಿರಬೇಕು.

**ಕಾರ್ಯಭಾರಗಳು**

ಈ ಸವಾಲುಗಳನ್ನು ಎದುರಿಸಲು, ಪಕ್ಷ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ :

1. ಕಾರ್ಮಿಕ ವರ್ಗ, ರೈತಾಪಿ ಮತ್ತು ಕೃಷಿ ಕೂಲಿಕಾರರ ವ್ಯಾಪಕವಾದ ತೀವ್ರವಾದ ಹೊರಾಟಗಳನ್ನು ಅವರ ಜ್ವಲಂತ ಸಮಸ್ಯೆಗಳ ಎತ್ತಿಕೊಂಡು ಪ್ರಾರಂಭಿಸಬೇಕು. ಇತ್ತೀಚೆಗೆ ನಡೆದಿರುವ ಕಾರ್ಮಿಕ–ರೈತ–ಕೃಷಿಕೂಲಿಗಳ ಜಂಟಿ ಹೋರಾಟಗಳನ್ನು ನಡೆಸಲು ಆಗಿರುವ ಪ್ರಯತ್ನಗಳನ್ನು ಬಲಪಡಿಸಬೇಕು. ಈ ನಿಟ್ಟಿನಲ್ಲಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.
2. ಪ್ಲೀನಂನ 'ಜನಸಮೂಹದ ಧೋರಣೆಯ ಕ್ರಾಂತಿಕಾರಿ ಪಕ್ಷ'ದ ಗುರಿಯನ್ನು ಸಾಕಾರಗೊಳಿಸಲು, ಜನಸಮೂಹದ ಚಟುವಟಿಕೆಗಳನ್ನು ಹೆಚ್ಚಿಸುವ ಮತ್ತು ಸ್ಥಳೀಯ ವಿಷಯಗಳ ಬಗ್ಗೆ ಹೋರಾಟಗಳನ್ನು ಹಮ್ಮಿಕೊಳ್ಳುವ ಮೂಲಕ ಜನರ ಮಧ್ಯೆ ದೊಡ್ಡ ರೀತಿಯಲ್ಲಿ ಹೋಗಬೇಕು.
3. ನಮ್ಮ ಚುನಾವಣಾ ಪ್ರಚಾರದಲ್ಲಿ ದೊಡ್ಡ ರೀತಿಯಲ್ಲಿ ಭಾಗವಹಿಸಿರುವ ಯುವಜನರನ್ನು ನಮ್ಮ ಸಾಮೂಹಿಕ ಸಂಘಟನೆಗಳತ್ತ ಸೆಳೆಯಬೇಕು. ಈ ಹೊಸ ವಿಭಾಗಗಳು ಮತ್ತು ಅದರಲ್ಲಿರುವ ಕಾರ್ಯಕರ್ತರನ್ನು ಪಕ್ಷಕ್ಕೆ ತೆಗೆದುಕೊಳ್ಳಬೇಕು.
4. ಎಡ ಶಕ್ತಿಗಳ ಐಕ್ಯತೆಯನ್ನು ಬಲಪಡಿಸಬೇಕು. ಇದಕ್ಕಾಗಿ ಸಂಬಂಧಿತ ಎಡಪಕ್ಷಗಳ ಜತೆ ಮಾತುಕತೆ ನಡೆಸಬೇಕು. ಕಮ್ಯುನಿಸ್ಟ್ ಪಕ್ಷಗಳ ನಡುವೆ ನಿಕಟ ಸಂಯೋಜನೆ ಇರಬೇಕು.
5. ನಮ್ಮ ಸೈದ್ಧಾಂತಿಕ ಪ್ರಚಾರಗಳನ್ನು ಬಲಪಡಿಸಬೇಕು. ಕೋಮುವಾದದ ಜತೆ ಸೈದ್ಧಾಂತಿಕ ಹೋರಾಟಕ್ಕೆ ವಿಶೇಷ ಒತ್ತು ಇರಬೇಕು. ಕೋಮುವಾದಿ ಶಕ್ತಿಗಳಿಂದಾಗಿ ಮೂಢನಂಬಿಕೆಗಳು ಮತ್ತು ಜ್ಞಾನವಿರೋಧಿ ಭಾವನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವೈಜ್ಞಾನಿಕ ಮನೋಧರ್ಮ ಹರಡುವುದು ಈ ಹೋರಾಟದ ಅಗತ್ಯ ಭಾಗವಾಗಿರಬೇಕು.
6. ಮೇಲೆ ಹೇಳಿದ ಸವಾಲುಗಳನ್ನು ಎದುರಿಸಲು ಈ ವಿಷಯಾಧಾರಿತ ಕಾರ್ಯಕ್ರಮಗಳಿಗೆ ವ್ಯಾಪಕ ಜನವಿಭಾಗಗಳನ್ನು ಅಣಿ ನೆರೆಸಲು ಮುಂದಾಗಬೇಕು.
7. ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಮತ್ತು ಭದ್ರತೆ; ದಲಿತರ ಮೇಲೆ ದೌರ್ಜನ್ಯಗಳ ವಿರುದ್ಧ ಮತ್ತು ಅವರ ಹಕ್ಕುಗಳ ರಕ್ಷಣೆ; ಮಹಿಳೆಯರ ಸಾಮಾಜಿಕ ದಮನ ಮತ್ತು ಲಿಂಗಾಧಾರಿತ ವಿಷಯಗಳು; ಮತ್ತು ಆದಿವಾಸಿ ಹಕ್ಕುಗಳ ರಕ್ಷಣೆಗೆ ಸಂಬಂಧಿತ ವಿಷಯಗಳು – ಇವುಗಳ ಬಗ್ಗೆ ರಭಸದಿಂದ ಕಾರ್ಯಪ್ರವೃತ್ತವಾಗಬೇಕು. ಇದಕ್ಕಾಗಿ ರಚಿಸಿರುವ ವಿಶಾಲ ವೇದಿಕೆಗಳು ಈ ಚಟುವಟಿಕೆಗಳಲ್ಲಿ ಭಾಗವಹಿಸಲಿಚ್ಛಿಸುವ ಸಮಾನಮನಸ್ಕ ಶಕ್ತಿಗಳನ್ನು ಸಕ್ರಿಯವಾಗಿ ಕೈಜೋಡಿಸಲು ಪ್ರಯತ್ನಿಸಬೇಕು.
8. ಪಕ್ಷದ ದೈನಂದಿನ ಚಟುವಟಿಕೆಗಳಲ್ಲಿ ಆಧುನಿಕ ಸಂಪರ್ಕ ಸಾಧನಗಳನ್ನು ಸಲಕರಣೆಗಳ ಬಳಕೆಯನ್ನು ತುರ್ತಾಗಿ ಆರಂಭಿಸಬೇಕು.
9. ಮೇಲೆ ಹೇಳಿದ ಪಾಠಗಳನ್ನು ಕಲಿತು ನಮ್ಮ ನ್ಯೂನತೆಗಳನ್ನು ಹೋಗಲಾಡಿಸಬೇಕು. ಇದರಿಂದ ಮಾತ್ರ ಸ್ವತಂತ್ರ ಸಂಘಟನಾ ಮತ್ತು ರಾಜಕೀಯ ಮಧ್ಯಪ್ರವೇಶದ ಸಾಮರ್ಥ್ಯಗಳನ್ನು ಬಲಪಡಿಸಲು ಸಾಧ್ಯ.
10. ಹೊಸ ಶಿಕ್ಷಣ ನೀತಿಯ ವಿರುದ್ಧ ಹೋರಾಡಲು ವಿದ್ಯಾರ್ಥಿ ಸಂಘಟನೆಗಳ ಜತೆ ಬುದ್ಧಿಜೀವಿಗಳು, ಶಿಕ್ಷಣವೇತ್ತರು ಇರುವ ವಿಶಾಲ ರಂಗವನ್ನು ಕಟ್ಟಬೇಕು
11. ಹೆಚ್ಚುತ್ತಿರುವ ನಿರುದ್ಯೋಗದ ವಿರುದ್ಧ ನಿರ್ದಿಷ್ಟ ಗುರಿಗಳಿರುವ ಕಾರ್ಯಕ್ರಮಗಳನ್ನು ರೂಪಿಸಬೇಕು.
12. ತ್ರಿಪುರಾದಲ್ಲಿ ಬಿಜೆಪಿ ಮತ್ತು ಬಂಗಾಳದಲ್ಲಿ ತೃಣಮೂಲ–ಬಿಜೆಪಿಗಳು ಒಡ್ಡಿರುವ ಸವಾಲುಗಳನ್ನು ಮತ್ತು ದಾಳಿಗಳನ್ನು ಎದುರಿಸಲು ನಮ್ಮ ಪಕ್ಷದ ಘಟಕಗಳು ಚೈತನ್ಯಶೀಲವಾಗಿ ಮುನ್ನಡೆಯಬೇಕಾಗಿದೆ. ಚುನಾವಣೆಯ ನಂತರ ಕೇರಳ ಎಲ್.ಡಿ.ಎಫ್. ಸರಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನಗಳನ್ನು ತೀವ್ರಗೊಳಿಸಲಾಗುತ್ತದೆ. ಒಕ್ಕೂಟ ತತ್ವಗಳನ್ನು ಎತ್ತಿ ಹಿಡಿಯಲು ಮತ್ತು ಕೇರಳ ರಾಜ್ಯ ಸರಕಾರಕ್ಕೆ ಸೌಹಾರ್ದ ಬೆಂಬಲ ನೀಡಲು ಪಕ್ಷ ಪ್ರಚಾರವನ್ನು ಬಲಗೊಳಿಸಬೇಕು.

**ಮುಕ್ತಾಯ**

ಈ ಚುನಾವಣೆಗಳು ದೇಶದಲ್ಲಿ ಬಲಪಂಥೀಯ ರಾಜಕೀಯದ ದಾಳಿಯನ್ನು ಕ್ರೋಢಿಕರಿಸಿವೆ. ಬಲಪಂಥೀಯ ಕ್ರೋಢೀಕರಣಕ್ಕೆ ರಾಜಕೀಯ ಎಡಪಂಥ ಮಾತ್ರ ಪರಿಣಾಮಕಾರಿ ಪ್ರತಿರೋಧ ಒಡ್ಡಲು ಸಾಧ್ಯ. ಬಲಪಂಥೀಯ ಆಕ್ರಮಣವನ್ನು ಹಿಮ್ಮೆಟ್ಟಿಸಲು ಸಿಪಿಐ(ಎಂ) ಮತ್ತು ಎಡಪಂಥಕ್ಕೆ ಮಾತ್ರ ಅಗತ್ಯವಾದ ಸುಸಂಗತ ಸೈದ್ಧಾಂತಿಕ, ರಾಜಕೀಯ ಮತ್ತು ಸಂಘಟನಾ ಶಕ್ತಿ ಇರುವುದು. ಅತ್ಯಂತ ಪ್ರತಿಕೂಲ ಸಂದರ್ಭಗಳಲ್ಲಿ ಹಿಂದೆಯೂ ಇದನ್ನು ಮಾಡಲಾಗಿದೆ. ಈ ಹೋರಾಟವನ್ನು ಇವತ್ತಿನ ಕಷ್ಟಕಾರಕ ಪರಿಸ್ಥಿತಿಗಳಲ್ಲಿ ಸಹ ಮುಂದೊಯ್ಯಲಾಗುವುದು. ಸಿಪಿಐ(ಎಂ) ಮತ್ತು ಎಡಪಂಥಕ್ಕೆ ನಿರಾಶೆಯಾಗಿಲ್ಲ, ಸೋಲಿನ ಹತಾಶೆಯೂ ಇಲ್ಲ. ಸಿಪಿಐ(ಎಂ) ಇಮ್ಮಡಿಗೊಳಿಸಿದ ಚೈತನ್ಯ ಮತ್ತು ದೃಢತೆಯೊಂದಿಗೆ, ತನ್ನ ನ್ಯೂನತೆಗಳನ್ನು ಹೋಗಲಾಡಿಸಲು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳುವುದು, ಹಾಗೂ ತನ್ನನ್ನು ಮತ್ತು ಎಡಪಂಥವನ್ನು ಬಲಪಡಿಸುವುದು.

ಮೂಲಭೂತ ರಾಜಕೀಯ/ಸಾಮಾಜಿಕ ಬದಲಾವಣೆಗಳ ಮೂಲಕ ಶೋಷಣಾ–ರಹಿತ ಸಮಾಜದ ಸ್ಥಾಪನೆಯ ಗುರಿಯನ್ನು ಸಾಧಿಸಲು ಕಮ್ಯುನಿಸ್ಟರಾಗಿ ನಾವು ಬದ್ಧರಾಗಿದ್ದೇವೆ. ನಾವು ಜನತೆಯ ಬಳಿ ಮತ್ತೆ ಹೋಗುತ್ತೇವೆ, ಅವರಿಂದ ಕಲಿಯುತ್ತೇವೆ ಮತ್ತು ಅವರ ಜತೆ ಜೀವಂತ ಸಂಬಂಧಗಳನ್ನು ಹೊಂದುತ್ತೇವೆ. ಅವರ ಕಾಳಜಿಗಳಿಗಾಗಿ ಹೋರಾಡುತ್ತೇವೆ.

ಪಕ್ಷ ಆರೆಸ್ಸೆಸ್–ಬಿಜೆಪಿಯ ಸಿದ್ಧಾಂತ ಮತ್ತು ರಾಜಕೀಯದ ವಿರುದ್ಧ ಹೋರಾಟವನ್ನು ಪಟ್ಟುಹಿಡಿದು ಮುಂದೊಯ್ಯುವುದು. ಜನತೆಯ ಜೀವನೋಪಾಯಗಳನ್ನು ಹಾಳುಗೆಡವುತ್ತಿರುವ ನವ–ಉದಾರವಾದಿ ನೀತಿಗಳ ವಿರುದ್ಧ, ಪಕ್ಷವು ಐಕ್ಯ ಪ್ರತಿರೋಧ ಒಡ್ಡಲು ಮುನ್ನುಗ್ಗುವುದು. ಪ್ರಜಾಸತ್ತೆಯ ಮತ್ತು ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಯೊಂದಿಗೆ, ಇಂತಹ ಹೋರಾಟಗಳನ್ನು ತೀವ್ರಗೊಳಿಸಲಾಗುವುದು. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಕಟ್ಟಿ ಮುನ್ನಡೆಸಲು ಪಕ್ಷ ತನ್ನೆಲ್ಲಾ ಬಲವನ್ನು ಧಾರೆಯೆರೆಯುವುದು. ●

## ಅವಧಿ ವಿಸ್ತರಿಸಲು ಆದಿವಾಸಿಗಳ ಆಗ್ರಹ.... ಪುಟ 16 ರಿಂದ

ನ್ಯಾಯ ಒದಗಿಸುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಅರಣ್ಯ, ಕಂದಾಯ, ಸಮಾಜ ಕಲ್ಯಾಣದ ಇಲಾಖೆಯ ಸಚಿವರು, ಅಧಿಕಾರಿಗಳು ಕಾರ್ಯಪ್ರವೃತ್ತರಾಗುವುದು ಅಗತ್ಯ ಎಂದು ಆದಿವಾಸಿ ಹಕ್ಕುಗಳ ಸಮಿತಿಯು ಅಭಿಪ್ರಾಯ ಪಟ್ಟಿದೆ.

ಈ ಹಿನ್ನೆಲೆಯಲ್ಲೂ ಇಲಾಖೆಗಳು ಮತ್ತು ಜನ ಸಂಘಟನೆಗಳು ಜನತೆಯ ನಡುವೆ ಜಾಗೃತಿಯನ್ನು ಮೂಡಿಸಿ ಆದಿವಾಸಿಗಳ ಹಕ್ಕುಗಳನ್ನು ಪಡೆಯಲು ಮುಂದಾಗಬೇಕಿದೆ. ಅದಕ್ಕಾಗಿ ರಾಜ್ಯದಲ್ಲಿ 'ಜಾಗೃತ ಅಭಿಯಾನ'ವನ್ನು ನಡೆಸಲಾಗುತ್ತಿದ್ದು ಅದನ್ನು ತೀವ್ರವಾಗಿ ಮುಂದುವರಿಸಲು ಸಂಘವು ನಿರ್ಧರಿಸಿದೆ.

**ಪರಿಹಾರ ಕಾರ್ಯಕ್ಕೆ ಆಗ್ರಹ:**

ರಾಜ್ಯದಲ್ಲಿ ಮಳೆಯ ಅಭಾವ ಮತ್ತು ಬರದ ಮುಂದುವರಿಕೆ ಹಿನ್ನೆಲೆಯಲ್ಲಿ ಅತಂತ್ರ ಸ್ಥಿತಿಯಲ್ಲಿರುವ ಆದಿವಾಸಿ ಸಮುದಾಯಗಳಿಗೆ ಆಹಾರ, ನೀರು ಮತ್ತು ಉದ್ಯೋಗದ ಅವಕಾಶಗಳನ್ನು ಕಲ್ಪಿಸಿಕೊಡಲು ಸರ್ಕಾರವನ್ನು ಒತ್ತಾಯಿಸಿದೆ.

ಈ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲು ಸಂಘಟನೆ ನಿರ್ಧರಿಸಿದೆ. ಈ ಪ್ರದೇಶಗಳ ಉಸ್ತುವಾರಿ ಸಚಿವರು ಮತ್ತು ಜಿಲ್ಲಾಧಿಕಾರಿಗಳ ಮುತುವರ್ಜಿಯಲ್ಲಿ ಕೂಡಲೇ ಸಮಾಲೋಚನಾ ಸಭೆಗಳನ್ನು ನಡೆಸಿ ಪ್ರದೇಶವಾರು ಕ್ರಮಗಳನ್ನು ಕೈಗೊಳ್ಳಬೇಕೆಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ಆಗ್ರಹಿಸಿದೆ.

**ವೈ.ಕೆ. ಗಣೇಶ್**

# ಪಶ್ಚಿಮ ಏಶ್ಯಾದಲ್ಲಿ ಯುದ್ಧದ ಬೆದರಿಕೆ

**ಪ್ರಕಾಶ್ ಕಾರಟ್ – ಅನುವಾದ: ನಾಗರಾಜ್ ನಂಜುಂಡಯ್ಯ**



ಇರಾನ್ ಮೇಲೆ ಅಮೆರಿಕವು ಹೆಚ್ಚೆಚ್ಚು ಬೆದರಿಕೆಗಳನ್ನು ಒಡ್ಡುತ್ತಿದೆ. ಅಧ್ಯಕ್ಷ ಟ್ರಂಪ್ ಆಡಳಿತದ ಕೆಲವು ವಿಭಾಗಗಳು ಈಗಾಗಲೇ ಯುದ್ಧಕಹಳೆಗಳನ್ನು ಊದುತ್ತಾ, ಇರಾನ್ ವಿರುದ್ಧ ಮಿಲಿಟರಿ ಸಂಘರ್ಷದ ಬೆದರಿಕೆಯನ್ನು ಒಡ್ಡುತ್ತಿದೆ.

ಜೂನ್ 13 ರಂದು, ಒಮನ್ ಕೊಲ್ಲಿಯಲ್ಲಿ ಎರಡು ತೈಲ ಟ್ಯಾಂಕರ್‌ಗಳ ಮೇಲೆ ನಡೆದ ದಾಳಿಯನ್ನು, ಇರಾನನು ಗುರಿಯಾಗಿಸಲು ಮತ್ತೊಂದು ನೆಪ ಮಾಡಿಕೊಂಡಿದೆ. ಟ್ರಂಪ್ ಆಡಳಿತವು ಇರಾನನ್ನು ಈ ದಾಳಿಗೆ ಹೊಣೆಗಾರರನ್ನಾಗಿ ಮಾಡಲು ಸಂಚು ರೂಪಿಸಿದೆ. ಈ ದಾಳಿಯಲ್ಲಿ 'ಗುಪ್ತಚರ ವರದಿಗಳ ಪ್ರಕಾರ ಬಳಸಿದ್ದ ಶಸ್ತ್ರಾಸ್ತ್ರಗಳು ಮತ್ತು ಈ ಕಾರ್ಯಾಚರಣೆಗೆ ಬೇಕಾದ ಪರಿಣತಿಯ ಮಟ್ಟವನ್ನು ಆಧರಿಸಿ' ಈ ದಾಳಿಯನ್ನು ಇರಾನೇ ನಡೆಸಿದೆ ಎಂಬ ಆರೋಪವನ್ನು ಯುಎಸ್ ವಿದೇಶಾಂಗ ಕಾರ್ಯ ದರ್ಶಿ ಮೈಕ್ ಪೊಂಪಿಯೊ ಮಾಡಿದ್ದಾರೆ.

ಆದಾಗ್ಯೂ, ಇದು ಒಂದು 'ಹುಸಿ ಕಾರ್ಯಾಚರಣೆ' (ಅಂದರೆ, ಹೊಣೆಯನ್ನು ಮತ್ತೊಬ್ಬರ ಮೇಲೆ ಹಚ್ಚುವ ತೋರಿಕೆ ಉಂಟು ಮಾಡಲು ಯುಎಸ್ ನಡೆಸಿರುವ ಒಂದು ರಹಸ್ಯ ಕಾರ್ಯಾಚರಣೆ ಇರಬಹುದು ಎಂಬ ಸಂಶಯ) ಎಂಬ ಬಲವಾದ ಅನುಮಾನವಿದೆ ಇಂತಹ 'ಹುಸಿ ಕಾರ್ಯಾಚರಣೆ'ಗಳನ್ನು ನಡೆಸುವ ದೀರ್ಘ ಚರಿತ್ರೆಯನ್ನು ಈ ಮೊದಲಿನಿಂದಲೂ ಯುಎಸ್ ಹೊಂದಿದೆ. ಹಿಂದೆ, 1964 ರಲ್ಲಿ, ಉತ್ತರ ವಿಯೆಟ್ನಾಮಿನ ವಿರುದ್ಧ ಕುಖ್ಯಾತ ಟೊಂಕಿನ್ ಕೊಲ್ಲಿಯ ಇಂತಹ ಹುಸಿ ಘಟನೆಯನ್ನು ಯುಎಸ್ ತನ್ನ ಮಿಲಿಟರಿ ಕಾರ್ಯಾಚರಣೆಯನ್ನು ಪ್ರಾರಂಭಿಸಲು ಬಳಸಿತ್ತು.



ಯುಎಸ್ ಮತ್ತು ಇರಾನ್ ನಡುವೆ ಮಾತುಕತೆಯ ಸಾಧ್ಯತೆಗಳ ಬಗ್ಗೆ ಅನ್ವೇಷಣೆ ನಡೆಸುವ ಸಲುವಾಗಿ, ಜಪಾನಿನ ಪ್ರಧಾನ ಮಂತ್ರಿ ಶಿಂಜೊ ಅಬೆ ತಮ್ಮ ರಾಜಧಾನಿ ಟೆಹ್ರಾನ್‌ಗೆ ಭೇಟಿ ನೀಡುತ್ತಿದ್ದ ಸಮಯದಲ್ಲಿ ಇರಾನ್ ಇಂತಹ ದಾಳಿಯಲ್ಲಿ ಭಾಗಿಯಾಗಿರುವ ಸಾಧ್ಯತೆ ಬಹಳ ಕಡಿಮೆ. ಇದಲ್ಲದೇ, ದಾಳಿಯಿಂದ ಹಾನಿಗೊಳಗಾದ ಟ್ಯಾಂಕರ್‌ಗಳು ಜಪಾನ್ ಗೆ ತೈಲವನ್ನು ಸಾಗಾಣಿಕೆ ಮಾಡುತ್ತಿದ್ದವು. ಜೊತೆಗೆ, ಈ ದಾಳಿಯ ಹಿಂದೆ ಇತರೆ ಶಕ್ತಿಗಳು ಇರಬಹುದು ಎಂದು ನಂಬಲು ಪೂರಕವಾದ ಆಧಾರಗಳು ಸಹ ಇವೆ ಎನ್ನಲಾಗಿದೆ. ಅದರಲ್ಲೂ ವಿಶೇಷವಾಗಿ ಇಸ್ರೇಲ್ ಮತ್ತು ಸೌದಿ ಅರೇಬಿಯಾಗಳು, ಇರಾನ್ ಮೇಲೆ ಯುಎಸ್ ಮಿಲಿಟರಿ ದಾಳಿ ನಡೆಸುವುದನ್ನು ಉತ್ಸುಕತೆಯಿಂದ ಎದುರು ನೋಡುತ್ತಿರುವುದು ಈ ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ.

ಟ್ರಂಪ್ ಆಡಳಿತವು ಈಗಾಗಲೇ ಇರಾನ್‌ನೊಂದಿಗೆ ಘರ್ಷಣೆಯ ದಾರಿಯಲ್ಲಿದೆ. 2015ರಲ್ಲಿ, ಒಬಾಮ ಅಧ್ಯಕ್ಷರಾಗಿದ್ದ ಅವಧಿಯಲ್ಲಿ, ಇರಾನ್ ನೊಂದಿಗೆ ಜರ್ಮನಿ, ಮತ್ತು ಇನ್ನಿತರ ನಾಲ್ಕು ಭದ್ರತಾ ಮಂಡಳಿಯ ಖಾಯಂ ಸದಸ್ಯದೇಶಗಳೊಂದಿಗೆ, ಅಮೆರಿಕಾ ಸಹಿ ಹಾಕಿದ್ದ, ನ್ಯೂಕ್ಲಿಯಾರ್ (ಜಂಟೀ ಸಮಗ್ರ ಯೋಜನಾ) ಒಪ್ಪಂದದಿಂದ ಟ್ರಂಪ್ ಹಿಂದಕ್ಕೆ ಸರಿದಿದ್ದರು. ಆದಾಗ್ಯೂ, ಒಪ್ಪಂದಕ್ಕೆ ಸಹಿ ಮಾಡಿದ್ದ ಇನ್ನಿತರ 5 ರಾಷ್ಟ್ರಗಳು ಮತ್ತು ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (ಐಎಇಎ) ಗಳು, ಒಪ್ಪಂದದ ಎಲ್ಲಾ ನಿಯಮಗಳಿಗೆ ಅನುಗುಣವಾಗಿ ಇರಾನ್ ನಡೆದುಕೊಂಡಿದೆ ಎಂದು ಒಪ್ಪಿಕೊಂಡಿದಾಗ್ಯೂ, ಯುಎಸ್ ಏಕಪಕ್ಷೀಯವಾಗಿ ಇರಾನ್ ಮೇಲೆ ದಿಗ್ಬಂಧನಗಳನ್ನು ವಿಧಿಸಿತು. ಈ ದಿಗ್ಬಂಧನಗಳ ಮೂಲ ಗುರಿ ಎಂದರೆ, ಇರಾನಿನ ತೈಲ ಉದ್ಯಮ ಮತ್ತು ರಫ್ತಿನ ಮೇಲೆ ದಾಳಿ ನಡೆಸಿ, ಆ ಮೂಲಕ ಇರಾನ್‌ನ ಆರ್ಥಿಕತೆಯನ್ನು ದುರ್ಬಲಗೊಳಿಸುವುದು.

ಯು.ಎಸ್ ಪರಮಾಣು ಚಾಲಿತ ವಿಮಾನವಾಹಕ ನೌಕಾ ಪಡೆಯನ್ನು ಪರ್ಷಿಯನ್ ಕೊಲ್ಲಿಗೆ ಕಳುಹಿಸಿದೆ. ಜೊತೆಗೆ ಬಿ 52 ಬಾಂಬರ್‌ಗಳು ದೋಹಾದ ಸೆಂಟ್ರಲ್ ಕಮಾಂಡ್ ವಾಯು ನೆಲೆಯಲ್ಲಿ ಬೀಡು ಬಿಟ್ಟಿವೆ. ಟ್ಯಾಂಕರ್‌ಗಳ ಮೇಲೆ ನಡೆದ ದಾಳಿಯ ನಂತರ, ಹೆಚ್ಚುವರಿ ಸಾವಿರ ಸೈನಿಕರನ್ನು ಪಶ್ಚಿಮ ಏಷಿಯಾಕ್ಕೆ ಪೆಂಟಗನ್ ಕಳುಹಿಸಿದೆ.

ಇಂತಹ ಬೆದರಿಕೆಗಳು ಮತ್ತು ದಿಗ್ಬಂಧನಗಳಿಗೆ ಇರಾನ್ ತಲೆಬಾಗಲು ನಿರಾಕರಿಸಿದೆ. ಒಪ್ಪಂದದ ರಕ್ಷಣೆಗೆ ಯುರೋಪಿಯನ್ ಪಾಲುದಾರರಿಗೆ ಕೊನೆಯ ಗಡುವು ನೀಡಿರುವ ಬಗ್ಗೆ ತಿಳಿಸಿದೆ. 60 ದಿನಗಳಲ್ಲಿ ದಿಗ್ಬಂಧನಗಳನ್ನು ಹಿಂಪಡೆಯಲು ಎಲ್ಲರೂ ಕಾರ್ಯನಿರ್ವಹಿಸಬೇಕು, ಹಾಗೇನಾದರೂ ವಿಫಲವಾದರೆ, ತಾನು ಪರಮಾಣು ಇಂಧನವನ್ನು ಪುಷ್ಟೀಕರಿಸುವ ಒಪ್ಪಂದದ ನಿಯಮಗಳಿಗೆ ಬದ್ಧತೆಯನ್ನು ಕಡಿಮೆಗೊಳಿಸಲು ಪ್ರಾರಂಭಿಸುವ ಇರಾದೆಯನ್ನು ಇರಾನ್ ವ್ಯಕ್ತ ಪಡಿಸಿದೆ.

ಟ್ರಂಪ್ ಆಡಳಿತದ ನಡೆಗಳ ಅನಿರೀಕ್ಷಿತತೆ ಮತ್ತು ಆಡಳಿತದ ಬಣಗಳಿಂದ ಹೊರಹೊಮ್ಮುವ ವಿಭಿನ್ನ ಸಂಕೇತಗಳು ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಯುದ್ಧದ ಬೆದರಿಕೆಯ ಅಪಾಯಕಾರಿ ಆಯಾಮವನ್ನು ಸೃಷ್ಟಿಸುತ್ತಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಜಾನ್ ಬೋಲ್ಟನ್ ಇರಾನ್‌ನ ಘೋಷಿತ ಎದುರಾಳಿ ಮತು ಒಬ್ಬ ಯುದ್ಧಕೋರ. ಇರಾನ್‌ನೊಂದಿಗಿನ ಸಂಘರ್ಷದ ಸಾಧ್ಯತೆಗಳ ಬಗ್ಗೆ ಪೆಂಟಗನ್ ಹೆಚ್ಚು ಸಂಯಮ ಮತ್ತು ಜಾಗರೂಕತೆಯ ನೀತಿ ಅನುಸರಿಸಿದೆ. ಆದರೆ, ಟ್ರಂಪ್ ಆಡಳಿತವು ಇಸ್ರೇಲ್ ಅನ್ನು ಕುರುಡಾಗಿ ಬೆಂಬಲಿಸುತ್ತಿದೆ. ಅದು ಗೋಲಾನ್ ಹೈಟ್ಸ್ ಆಕ್ರಮಿತ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುತ್ತಿರಲಿ ಅಥವಾ ಅಕ್ರಮ ವಸಾಹತುಗಳನ್ನು ಕಾನೂನು ಬದ್ಧಗೊಳಿಸುತ್ತಿರಲಿ, ಇರಾನಿನ ಪರಮಾಣು ಒಪ್ಪಂದವನ್ನು ವಿರೋಧಿಸಿದ್ದ ಇಸ್ರೇಲ್, ಇರಾನ್ ವಿರುದ್ಧ ಮಿಲಿಟರಿ ಕಾರ್ಯಾಚರಣೆಯನ್ನು ಪ್ರಾರಂಭಿಸುವಂತೆ, ಟ್ರಂಪ್ ಆಡಳಿತದ ಮೇಲೆ ಬಹಿರಂಗವಾಗಿ ಕುಮ್ಮಕ್ಕು ಕೊಡುತ್ತಿದೆ. ಈ ವಿಚಾರದಲ್ಲಿ ಸೌದಿ ಅರೇಬಿಯಾವು ರಹಸ್ಯ ಬೆಂಬಲವನ್ನು ನೀಡುತ್ತಿದೆ.

ಮಿಲಿಟರಿ ಘರ್ಷಣೆ ಇರಾನ್ ಸುತ್ತ ಕೇಂದ್ರೀಕರಿಸಿದೆ. ಇದು ಪಶ್ಚಿಮ ಏಶ್ಯಾದ ಆ ಪ್ರದೇಶಕ್ಕೆ ಹಾನಿಕಾರಕ ಪರಿಣಾಮಗಳನ್ನು ಉಂಟು ಮಾಡುತ್ತದೆ. ಇರಾನ್, ಸಿರಿಯಾ ಅಥವಾ ಇರಾಕ್ ಅಲ್ಲ ಎಂಬುದನ್ನು ಅರಿಯಬೇಕು. ಇದು ಯುಎಸ್ ನ ಯಾವುದೇ ಆಕ್ರಮಣಶೀಲತೆಗಳ ವಿರುದ್ಧ ಹೋರಾಡಲು ಆರ್ಥಿಕ ಮತ್ತು ಮಿಲಿಟರಿ ಎರಡೂ ಸಂಪನ್ಮೂಲಗಳನ್ನು ಹೊಂದಿದೆ. ಯುಎಸ್ ಏನಾದರೂ, ಹಾರ್ಮುಜ್ ಜಲಸಂಧಿಗೆ ತಡೆ ಹಾಕಿದರೆ, ವಿಶ್ವದ ತೈಲ ಪೂರೈಕೆಯ ಗಣನೀಯ ಭಾಗವನ್ನು ಉಸಿರುಗಟ್ಟಿಸುತ್ತದೆ. ಹೀಗಾಗಿ, ಇರಾನ್ ವಿರುದ್ಧದ ಯಾವುದೇ ಮಿಲಿಟರಿ ಕ್ರಮವು ಇಡೀ ಪ್ರದೇಶವನ್ನು ಮಿಲಿಟರಿ ಸಂಘರ್ಷದಲ್ಲಿ ಮುಳುಗಿಸುತ್ತದೆ.

ಇಂತಹ ಅಪಾಯಕಾರಿ ಪರಿಸ್ಥಿತಿಯನ್ನು ಹುಟ್ಟು ಹಾಕುವುದಕ್ಕೆ ಟ್ರಂಪ್ ಆಡಳಿತವೇ ಹೊಣೆಯಾಗಿರುತ್ತದೆ. ಇರಾನ್‌ನೊಂದಿಗೆ ಇದ್ದ ಉತ್ತಮ ಒಪ್ಪಂದವನ್ನು ಯುಎಸ್ ಏಕಪಕ್ಷೀಯವಾಗಿ ಮುರಿದು ಹಾಕಿತು. ಆ ನಂತರ ಈ ಸೂಕ್ಷ್ಮ ಪ್ರದೇಶದಲ್ಲಿ ಮಿಲಿಟರಿ ಪ್ರಚೋದನೆಯ ಕಾರ್ಯದಲ್ಲಿ ತೊಡಗಿದೆ. ಯುರೋಪಿಯನ್ ಮಿತ್ರ ರಾಷ್ಟ್ರಗಳು ಸಾಮಾನ್ಯವಾಗಿ ಅಮೆರಿಕದ ಆರ್ಥಿಕ ಮತ್ತು ಮಿಲಿಟರಿ ಪ್ರಾಬಲ್ಯ ಎದುರು ನಿಲ್ಲುವ ಸಾಹಸ ಮಾಡಲಾರವು. ಆದರೆ, ಯುಎಸ್ ತನ್ನ ಮಿಲಿಟರಿ ದುರುಪಯೋಗ ಮಾಡಿ, ಮತ್ತೊಂದು ಇರಾಕ್ ನ್ನು ತಡೆಗಟ್ಟಲು, ಅಮೆರಿಕದ ಮಿತ್ರರಾಷ್ಟ್ರಗಳು ಕನಿಷ್ಠ ತಮ್ಮ ಹಿತಾಸಕ್ತಿಗಾಗಿ ಒಂದು ನಿಲುವನ್ನು ತೆಗೆದುಕೊಳ್ಳ ಬೇಕಾಗಿದೆ.

ಇರಾನ್ ಪರವಾಗಿ ನಿಂತಿರುವಂಥ ರಷ್ಯಾ ಮತ್ತು ಚೀನಾ ರಾಷ್ಟ್ರಗಳು ಕೂಡ, ಇರಾನ್ ಮೇಲೆ ಅಮೆರಿಕವು ನಡೆಸುವ ಯುದ್ಧವನ್ನು ನಿಯಂತ್ರಿಸಲು ಯುರೋಪಿಯನ್ ಶಕ್ತಿಗಳನ್ನು ಒಗ್ಗೂಡಿಸುವ ಪ್ರಯತ್ನ ಮಾಡಬೇಕು.

ಭಾರತವು ಈ ವಿಚಾರದಲ್ಲಿ ತನ್ನ ರಾಷ್ಟ್ರೀಯ ಹಿತಾಸಕ್ತಿ ಗಾಗಿ, ಮೋದಿ ಸರಕಾರವು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮೈಕ್ ಪೊಂಪಿಯೊ ಅವರ ದೆಹಲಿ ಭೇಟಿಯ ಸಂದರ್ಭದಲ್ಲಿ ಇರಾನ್ ವಿರುದ್ಧದ ಯಾವುದೇ ಅಕ್ರಮಣಕಾರಿ ಕ್ರಮವನ್ನು ಭಾರತ ವಿರೋಧಿಸುತ್ತದೆ ಎಂದು ದೃಢವಾಗಿ ಪ್ರತಿಪಾದಿಸಬೇಕು.

(ಜೂನ್ 18, 2019)

# ಹದಗೆಡುತ್ತಿರುವ ಪಶ್ಚಿಮ ಏಶ್ಯಾ ಪರಿಸ್ಥಿತಿ

ಪ್ರಕಾಶ್ ಕಾರಟ್ ಅವರ ಈ ಲೇಖನದ ನಂತರ ಪಶ್ಚಿಮ ಏಶ್ಯಾದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಈ ಕೆಳಗಿನ ಬೆಳವಣಿಗೆಗಳು ಆಗಿವೆ:

ಇರಾನ್, ಜೂನ್ 20 ರಂದು ಅಮೆರಿಕಾದ ಮಾನವರಹಿತ ಗೂಢಚಾರಿ ಡ್ರೋನ್ ವಿಮಾನವನ್ನು ತನ್ನ ಸಯ್ಯದ್-2ಸಿ ಕ್ಷಿಪಣಿ ಉಪಯೋಗಿಸಿ ಹೊಡೆದುರುಳಿಸಿದೆ. ತನ್ನ ವಾಯುಪ್ರದೇಶವನ್ನು ಉಲ್ಲಂಘಿಸಿದ್ದಕ್ಕಾಗಿ ಡ್ರೋನ್ ಹೊಡೆದು ಉರುಳಿಸಲಾಯಿತು ಎಂದು ಇರಾನ್ ಹೇಳಿಕೆ ಕೊಟ್ಟಿದೆ. ಅಮೆರಿಕ ಇದು ಅಂತರ್ರಾಷ್ಟ್ರೀಯ ನೀರಿಗೆ ಸೇರಿದ ಜಾಗ ಎಂದು ಹೇಳಿಕೆ ಕೊಟ್ಟಿದೆ. ವಾಸ್ತವದಲ್ಲಿ ಆ ಪ್ರದೇಶದಲ್ಲಿ ಅಂತರ್ರಾಷ್ಟ್ರೀಯ ನೀರಿನ ಜಾಗ ಆಗಿರುವುದು ಸಾಧ್ಯವೇ ಇಲ್ಲ. ಪರ್ಷಿಯನ್ ಕೊಲ್ಲಿಯಲ್ಲಿ ಹಾದುಹೋಗಬೇಕಾದರೆ ಅಲ್ಲಿರುವ ಕೊಲ್ಲಿಯ ಅತಿ ಸಣ್ಣ ಜಾಗ ಇರುವುದೇ 39 ಕಿ.ಮಿ. ಉದ್ದಗಲ. ಅದರ ಒಂದು ಭಾಗ ಇರಾನಿನದ್ದು, ಇನ್ನೊಂದು ಭಾಗ ಒಮಾನ್ ನದ್ದು. ವಿಶ್ವದ 33% ಕಚ್ಚಾ ತೈಲ ಪರ್ಷಿಯನ್ ಕೊಲ್ಲಿಯಿಂದಲೇ ಹಾದುಹೋಗಬೇಕು. ತನ್ನನ್ನು ಕಚ್ಚಾ ತೈಲದ ಮಾರುಕಟ್ಟೆಯಿಂದ ನಿರ್ಬಂಧಿಸಿದರೆ ಪರ್ಷಿಯನ್ ಕೊಲ್ಲಿಯಲ್ಲಿ ಬೇರೆಯವರ ಕಚ್ಚಾ ತೈಲ ಹಾದುಹೋಗುವುದಕ್ಕೆ ಬಿಡುವುದಿಲ್ಲ ಎಂದು ಇರಾನ್ ಕೂಡ ಎಚ್ಚರಿಸುತ್ತಲೇ ಬಂದಿದೆ. ಘಟನೆಯ ನಂತರ ಇರಾನಿನ ಮೇಜರ್ ಜನರಲ್ ಮೊಹಮ್ಮದ್ ಬಕೇರಿ 'ಇರಾನ್ ಯಾವುದೇ ದೇಶದೊಂದಿಗೆ ಯುದ್ಧವನ್ನು ಬಯಸುತ್ತಿಲ್ಲ, ಆದರೆ ಇರಾನ್ ಅನ್ನು ರಕ್ಷಿಸಿಕೊಳ್ಳಲು ನಾವು ಸಂಪೂರ್ಣವಾಗಿ ಸಿದ್ಧರಿದ್ದೇವೆ, ಇರಾನ್ ಕೊಲ್ಲಿಯಿಂದ ತೈಲ ರಫ್ತು ಮಾಡುವುದನ್ನು ತಡೆಯಲು ನಿರ್ಧರಿಸಿದರೆ, ಆ ನಿರ್ಣಯವನ್ನು ದೇಶ ಹಾಗೂ ಸಶಸ್ತ್ರ ಪಡೆಗಳು ಪೂರ್ಣವಾಗಿ ಸಾಕಾರಗೊಳಿಸಿ ಸಾರ್ವಜನಿಕವಾಗಿ ಘೋಷಿಸಲಾಗುವುದು' ಎಂಬ ಹೇಳಿಕೆ ಕೊಟ್ಟಿದ್ದಾರೆ.

ಈ ಘಟನೆಯ ನಂತರ ದೊಡ್ಡಣ್ಣ ಟ್ರಂಪ್ 'ಇರಾನ್ ಬಹಳ ದೊಡ್ಡ ತಪ್ಪು' ಮಾಡಿದೆ ಎಂದು ಟ್ವೀಟ್ ಮಾಡಿದ್ದರು. ನಂತರ ಇರಾನಿನ ಮೇಲೆ ದಾಳಿ ಮಾಡಲು ಆದೇಶಿಸಿ, ಆ ಆದೇಶವನ್ನು ಹಿಂಪಡೆದಿದ್ದಾರೆ ಎಂಬ ಮಾಹಿತಿ ಹೊರಬಿದ್ದಿದೆ. ಪರ್ಷಿಯನ್ ಕೊಲ್ಲಿಯನ್ನು ಇರಾನ್ ಮುಚ್ಚಿದರೆ ಅಮೆರಿಕಾದ ಆರ್ಥಿಕತೆ ಮತ್ತು ವಿಶ್ವದ ಆರ್ಥಿಕತೆ ಕುಸಿಯುವ ಭಯ ಇದರ ಹಿಂದಿರುವ ನಿಜವಾದ ಕಾರಣ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸಿದ್ದಾರೆ.

ಭಾರತವು ಜೂನ್ 21ರಂದು ತನ್ನ ಯುದ್ಧ ನೌಕೆಗಳಾದ ಚೆನ್ನೈ ಮತ್ತು ಸುನೈನಾವನ್ನು ಪರ್ಷಿಯನ್ ಕೊಲ್ಲಿಗೆ ಕಳುಹಿಸಲು ನಿರ್ಧರಿಸಿದೆ. ಈ ಕಾರ್ಯಾಚರಣೆಗೆ 'ಆಪರೇಶನ್ ಸಂಕಲ್ಪ್' ಎಂದು ಹೆಸರಿಡಲಾಗಿದೆ ಹಾಗೂ ಯುದ್ಧ ನೌಕೆಗಳನ್ನು ಓಮನ್ ಭಾಗದ ನೀರಿನಲ್ಲಿ ಭಾರತದ ಹಡಗುಗಳ ಭದ್ರತೆಗೆ ನಿಯೋಜಿಸಲ್ಪಟ್ಟಿರುತ್ತದೆ ಎಂದು ವಿವರಿಸಲಾಗಿದೆ. ಅಮೆರಿಕ ಜೊತೆ ಎರಡು ಒಪ್ಪಂದಗಳು (LEMOA and COMCASA) ಮಾಡಿಕೊಂಡಿದೆ. LEMOA ಒಪ್ಪಂದ ಅಮೆರಿಕಾಗೆ ಭಾರತದ ಸೇನಾ ಸೌಕರ್ಯಗಳನ್ನು ಉಪಯೋಗಿಸಿಕೊಳ್ಳುವ ಹಕ್ಕು ನೀಡುತ್ತದೆ ಮತ್ತು COMCASA ಅತಿ ಸೂಕ್ಷ್ಮ ಮಿಲಿಟರಿ ಗುಪ್ತಚರ ವಿವರಗಳನ್ನು ಹಂಚಿಕೊಳ್ಳುವ ಒಪ್ಪಂದವಾಗಿದೆ. ಈ ಒಪ್ಪಂದದ ಭಾಗವಾಗಿ ಭಾರತದ ಯುದ್ಧನೌಕೆಗಳು ಅಲ್ಲಿಗೆ ತಲುಪಿರುವ ಸಾಧ್ಯತೆಯಿದೆ. ತನ್ನ ಹಿತಾಸಕ್ತಿಗಳನ್ನು ಮರೆತು, ಇಸ್ರೇಲ್ ಮತ್ತು ಯುದ್ಧಕೋರ ಅಮೆರಿಕ ಜೊತೆಗೂಡಿ ಅಮೆರಿಕ ಕೇಂದ್ರಿತ ಏಕ ಧ್ರುವಿ ಪ್ರಪಂಚದ ದೃಷ್ಟಿಕೋನವನ್ನು ಜಾರಿ ಮಾಡಲು ಮೋದಿ ಸರಕಾರ ಮುಂದಾಗಿದಯೇ ಎಂಬುದನ್ನು ಕಾದು ನೋಡಬೇಕು.

JANASHAKTHI KANNADA VARA PATRIKE JULY 1-7, 2019 Price: Rs. 10/- Date of Publication: 28 JUNE 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

**ಶಿಬಿ ಧರ್ಮಸ್ಥಳ**

# ಬೆಳ್ತಂಗಡಿ: ದಶಕಗಳ ಹೋರಾಟಕ್ಕೆ ಸಂದ ಜಯ ಕತ್ತಲ ಕಾಡೊಳಗೆ ಬೆಳಗಿತು ಕರೆಂಟ್!

ಸ್ವಾತಂತ್ರ್ಯ ಬಂದು ದಶಕಗಳೇ ಕಳೆದರೂ ಕತ್ತಲ್ಲಿಯೇ ಇದ್ದು ವಿದ್ಯುತ್‌ಗಾಗಿ ನಿರಂತರ ಹೋರಾಟಗಳನ್ನು ಮಾಡುತ್ತಾ ಬಂದಿದ್ದ ಬೆಳ್ತಂಗಡಿ ತಾಲೂಕಿನ ಬಾಂಜಾರು ಮಲೆಕುಡಿಯ ಕಾಲೋನಿಯ ನಿವಾಸಿಗಳು ಇದೀಗ ಕೊನೆಗೂ ವಿದ್ಯುತ್ ಸಂಪರ್ಕವನ್ನು ಕಂಡಿದ್ದಾರೆ.

ಬೆಳ್ತಂಗಡಿ ತಾಲೂಕಿನ ನೆರಿಯ ಗ್ರಾಮದ ದಟ್ಟ ಕಾನನದ ನಡುವೆ ಯೇನಪೋಯ ಎಸ್ಟೇಟಿಗೆ ತಾಗಿಕೊಂಡು ಬಾಂಜಾರು ಮಲೆಕುಡಿಯ ಕಾಲೋನಿಯಲ್ಲಿ 47 ಕುಟುಂಬಗಳು ವಾಸಿಸುತ್ತಿದ್ದು ಇವರು ದಟ್ಟ ಅರಣ್ಯದ ನಡುವೆ ತಮ್ಮದೇ ಆದ ಬದುಕನ್ನು ಕಟ್ಟಿಕೊಂಡಿದ್ದಾರೆ. ಈ ಕಾಲೋನಿಯ ಜನರು ದಶಕಗಳಿಂದ ತಮಗೂ ಮೂಲಭೂತ ಸೌಕರ್ಯಗಳನ್ನು ನೀಡಿ ನಾವೂ ಎಲ್ಲರಂತೆ ಬದುಕುತ್ತೇವೆ ಎಂದು ಜನಪ್ರತಿನಿಧಿಗಳಿಗೆ ಸರಕಾರಗಳಿಗೆ ಮನವಿ ಸಲ್ಲಿಸುತ್ತಲೇ ಬಂದಿದ್ದರು. ಇವರ ಮನವಿಗೆ ಹಲವು ಬಾರಿ ಸರಕಾರಗಳು ಸ್ಪಂದಿಸಿ ವಿದ್ಯುತ್ ಪೂರೈಕೆಗಾಗಿ ಹಲವಾರು ಯೋಜನೆಯಡಿ ಕಾಮಗಾರಿ ಮಂಜೂರಾದರೂ ರಾಷ್ಟ್ರೀಯ ಉದ್ಯಾನವನ ಇತ್ಯಾದಿಗಳ ಕಾರಣವೊಡ್ಡಿ ಅರಣ್ಯ ಇಲಾಖೆ ಇದಕ್ಕೆ ಅಡ್ಡಿಯಾಗುತ್ತಲೇ ಬಂದಿತ್ತು. ಅದರೊಂದಿಗೆ ಖಾಸಗಿ ಎಸ್ಟೇಟುಗಳ ಸಮಸ್ಯೆಯೂ ಸೇರಿದಾಗ ಇವರಿಗೆ ವಿದ್ಯುತ್ ಕನಸಾಗಿಯೇ ಉಳಿದಿತ್ತು.

ವಿದ್ಯುತ್ ಪೂರೈಕೆ ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿ ಇಲ್ಲಿಯೇ ಕಿರು ಜಲವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಿತ್ತು, ಅದು ಕೆಲವೇ ಸಮಯಕ್ಕೆ ಮಾತ್ರ ಪ್ರಯೋಜನಕ್ಕೆ ಬಂತು, ಬಳಿಕ ಸೋಲಾರ್ ಪ್ಲಾಂಟ್ ಮಂಜೂರುರಾದರೂ ಸರ್ಕಾರಿ ಜಮೀನಿನ ಕೊರತೆಯಿಂದ ಅದೂ ಕೈಗೂಡಲಿಲ್ಲ. ಕಳೆದ ಒಂದು ದಶಕಗಳಿಂದ ಶೇಖರ ಲಾಯಿಲ ಮತ್ತು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಅವರ ಮಾರ್ಗದರ್ಶನದಲ್ಲಿ ಸ್ಥಳೀಯರು ಛಲ ಬಿಡದೇ ನಡೆಸಿದ ಪ್ರಯತ್ನ ಅಂತಿಮವಾಗಿ ಫಲಕಂಡಿದ್ದು ಇದೀಗ ಇಲ್ಲಿಗೂ ಕರೆಂಟು ಬಂದಿದೆ.

ದಶಕಗಳ ಹಿಂದೆ ಬಾಂಜಾರು ಮಲೆಗೆ ಡಿ.ಸಿ ಬರುತ್ತಾರೆ ಎಂದು ಇಲ್ಲಿನ ಜನರು ಒಂದು ಕಟ್ಟೆಯನ್ನು ಕಟ್ಟಿದ್ದರು. ಆದರೆ ಅವರು ಅಂದು ಬರಲೇ ಇಲ್ಲ ಆದರೆ ಅದರ ನೆನಪಿಗಾಗಿ ಜನರು



ಸಂರಕ್ಷಿಸುತ್ತಾ ಬಂದಿದ್ದ ಡಿ.ಸಿ ಕಟ್ಟೆಗೆ ಮೊದಲ ಬಾರಿಗೆ ದ.ಕ ಜಿಲ್ಲೆಯ ಜಿಲ್ಲಾಧಿಕಾರಿ ಎ.ಬಿ ಇಬ್ರಾಹಿಂ ಅವರು ಭೇಟಿ ನೀಡಿದ ಬಳಿಕ ಈ ಪ್ರದೇಶದ ಅಭಿವೃದ್ಧಿಕಾರ್ಯಗಳು ಚುರುಕುಗೊಂಡಿದ್ದವು. ಈ ಸಂದರ್ಭದಲ್ಲಿ ಅವರು ವಿದ್ಯುತ್ ಸಂಪರ್ಕಕ್ಕಾಗಿ ಹಲವಾರು ಬಾರಿ ಅಧಿಕಾರಿಗಳ ಸಭೆ ನಡೆಸಿ, ಸರ್ವೆ ನಡೆಸಿದರೂ ಸುಮಾರು 20–21 ಕಿಲೋಮೀಟರ್ ದೂರ ವಿದ್ಯುತ್ ಕಂಬ ಅಳವಡಿಸಲು 1000 ಕ್ಕೂ ಹೆಚ್ಚು ಕಂಬಗಳು ಬೇಕಾಗಿರುವುದರಿಂದ ವಿದ್ಯುತ್ ಪೂರೈಕೆ ದೂರದ ಮಾತಾಗಿಯೇ ಉಳಿದಿತ್ತು. ಆದರೆ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಬಾಂಜಾರು ಮಲೆಕುಡಿಯ ಕಾಲನಿಗೆ ಹೇಗಾದರೂ ಮಾಡಿ ವಿದ್ಯುತ್ ಸಂಪರ್ಕಕ್ಕಾಗಿ ಕಾಲೋನಿಯ ಯುವ ಜನರ ಜೊತೆ ನಿರಂತರ ಶ್ರಮಿಸಿತು. ಅದರ ಭಾಗವಾಗಿ ನೆರಿಯ ಗ್ರಾಮದ ಜೋರ್ಡಾನ್ ಕಂಪನಿ (ಲಿ) ಹಾಗೂ ಯೇನಪೋಯ ಕಂಪನಿ (ಲಿ) ಮಾಲೀಕರ ಜೊತೆಗೆ ನಿರಂತರ ಮಾತುಕತೆ ನಡೆಸಿ ಒಪ್ಪಿಗೆ ಪತ್ರ ಪಡೆದುಕೊಂಡಿತು. ಅದರ ಫಲವಾಗಿ ಮೆಸ್ಕಾಂ ಇಲಾಖೆ ಹೊಸದಾಗಿ ಸರ್ವೆ ನಡೆಸಿ ಯೋಜನೆಗೆ ಮಂಜೂರಾತಿ ನೀಡಿತ್ತು.

ಮಹತ್ವಾಕಾಂಕ್ಷೆಯ ಸೌಭಾಗ್ಯ ಯೋಜನೆಯಡಿಯಲ್ಲಿ ಇಲ್ಲಿಗೆ ಯೋಜನೆ ಮಂಜೂರಾಗಿದ್ದು 1.2 ಕೋಟಿ ರೂಪಾಯಿ ವೆಚ್ಚದಲ್ಲಿ 25 ಕೆವಿ ಸಾಮರ್ಥ್ಯದ 3 ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗಿದೆ. 6.4 ಕಿಲೋಮೀಟರ್ ದೂರ ಹೈಟೆನ್ಶನ್ ವಿದ್ಯುತ್ ಲೈನ್ ಹಾಗೂ 5.3 ಕಿಲೋಮೀಟರ್ ದೂರ ಲೋ





ಟೆನ್ಶನ್ ಲೈನ್ ತಂತಿ ಎಳೆಯಲಾಗಿದೆ. ಸುಮಾರು 436 ವಿದ್ಯುತ್ ಕಂಬಗಳನ್ನು ಅಳವಡಿಸಲಾಗಿದೆ. ವಿದ್ಯುತ್ ಕಾಮಗಾರಿಯನ್ನು ಮಂಗಳೂರಿನ ಜ್ಯೋತಿ ಎಲೆಕ್ಟ್ರಿಕಲ್ಸ್ ಕಂಪನಿ ನಿರ್ವಹಿಸಿದೆ. ಇದು ಬೆಳ್ತಂಗಡಿ ತಾಲೂಕಿನ ಆದಿವಾಸಿ ಸಮುದಾಯದ ಕಾಲನಿಗೆ ಪೂರೈಕೆ ಮಾಡಲಾದ ಅತಿ ದೊಡ್ಡ ವಿದ್ಯುತ್ ಸಂಪರ್ಕವಾಗಿದೆ. ಅರಣ್ಯ ಇಲಾಖೆಯ ಅಡ್ಡಿಯಿಂದಾಗಿ ಅಸಾಧ್ಯವೆಂದು ಬಿಟ್ಟಿದ್ದ ಯೋಜನೆಯನ್ನು ಖಾಸಗಿ ಎಸ್ಟೇಟ್ ಮಾಲಿಕರ ಸಹಕಾರದೊಂದಿಗೆ ಇದೀಗ 12 ಕಿಲೋಮೀಟರ್ ಉದ್ದದಲ್ಲಿ ನೆರಿಯ ಗ್ರಾಮದ ಜೋರ್ಡಾನ್ ಎಸ್ಟೇಟ್ ಮೂಲಕ ಯೆನಪೋಯ ಎಸ್ಟೇಟ್ ದಾಟಿ ಬಾಂಜಾರು ಮಲೆಕುಡಿಯ ಕಾಲನಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಈ ಸಮಸ್ಯೆ ಬಗ್ಗೆ ಇತ್ತೀಚೆಗೆ ಸಂಘದ ರಾಜ್ಯ ಮಟ್ಟದ ನಿಯೋಗವು ಮುಖ್ಯ ಮಂತ್ರಿಗಳೊಂದಿಗೆ ನಡೆಸಿದ ಸಭೆಯಲ್ಲಿಯೂ ಪ್ರಸ್ತಾಪಿತಗೊಂಡಿತ್ತು.

ಬಾಂಜಾರು ಮಲೆಕುಡಿಯ ಕಾಲನಿಗೆ ವಿದ್ಯುತ್ ಸಂಪರ್ಕದ ಹಿಂದೆ ಉಜಿರೆ ಮೆಸ್ಕಾಂ ಎಇ ಕೃಷ್ಣೆಗೌಡ ಹಾಗೂ ತಂಡ ನಿರಂತರ ಸಹಕಾರ ನೀಡಿದ್ದು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯವರು, ಮಾಜಿ ಶಾಸಕ ಕೆ ವಸಂತ ಬಂಗೇರ ಅವರು ಹಾಗೂ ಎರಡು ಎಸ್ಟೇಟ್ ಮಾಲಿಕರು ನೀಡಿರುವ ಸಹಕಾರವನ್ನು ಕಾಲೊನಿಯ ನಿವಾಸಿಗಳು ಸ್ಮರಿಸುತ್ತಾರೆ.

ಸೌಭಾಗ್ಯ ಯೋಜನೆಯಡಿ 1.2 ಕೋಟಿ ವೆಚ್ಚದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಹಲವಾರು ವರ್ಷಗಳ ಬೇಡಿಕೆ ಈಡೇರಿದೆ. ಹಲವಾರು ಯೋಜನೆಗಳಲ್ಲಿ ಮಂಜೂರುಗೊಂಡರೂ ಕೆಲವು ತಾಂತ್ರಿಕ ಸಮಸ್ಯೆಗಳಿಂದ ಸಾಕಷ್ಟು ಹಿನ್ನಡೆಯಾಗಿತ್ತು. ಇದೀಗ ಸೌಭಾಗ್ಯದಿಂದ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

–**ಶಿವಶಂಕರ್** ಎಇಇ ಮೆಸ್ಕಾಂ ಬೆಳ್ತಂಗಡಿ

ನಮ್ಮ ಕಾಲನಿಯಲ್ಲಿ ದೀಪಾವಳಿ ಸಂಭ್ರಮ ಮನೆಮಾಡಿದೆ. ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಪದಾಧಿಕಾರಿಗಳ ನಿರಂತರ ಪ್ರಯತ್ನ, ಖಾಸಗಿ ಎಸ್ಟೇಟ್ ಗಳ ಸಹಕಾರ ಹಾಗೂ ಮಾಜಿ ಶಾಸಕ ವಸಂತ ಬಂಗೇರರ ಸಾಥ್‌ನಿಂದಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ನಮ್ಮ ಮನ, ಮನೆಗಳಲ್ಲಿ ಇದು ಅತ್ಯಂತ ಸಂಭ್ರಮ, ಸಂತೋಷದ ವಿಚಾರ. ನಮ್ಮ ಕಾಲನಿ ಚಿಮಿಣಿ ದೀಪದಿಂದ ಮುಕ್ತಿ ಹೊಂದಲು ಸಹಾಯ, ಸಹಕಾರ ನೀಡಿದ ಎಲ್ಲರಿಗೂ ಅಭಿನಂದನೆಗಳು.

–**ನಾಗೇಶ್,** ಬಾಂಜಾರು ನಿವಾಸಿ

ಆದಿವಾಸಿಗಳ ಮೂಲಭೂತ ಸೌಲಭ್ಯಗಳಿಗೆ ಅರಣ್ಯ ಇಲಾಖೆ ನಿರಂತರವಾಗಿ ಅಡ್ಡಿ ಪಡಿಸುತ್ತಿದ್ದು ತಾಲೂಕಿನ ಮೂಲನಿವಾಸಿಗಳ ಪ್ರದೇಶಗಳ ಅಭಿವೃದ್ಧಿಯಾಗದಿರಲು ಅವರ ನೀತಿಯೇ ಕಾರಣವಾಗಿದೆ. ಇದೀಗ ಬಾಂಜಾರಿಗೆ ಆ ಪ್ರದೇಶ ವಾಸಿಗಳ ಸತತ ಪ್ರಯತ್ನ ಹಾಗೂ ಖಾಸಗಿ ಎಸ್ಟೇಟ್ ಮಾಲಿಕರ ಸಹಕಾರದೊಂದಿಗೆ ವಿದ್ಯುತ್ ಬಂದಿದೆ. ಇನ್ನು ರಸ್ತೆ ಆಗಬೇಕಾಗಿದ್ದು ಅದಕ್ಕೂ ಅರಣ್ಯ ಇಲಾಖೆ ಅಡ್ಡಿ ಪಡಿಸಬಾರದು. ರಾಜ್ಯ ಸರಕಾರ ಈ ಬಗ್ಗೆ ಗಮನಹರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

–**ಶೇಖರ ಲಾಯಿಲ,** ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಮುಖಂಡ

# ಅರಣ್ಯ ಹಕ್ಕುಗಳ ತಿರಸ್ಕೃತಗೊಂಡ ಅರ್ಜಿಗಳ ಪರಿಶೀಲನೆ: ಅವಧಿ ವಿಸ್ತರಿಸಲು ಆದಿವಾಸಿಗಳ ಆಗ್ರಹ

ಅರಣ್ಯ ಹಕ್ಕುಗಳ ಕಾಯ್ದೆ–2006 ರ ಅಡಿಯಲ್ಲಿ ಭೂಮಿ ಮತ್ತು ಆದಿವಾಸಿ ಸಮುದಾಯಗಳ ಪಾರಂಪರಿಕ ಹಕ್ಕುಗಳ ರಕ್ಷಣೆಯ ಹಿನ್ನೆಲೆಯಲ್ಲಿ ಹಾಕಲಾದ ತಿರಸ್ಕೃತಗೊಂಡ ಅರ್ಜಿಗಳ ಪುನರ್ಪರಿಶೀಲನೆ ಮತ್ತು ಪರಿಗಣನೆಗಾಗಿ ಸುಪ್ರೀಂ ಕೋರ್ಟ್ ನೀಡಿದ ಗಡುವಿನ ಅವಧಿಯನ್ನು ವಿಸ್ತರಿಸಲು ಕರ್ನಾಟಕ ಸರ್ಕಾರ ಮುಂದಾಗಬೇಕೆಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯಮಟ್ಟದ ವಿಸ್ತೃತ ಸಭೆ ಆಗ್ರಹಪಡಿಸಿದೆ.

ಕೇಂದ್ರ ಸರಕಾರದ ಮರು ಮನವಿಯ ಬಳಿಕ ಅರ್ಜಿಗಳ ಪುನರ್ ಪರಿಶೀಲನೆಗೆ ಕೋರ್ಟ್ ಜುಲೈ 24, 2019 ನ್ನು ಕೊನೆಯ ದಿನವಾಗಿ ಗಡುವು ನೀಡಿದೆ. ಇದನ್ನು ಆಧರಿಸಿ ರಾಜ್ಯ ಸರಕಾರ ಜೂನ್ 30 ರೊಳಗೆ ಜಿಲ್ಲಾಡಳಿತಗಳು ಇತ್ಯರ್ಥ ಪಡಿಸಲು ಸೂಚಿಸಿದೆ. ಆದ್ದರಿಂದ ಕರ್ನಾಟಕ ಸರ್ಕಾರ ಪರಿಸ್ಥಿಯ ಗಂಭೀರತೆಯನ್ನು ಅರಿತು ಕಾಳಜಿಯಿಂದ ಈ ಕೂಡಲೇ ಸುಪ್ರೀಂಕೋರ್ಟಿಗೆ ಮನವಿಯನ್ನು ಸಲ್ಲಿಸಿ ಆದಿವಾಸಿಗಳಿಗೆ ನಿಜಕ್ಕೂ ನ್ಯಾಯ ಸಿಗುವಂತೆ ಪ್ರಯತ್ನಿಸಬೇಕೆಂದು ಆದಿವಾಸಿಗಳ ಅಭಿಪ್ರಾಯ ಪಟ್ಟಿತು.

ರಾಜ್ಯ ಮಟ್ಟದ ಸಮಿತಿಯ ಸಭೆಯು ರಾಜ್ಯ ಸಹ ಸಂಚಾಲಕರಾದ ಡಾ. ಕೃಷ್ಣಪ್ಪ ಕೊಂಚಾಡಿಯವರ ಅಧ್ಯಕ್ಷತೆಯಲ್ಲಿ ಇದೆ ಜೂನ್ 23ರಂದು ಮಂಗಳೂರಿನ ಸರ್ಕಾರಿ ನೌಕರರ ಸಭಾಂಗಣದಲ್ಲಿ ಜರುಗಿತು. ವಿವಿಧ ಸಮುದಾಯಗಳನ್ನು ಪ್ರತಿನಿಧಿಸಿ ವಿವಿಧ ಜಿಲ್ಲೆಗಳಿಂದ ಸುಮಾರು 50ಕ್ಕೂ ಅಧಿಕ ಪ್ರಮುಖರು, ಪದಾಧಿಕಾರಿಗಳು ಭಾಗವಹಿಸಿದ್ದರು. ಸಭೆಯ ಚರ್ಚೆಗಾಗಿ ಕರಡು ಟಿಪ್ಪಣಿಯನ್ನು ರಾಜ್ಯ ಸಹ ಸಂಚಾಲಕರು ಹಾಗೂ ಕೇಂದ್ರ ಸಮನ್ವಯ ಸಮಿತಿಯ ಸದಸ್ಯರಾದ ಎಸ್.ವೈ ಗುರುಶಾಂತ್ ರವರು ಮಂಡಿಸಿದರು. ಸಂಚಾಲಕರಾದ ವೈ.ಕೆ. ಗಣೇಶ್ ಅವರು ಚರ್ಚೆಗೆ ಚಾಲನೆ ನೀಡಿದರು.

ದೇಶದ ಸುಮಾರು 21 ರಾಜ್ಯಗಳಿಂದ 11.27 ಲಕ್ಷ ಅರ್ಜಿಗಳು ತಿರಸ್ಕೃತಗೊಂಡಿವೆ. ರಾಜ್ಯದಲ್ಲಿ ಒಟ್ಟು 2,14,710 ಇದ್ದು ಇದರಲ್ಲಿ ಆದಿವಾಸಿಗಳದ್ದು ಸುಮಾರು 42000 ಸಂಖ್ಯೆಯಲ್ಲಿವೆ. ಆದಿವಾಸಿಗಳ ಮತ್ತು ಅರಣ್ಯವಾಸಿಗಳ ಭವಿಷ್ಯವನ್ನು ಬಾಧಿಸುವ ಪ್ರಶ್ನೆಯೂ ಇದಾಗಿದೆ. ಆಡಳಿತ ವ್ಯವಸ್ಥೆಯು ಅವುಗಳ ಪುನರ್ಪರಿಶೀಲನೆಯ ಕಾರ್ಯವನ್ನು ಇನ್ನೂ ಸಮಗ್ರವಾಗಿ ಕೈಗೊಳ್ಳಲಾಗಿಲ್ಲ. ವಿಷಯದ ಗಂಭೀರತೆಯೂ ಜನಸಾಮಾನ್ಯರಿಗೆ ತಿಳಿದಿಲ್ಲ. ಅರಣ್ಯ ಹಕ್ಕುಗಳ ಕಾಯ್ದೆ ಆಧಾರದಲ್ಲಿ ಅರ್ಜಿ ಹಾಕದಿರುವ ಅವಕಾಶ ವಂಚಿತರು ಸಾವಿರಾರು ಸಂಖ್ಯೆಯಲ್ಲಿ ಇದ್ದಾರೆ. ಹೀಗಾಗಿ ತಿರಸ್ಕೃತಗೊಂಡ ಅರ್ಜಿಗಳನ್ನು ಪುನರ್ ಪರಿಶೀಲಿಸುವ ಹಾಗೂ ಹೊಸದಾಗಿ ಅರ್ಹರು ಅರ್ಜಿ ಹಾಕುವ ಪ್ರಕ್ರಿಯೆ ಸಮರೋಪಾದಿಯಲ್ಲಿ ಆರಂಭಗೊಳ್ಳಬೇಕಾಗಿದೆ. ದುರಂತವೆಂದರೆ, ಎಲ್ಲಕ್ಕೂ ಮೂಲವಾಗಿರುವ ಅರಣ್ಯ ಹಕ್ಕುಗಳ ಸಮಿತಿ–ಗ್ರಾಮ ಸಮಿತಿಗಳು ಅನೇಕ ಕಡೆ ರಚನೆಯೇ ಆಗಿಲ್ಲ. ಇಂತಹ ಕಟು ವಾಸ್ತವಗಳ ಸಾವಿರಾರು ಪ್ರಕರಣಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಗಳು ಕೋರ್ಟ್ ವಿಧಿಸಿರುವ ಗಡುವನ್ನು ವಿಸ್ತರಿಸುವಂತೆ ಸುಪ್ರೀಂಕೋರ್ಟಿಗೆ ಮನವಿ ಮಾಡುವುದು ಅತ್ಯಂತ ತುರ್ತು ಅಗತ್ಯವಾಗಿದೆ. ಸರಕಾರದ ಇಲಾಖೆಗಳು ಲಕ್ಷಾಂತರ ಕುಟುಂಬಗಳ ಜೀವನ್ಮರಣದ ಪ್ರಶ್ನೆಯನ್ನು ಕಾಳಜಿಯ ಹೊಣೆಗಾರಿಕೆ ಮತ್ತು ಮಾನವೀಯತೆ ಆಧಾರದಲ್ಲಿ ನೋಡಬೇಕು.

ಈ ದೆಸೆಯಲ್ಲಿ ವಂಚಿತ ಸಮುದಾಯಗಳಿಗೆ

**ಪುಟ 14 ಕ್ಕೆ**

## ಶುಭಾಷಯಗಳು

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರೂ, ಉಡುಪಿ ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳೂ ಆಗಿರುವ ಸಂಗಾತಿ ಬಾಲಕೃಷ್ಣ ಶೆಟ್ಟಿಯವರಿಗೆ ಮೊಮ್ಮಗಳು ನಿಶಾನ್ವಿ ಹುಟ್ಟಿದ ಸವಿನೆನಪಿನಲ್ಲಿ 'ಜನಶಕ್ತಿ' ವಾರಪತ್ರಿಕೆಗೆ ರೂ. 10,000 ದೇಣಿಗೆ ನೀಡಿದ್ದಾರೆ. ಪುಟಾಣಿ ನಿಶಾನ್ವಿಗೆ ಜನಶಕ್ತಿ ಬಳಗದ ಶುಭಾಶಯಗಳು.

**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**